ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

ಬುಧವಾರ, ಅಕ್ಟೋಬರ್ 11, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 149 RNI : 27369/75

janathavani@mac.com
www.janathavani.com
08192 254736 91642 99999

## ಜಾಲತಾಣಗಳ ವಿಡಿಯೋಗಳಿಂದ ಮಾನಸಿಕ ಒತ್ತಡ

### ಸಾಮಾಜಿಕ ಜಾಲತಾಣಗಳ ಬಳಕೆಯ ವಿಧಾನ ಅರಿತುಕೊಂಡರೆ ಲಾಭ ಎಂದ ಅಧ್ಯಯನ

ತೈನಾನ್ (ತೈವಾನ್), ಅ. 10 - ನಮ್ಮ ನೆಚ್ಚಿನ ಧಾರಾವಾಹಿಯ ಒಂದು ಕಂತನ್ನು ಟಿ.ವಿ.ಯಲ್ಲಿ ನೋಡಲು ಒಂದು ದಿನ ಇಲ್ಲವೇ ಒಂದು ವಾರ ಕಾಯುವ ದಿನಗಳೂ ಇದ್ದವು. ಈಗೆಲ್ಲ ಮೊಬೈಲ್‌ನಲ್ಲಿ ಒಂದರ ಹಿಂದೆ ಒಂದರಂತೆ ಎಪಿಸೋಡ್‌ಗಳನ್ನು ಅನಂತವಾಗಿ ನೋಡುವ ಕಾಲ ಬಂದಿದೆ. ಆದರೆ, ಇದರಿಂದ ವಿದ್ಯಾರ್ಥಿಗಳ ಮೇಲೆ ಆಗುವ ಪರಿಣಾಮ ಏನು?

ಸಾಮಾಜಿಕ ಜಾಲತಾಣಗಳಲ್ಲಿ ಬರುವ ವಿಡಿಯೋಗಳನ್ನು ಗಂಟೆಗಟ್ಟಲೆ ನೋಡುವ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಖಿನ್ನತೆಯಿಂದ ಹಿಡಿದು ಸ್ಥೈರ್ಯ ಕಳೆದುಕೊಳ್ಳುವವರೆಗೆ, ಕೆಲವರು ಸ್ಮಾರ್ಟ್‌ಫೋನ್ ಕಿತ್ತುಕೊಂಡರೆ, ನಮ್ಮ ಗತಿ ಏನು ಎಂದು ಭೀತಿಗೊಳ್ಳುವವರೆಗೂ ಪರಿಸ್ಥಿತಿ ತಲುಪಿದೆ.

ಜಾಲತಾಣಗಳಿಂದ ಕೇವಲ ಕೆಟ್ಟ ಪರಿಣಾಮಗಳಾಗುತ್ತವೆ ಎಂದೇನೂ ಇಲ್ಲ. ಆದರೆ, ಸಾಮಾಜಿಕ



ಜಾಲತಾಣದ ವ್ಯಸನಕ್ಕೆ ಸಿಲುಕಿದಾಗ ನೆರವಿನ ಅಗತ್ಯವಿದೆ ಎಂದು ಅಧ್ಯಯನವೊಂದು ತಿಳಿಸಿದೆ.

ಚೀನಾ, ತೈವಾನ್ ಹಾಗೂ ಮಲೇಷಿಯಾದ ವಿಶ್ವವಿದ್ಯಾಲಯಗಳ 622 ವಿದ್ಯಾರ್ಥಿಗಳ ಆನ್‌ಲೈನ್ ಸಮೀಕ್ಷೆನಡೆಸಿ ಈ ವರದಿ ರೂಪಿಸಲಾಗಿದೆ. ಸ್ಮಾರ್ಟ್‌ಫೋನ್ ಹಾಗೂ ಸಾಮಾಜಿಕ ಜಾಲತಾಣ ಅತಿಯಾಗಿ ಬಳಸುವವರಲ್ಲಿ ಮಾನಸಿಕ ಆರೋಗ್ಯ ಸಮಸ್ಯೆ ಉಂಟಾಗುವುದು ಕಂಡು ಬಂದಿದೆ ಎಂದು ತೈವಾನ್‌ನ ನ್ಯಾಷನಲ್ ಚೆಂಗ್ ಕುಂಗ್ ವಿಶ್ವವಿದ್ಯಾಲಯದ ಚುಂಗ್ - ಯಿಂಗ್ ಲಿನ್ ತಿಳಿಸಿದ್ದಾರೆ.

ದಿನಕ್ಕೆ ಸರಾಸರಿ 4.8 ಗಂಟೆ ಕಾಲ ಸಾಮಾಜಿಕ ಜಾಲತಾಣ ಬಳಸುವ ವಿದ್ಯಾರ್ಥಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಇವರಲ್ಲಿ ಶೇ.40ರಷ್ಟು ಜನರು ತಾವು ಸಾಮಾಜಿಕ ಜಾಲತಾಣಗಳ ವ್ಯಸನಕ್ಕೆ ಸಿಲುಕುವ ಅಪಾಯದಲ್ಲಿರುವುದಾಗಿ ಹೇಳಿದ್ದರು.

ಸಾಮಾಜಿಕ ಜಾಲತಾಣಗಳನ್ನು ಅತಿ ಹೆಚ್ಚು ಬಳಸುವ ವಿದ್ಯಾರ್ಥಿಗಳು ಖಿನ್ನತೆ, ಉದ್ವಿಗ್ನತೆ ಹಾಗೂ ಒತ್ತಡಕ್ಕೆ ಸಿಲುಕುವ ಸಾಧ್ಯತೆ ಹೆಚ್ಚಾಗಿದೆ ಎಂಬುದು ಮಲೇಷಿಯಾದ ವಿಶ್ವವಿದ್ಯಾನಿಲಯಗಳ 380 ವಿದ್ಯಾರ್ಥಿಗಳ ಅಧ್ಯಯನದ ಎರಡನೇ ವರದಿ ತಿಳಿಸಿದೆ.

ಪ್ರತಿದಿನ 4.5 ಗಂಟೆ ಕಾಲ ಸಾಮಾಜಿಕ ಜಾಲತಾಣ ಬಳಸುವ ವಿದ್ಯಾರ್ಥಿಗಳ ಅಧ್ಯಯನ ನಡೆಸಲಾಗಿತ್ತು. ಇವರಲ್ಲಿ ಶೇ.33ರಷ್ಟು ಜನ ಸಾಮಾಜಿಕ ಜಾಲತಾಣ ವ್ಯಸನದ ಅಪಾಯದಲ್ಲಿರುವುದಾಗಿ ಹೇಳಿದ್ದರು.

ಯುವಕರು ಹಾಗೂ ಹದಿಹರೆಯದವರು ಅತಿ ಹೆಚ್ಚಾಗಿ ಸಾಮಾಜಿಕ ಜಾಲತಾಣಗಳನ್ನು (2ನೇ ಪುಟಕ್ಕೆ)

### ಜಾಲತಾಣ ಬಳಕೆಗೆ ಇದೆ ಅಳತೆಗೋಲು

**ಸಾಮಾಜಿಕ ಜಾಲತಾಣದ ವ್ಯಸನ ಈಗ ಯಾವ ಹಂತದಲ್ಲಿದೆ ಎಂಬುದನ್ನು ನಾವೇ ತಿಳಿದುಕೊಳ್ಳಬಹುದು. ಇದಕ್ಕಾಗಿ ಬರ್ಗೆನ್ ಸೋಷಿಯಲ್ ಮೀಡಿಯಾ ಅಡಿಕ್ಷನ್ ಸ್ಕೇಲ್ (Bergen social media addiction scale ) ನೆರವಾಗುತ್ತಿದೆ. ಸರ್ಕಾರಗಳೂ ಸಹ ಜನರು ಸಾಮಾಜಿಕ ಜಾಲತಾಣಗಳನ್ನು ಯಾವ ರೀತಿ ಬಳಸುತ್ತಿದ್ದಾರೆ ಎಂಬುದರ ಬಗ್ಗೆ ತಾವೇ ತಿಳಿದುಕೊಳ್ಳಲು ನೆರವು ನೀಡುವ ಅಗತ್ಯವಿದೆ ಎಂದು ಅಧ್ಯಯನ ಹೇಳಿದೆ.**

## ಗಾಜಾದ ರಿಮಲ್ ಪ್ರದೇಶ ನೆಲಸಮ



### 1,500 ಉಗ್ರರು ಹತ ಎಂದು ಇಸ್ರೇಲ್ ಸೈನ್ಯದ ಹೇಳಿಕೆ

ಜೆರುಸಲೇಂ, ಅ. 10 – ಇಸ್ರೇಲ್ ಸಮರ ವಿಮಾನಗಳು ಗಾಜಾ ಪಟ್ಟಿಯ ಪ್ರದೇಶದ ಮೇಲೆ ದಾಳಿ ನಡೆಸಿವೆ. ಹಲವು ಕಟ್ಟಡಗಳು ನೆಲಸಮಗೊಂಡಿವೆ. ಗಾಜಾ ಪಟ್ಟಿಯನ್ನು ಇಸ್ರೇಲ್ ಬಂದ್ ಮಾಡಿದ್ದು, ಜನರು ಸುರಕ್ಷತೆಗಾಗಿ ಪರದಾಡುವಂತಾಗಿದೆ.

ಹಮಾಸ್ ಉಗ್ರರು ಗಾಜಾ ಪಟ್ಟಿ ಕಡೆಯಿಂದ ಇಸ್ರೇಲ್ ಮೇಲೆ ಭೀಕರ ದಾಳಿ ನಡೆಸಿದ್ದರು. ಈ ದಾಳಿಗೆ ಮುಂದಿನ ಪೀಳಿಗೆಗಳು ನೆನಪಿಟ್ಟುಕೊಳ್ಳುವಂತಹ ಉತ್ತರ ನೀಡುವುದಾಗಿ ಇಸ್ರೇಲ್ ಘೋಷಿಸಿತ್ತು.

ನಂತರದಲ್ಲಿ ಗಾಜಾ ಪಟ್ಟಿಗೆ ಆಹಾರ, ಇಂಧನ ಹಾಗೂ ಔಷಧಗಳ ಪೂರೈಕೆಯನ್ನು ಇಸ್ರೇಲ್ ನಿಲ್ಲಿಸಿದೆ. ಈಜಿಪ್ಟ್ ಕಡೆಯಿಂದ ಮಾತ್ರ ಸರಕುಗಳ ಪೂರೈಕೆಗೆ ಅವಕಾಶ ಇತ್ತು. ಆದರೆ, ಗಡಿ ಬಳಿ ವೈಮಾನಿಕ ದಾಳಿ ನಡೆಸಿದ ನಂತರ ಆ ಮಾರ್ಗವೂ ಬಂದ್ ಆಗಿದೆ.

ಸಂಘರ್ಷ ಆರಂಭವಾದ ನಂತರ ಎರಡೂ ಕಡೆಯ 1,800 ಜನ ಸಾವನ್ನಪ್ಪಿದ್ದಾರೆ. ಹಮಾಸ್ (4ನೇ ಪುಟಕ್ಕೆ)

## ನವರಾತ್ರಿಗೆ ಮುಂಚೆ ಕತ್ತಲೆ ಭಾಗ್ಯ

### ಜನವರಿಗೆ ಕಗ್ಗತ್ತಲ ಕರ್ನಾಟಕ ಗ್ಯಾರಂಟಿ : ಕುಮಾರಸ್ವಾಮಿ ತರಾಟೆ

ಬೆಂಗಳೂರು, ಅ.10- ನವರಾತ್ರಿಗೆ ಮುನ್ನ ರಾಜ್ಯದ ಜನರಿಗೆ ಕತ್ತಲೆ ಭಾಗ್ಯ ಖಾತರಿಪಡಿಸಿರುವ ರಾಜ್ಯ ಕಾಂಗ್ರೆಸ್ ಸರ್ಕಾರ, ಹೊಸ ವರ್ಷಕ್ಕೆ ಅದನ್ನು ಜಾರಿ ಮಾಡಲು ಹುನ್ನಾರ ನಡೆಸಿದೆ. ಇದು ಆರನೇ ಗ್ಯಾರಂಟಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಕಿಡಿ ಕಾರಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಸರ್ಕಾರದ ದೂರದೃಷ್ಟಿಯ ಕೊರತೆ ಹಾಗೂ ನಿರ್ವಹಣಾ ವೈಫಲ್ಯದಿಂದ ಕರ್ನಾಟಕವನ್ನು ಇತಿಹಾಸದಲ್ಲಿ ಹಿಂದೆಂದೂ ಕಂಡೂ ಕೇಳರಿಯದ ವಿದ್ಯುತ್ ಕ್ಷಾಮಕ್ಕೆ ದೂಡುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಡಿಸೆಂಬರ್ ತಿಂಗಳ ಹೊತ್ತಿಗೆ ಕರ್ನಾಟಕ ಈ ಕತ್ತಲೆ ಭಾಗ್ಯದ ಕೂಪಕ್ಕೆ ಬೀಳುವುದು ಖಚಿತ. ಅಂದರೆ 2024ರ ಹೊಸ ವರ್ಷಕ್ಕೆ ತಾನು ಕೊಟ್ಟ ಗೃಹಜ್ಯೋತಿಗೆ ಎಳ್ಳುನೀರು ಬಿಟ್ಟು ಕಗ್ಗತ್ತಲ ಕರ್ನಾಟಕದ ಉದಯ ಮಾಡಿಸುವುದು ಗ್ಯಾರಂಟಿ ಎಂದೂ ಅವರು ಹೇಳಿದ್ದಾರೆ.

ಸರ್ಕಾರ ರಾಜ್ಯದ ಉದ್ದಗಲಕ್ಕೂ ಅನಧಿಕೃತ ಲೋಡ್ ಶೆಡ್ಡಿಂಗ್ ಹೇರಿ ದಿನಕ್ಕೆ 2 ಗಂಟೆ ವಿದ್ಯುತ್ತಿಗೂ ದಿಕ್ಕಿಲ್ಲದ ದುಸ್ಥಿತಿ ನಿರ್ಮಾಣ ಮಾಡಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ವಿದ್ಯುತ್ ಅಭಾವದಿಂದ ಬೆಳೆಗಳು ಒಣಗುತ್ತಿವೆ. ನಾಲೆಗಳಲ್ಲೂ ನೀರಿಲ್ಲ, ಬೋರ್ ವೆಲ್ ಗಳಿಂದ ಪಂಪ್ ಮಾಡಲು ವಿದ್ಯುತ್ತೂ ಇಲ್ಲ. ಮೊದಲೇ ಕಷ್ಟದಲ್ಲಿರುವ ರೈತನ ಬೆನ್ನಿನ ಮೇಲೆ ಬರೆಯ ಮೇಲೆ ಬರೆ ಎಳೆಯುತ್ತದೆ ಸರ್ಕಾರ ಎಂದವರು ಟೀಕಿಸಿದರು.

ಜಲ, ಪವನ, ಸೌರ ವಿದ್ಯುತ್ ಉತ್ಪಾದನೆ ಕುಸಿತವಾಗಿದೆ. ಇದು ದೂರದೃಷ್ಟಿಯ ಕೊರತೆ ಹಾಗೂ ನಿರ್ವಹಣೆಯ ವೈಫಲ್ಯ ಎಂದು ಕುಮಾರಸ್ವಾಮಿ ಹರಿಹಾಯ್ದಿದ್ದಾರೆ.

ರಾಜ್ಯದ ಒಟ್ಟಾರೆ ಬೇಡಿಕೆಯಲ್ಲಿ ಶೇ.20ರಷ್ಟು ವಿದ್ಯುತ್ತನ್ನು ಸರ್ಕಾರ ಹೊರಗಿನಿಂದಲೇ ಪಡೆಯುತ್ತಿದೆ. ಆದರೆ, ವಿದ್ಯುತ್ ಸಾಲ ನೀಡುವ ಸ್ಥಿತಿಯಲ್ಲಿ ಇತರೆ ರಾಜ್ಯಗಳೂ ಇಲ್ಲ. ಹಾಗಾದರೆ ಮುಂದೇನು? ಸಂಬಂಧಪಟ್ಟ ಸಚಿವರು ಮೌನವ್ರತ ಮಾಡುತ್ತಿದ್ದಾರೆಯೇ? ಎಂದು ಇಂಧನ ಸಚಿವರನ್ನು ಅವರು ತರಾಟೆಗೆ ತೆಗೆದುಕೊಂಡಿದ್ದಾರೆ.

## ಸಮಾರಂಭಗಳಲ್ಲಿ ಪಟಾಕಿ ಸಿಡಿಸುವುದಕ್ಕೆ ನಿಷೇಧ



### ಪಟಾಕಿ ಪರವಾನಗಿ ಬಗ್ಗೆ ಕಟ್ಟುನಿಟ್ಟಿನ ಕ್ರಮ : ಸಿಎಂ

ಬೆಂಗಳೂರು, ಅ.10- ರಾಜ್ಯದಲ್ಲಿ ಪಟಾಕಿ ನಿಷೇಧವಿಲ್ಲ. ಆದರೆ, ಮದುವೆ, ರಾಜಕೀಯ ಹಾಗೂ ಇತರೆ ಸಮಾರಂಭಗಳಲ್ಲಿ ಪಟಾಕಿ ಸಿಡಿಸುವುದಕ್ಕೆ ನಿಷೇಧ ಹೇರಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸೂಚನೆ ಉಲ್ಲಂಘಿಸಿದರೆ ಕಾರ್ಯಕ್ರಮ ಆಯೋಜಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಪ್ರತಿಯೊಂದು ಪಟಾಕಿ ಲೈಸೆನ್ಸ್‌ದಾರರ ಸ್ಥಳ ಪರಿಶೀಲನೆ ನಡೆಸಿ, ಲೋಪಗಳಿದ್ದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಕಟ್ಟಾದೇಶ ಮಾಡಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಅತ್ತಿಬೆಲೆ ಪಟಾಕಿ ದುರಂತದ ಹಿನ್ನೆಲೆಯಲ್ಲಿ ನಡೆಸಿದ ಉನ್ನತ ಮಟ್ಟದ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇನ್ನು ಮುಂದೆ ಪ್ರತಿ ವರ್ಷ ಪರವಾನಗಿ ನವೀಕರಣವಾಗಬೇಕು ಎಂದು ಹೇಳಿದರು.

ನಿಗದಿತ ಮಾನದಂಡ ಪೂರೈಸದಿದ್ದರೂ, ತಪಾಸಣಾ ವರದಿ ನೀಡಿ ಶಿಫಾರಸ್ಸು ಮಾಡಿದ ತಹಶೀಲ್ದಾರ್, ಇನ್ಸ್‌ಪೆಕ್ಟರ್ ಮತ್ತು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಅಮಾನತ್ತಿಗೆ ನಿರ್ದೇಶನ ನೀಡಿದರು.

ಎಕ್ಸ್‌ಪ್ಲೋಸಿವ್ ಆಕ್ಟ್ ನಲ್ಲಿ ಲೈಸೆನ್ಸ್ ಕೊಡುವಾಗ ನೀವು ಎಚ್ಚರಿಕೆ ವಹಿಸಬೇಕು. ಹದಿನಾಲ್ಕು ಜನರ ಜೀವಕ್ಕೆ ಯಾರು ಹೊಣೆಗಾರರು. ಕಾಯ್ದೆ ಓದಿದ್ದೀರಾ? ಅವರು ಅದರಲ್ಲಿರುವ ಎಲ್ಲ ಮಾನದಂಡಗಳನ್ನು ಪೂರೈಸಿದ್ದಾರೆಯೇ ಎಂದು ನೋಡಬೇಕು. ತಳಹಂತದ ಅಧಿಕಾರಿಗಳು ಸಲ್ಲಿಸಿದ ವರದಿ ಸರಿಯಿದೆಯೇ ಎಂಬುದನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸಬೇಕು ಎಂದು ತಾಕೀತು ಮಾಡಿದರು.

ಅಲ್ಲಿರುವ ಎಲ್ಲ ಮಳಿಗೆಗಳ ಸುರಕ್ಷತೆಯನ್ನೂ ತಪಾಸಣೆ ಮಾಡಲು ಸೂಚಿಸಿದರು. ಇನ್ನು ಮುಂದೆ ಲೈಸೆನ್ಸ್ ನೀಡುವಾಗ ಜಿಲ್ಲಾಧಿಕಾರಿಗಳು, ಪೊಲೀಸ್ ಅಧೀಕ್ಷಕರು ಹಾಗೂ ಅಗ್ನಿಶಾಮಕ ದಳದ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಬೇಕು ಎಂದು ಸೂಚನೆ (4ನೇ ಪುಟಕ್ಕೆ)

## ನಿರುದ್ಯೋಗ ದರ ಆರು ವರ್ಷಗಳಲ್ಲೇ ಕಡಿಮೆ

ನವದೆಹಲಿ, ಅ. 10 – ಕಳೆದ ಜುಲೈ 2022ರಿಂದ ಜೂನ್ 2023ರ ಅವಧಿಯಲ್ಲಿ ಭಾರತದಲ್ಲಿ ನಿರುದ್ಯೋಗ ದರ ಕಳೆದ ಆರು ವರ್ಷಗಳಲ್ಲೇ ಅತಿ ಕಡಿಮೆ ಶೇ.3.2ರಷ್ಟಿತ್ತು ಎಂದು ಎನ್.ಎಸ್.ಎಸ್.ಓ. ಸಮೀಕ್ಷೆಯ ವರದಿ ತಿಳಿಸಿದೆ.

2021-22ರ ಅವಧಿಯಲ್ಲಿ 15 ವರ್ಷದ ಮೇಲಿನವರಲ್ಲಿ ನಿರುದ್ಯೋಗದ ಪ್ರಮಾಣ ಶೇ.4.1ರಷ್ಟಿತ್ತು. ಅದು 2022-23ರಲ್ಲಿ ಶೇ.3.2ಕ್ಕೆ ಇಳಿಕೆಯಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

## ಬ್ಯಾಂಕ್ ಆಫ್ ಬರೋಡಾ ಆಪ್‌ಗೆ ಗ್ರಾಹಕರನ್ನು ಸೇರಿಸಿಕೊಳ್ಳದಂತೆ ತಡೆ

ಮುಂಬೈ, ಅ. 10 – ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ, ತನ್ನ ಮೊಬೈಲ್ ಆಪ್‌ಗೆ ಹೊಸ ಗ್ರಾಹಕರನ್ನು ಸೇರಿಸಿಕೊಳ್ಳದಂತೆ ರಿಸರ್ವ್ ಬ್ಯಾಂಕ್ ತಡೆ ಹಾಕಿದೆ.

ಆಪ್‌ನಲ್ಲಿನ ಕೆಲ ಅಂಶಗಳಿಗೆ ಸಂಬಂಧಿಸಿದಂತೆ ಕಳವಳ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ರಿಸರ್ವ್ ಬ್ಯಾಂಕ್ ಆಕ್ಷೇಪಿಸಿರುವ ವಿಷಯಗಳ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿರುವುದಾಗಿ ಬ್ಯಾಂಕ್ ಆಫ್ ಬರೋಡ ತಿಳಿಸಿದೆ.

## ಮಾದಕ ಮಟ್ಟ ಹಾಕಿ, ಹಬ್ಬದಂತೆ ಟ್ರಾಫಿಕ್ ದಂಡ ವಸೂಲಿ ಮಾಡಿ

### 1.10 ಲಕ್ಷ ಚಲನ್ ಬಾಕಿ ವಸೂಲಿ ಅಭಿಯಾನಕ್ಕೆ ಎಡಿಜಿಪಿ ಅಲೋಕ್ ಕುಮಾರ್ ಸೂಚನೆ

ದಾವಣಗೆರೆ, ಅ. 10 – ಜಿಲ್ಲೆಯಲ್ಲಿ ಮಾದಕ ವ್ಯಸನವನ್ನು ಬೇರು ಸಮೇತ ಮಟ್ಟ ಹಾಕಬೇಕು ಹಾಗೂ ಸಂಚಾರಿ ನಿಯಮ ಉಲ್ಲಂಘನೆಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ತರಬೇತಿ) ಅಲೋಕ್ ಕುಮಾರ್ ಸೂಚನೆ ನೀಡಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಗಾಂಜಾ ಮಾರಾಟ ವ್ಯವಸ್ಥಿತವಾಗಿ ನಡೆಯುತ್ತಿದೆ ಎಂಬ ದೂರಿನ ಬಗ್ಗೆ ಪ್ರತಿಕ್ರಿಯಿಸಿದ ಅಲೋಕ್ ಕುಮಾರ್, ರಾಜ್ಯ ಸರ್ಕಾರ ಹಾಗೂ ಪೊಲೀಸ್ ಇಲಾಖೆಯ ಮಟ್ಟದಲ್ಲಿ ಈ ವಿಷಯದ ಬಗ್ಗೆ ಗಂಭೀರ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದರು.

ಶಾಲೆಗಳು, ವೈದ್ಯಕೀಯ, ಇಂಜಿನಿಯರಿಂಗ್, ನರ್ಸಿಂಗ್ ಕಾಲೇಜುಗಳಲ್ಲಿ ಕೆಲವು ತಾಣಗಳು ಮಾದಕ ಬಳಕೆಯ ಸಂಘಟಿತ ಪ್ರದೇಶಗಳಂತಾಗಿವೆ. ಎಷ್ಟೇ ಕಷ್ಟವಾದರೂ ಮಾದಕವನ್ನು ಹತೋಟಿಗೆ ತರಲೇಬೇಕು ಎಂದವರು ಹೇಳಿದರು.

ನಗರದಾದ್ಯಂತ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಹಾಕಲಾಗಿದೆ. ಆದರೆ, ಜನರು (3ನೇ ಪುಟಕ್ಕೆ)



### ಉತ್ತರದಲ್ಲಿ ಹೆಲ್ಮೆಟ್ ದಂಡ, ದಕ್ಷಿಣದಲ್ಲೇಕೆ ಕ್ರಮವಿಲ್ಲ ?

**ದಾವಣಗೆರೆ ಉತ್ತರ ಸಂಚಾರಿ ವಲಯ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಹೆಲ್ಮೆಟ್ ಹಾಕದಿದ್ದರೆ ದಂಡ ವಿಧಿಸಲಾಗುತ್ತದೆ. ಆದರೆ, ದಕ್ಷಿಣ ವಲಯದಲ್ಲಿ ಹೆಲ್ಮೆಟ್ ರಹಿತ ಚಾಲನೆ, ತ್ರಿಬ್ಬಲ್ ರೈಡ್, ಕರ್ಕಶ ಹಾರ್ನ್‌ಗಳಿಗೂ ದಂಡ ಹಾಕುತ್ತಿಲ್ಲ ಎಂದು ತಂಜೀಮುಲ್ ಮುಸ್ಲಿಮಿನ್ ಫಂಡ್ ಅಸೋಸಿಯೇಷನ್ ಸದಸ್ಯ ಮೊಹಮ್ಮದ್ ಜಬೀವುಲ್ಲಾ ದೂರಿದರು. ಈ ಬಗ್ಗೆ ಮಾತನಾಡಿದ ಎಡಿಜಿಪಿ ಅಲೋಕ್ ಕುಮಾರ್, ಎಲ್ಲೇ ನಿಯಮಗಳ ಉಲ್ಲಂಘನೆಯಾದರೂ ದಂಡ ವಸೂಲಿ ಮಾಡಬೇಕು. ಕರ್ಕಶ ವಾಹನಗಳ ವಿರುದ್ಧ ಐ.ಎಂ.ವಿ.ಯ ಸೆಕ್ಷನ್ 177 ರನ್ವಯ ಕ್ರಮ ತೆಗೆದುಕೊಳ್ಳಬೇಕು ಎಂದರು.**

### ಮರಳುಗಾಡಲ್ಲೇ ಹೆಲ್ಮೆಟ್ ಧರಿಸುತ್ತಾರೆ, ಇಲ್ಲೇಕೆ ಬೇಡ?

**ದಾವಣಗೆರೆಯಲ್ಲಿ ಬಿಸಿಲು ಹೆಚ್ಚಾಗಿದೆ. ಈ ಕಾರಣಕ್ಕಾಗಿ ಪೂರ್ಣ ಹೆಲ್ಮೆಟ್‌ಗೆ ವಿನಾಯಿತಿ ನೀಡಿ ಹಾಫ್ ಹೆಲ್ಮೆಟ್‌ಗೆ ಅನುಮತಿ ನೀಡಬೇಕು ಎಂಬ ಬೇಡಿಕೆಯನ್ನು ತಳ್ಳಿ ಹಾಕಿದ ಎಡಿಜಿಪಿ ಅಲೋಕ್ ಕುಮಾರ್, ರಾಜಸ್ಥಾನದಂತಹ ಮರಳುಗಾಡಿನ ರಾಜ್ಯದಲ್ಲೇ ಹೆಲ್ಮೆಟ್ ಧರಿಸುವಾಗ ದಾವಣಗೆರೆಯಲ್ಲಿ ತೊಂದರೆಯಾಗಬಾರದು ಎಂದರು. ತೇವಾಂಶ ಹೆಚ್ಚಾಗಿರುವ ಚೆನ್ನೈ ನಗರದಲ್ಲಿ ಶೇ.99ರಷ್ಟು ಜನರು ಹೆಲ್ಮೆಟ್ ನಿಯಮ ಪಾಲಿಸುತ್ತಾರೆ. ಇದು ನಮಗೆ ಮಾದರಿಯಾಗಬೇಕು ಎಂದರು.**

## ಭದ್ರಾ ನೀರು: ಒತ್ತಡ ಹೇರುವಂತೆ ಒತ್ತಾಯ

### ಹರಿಹರ ತಾಲ್ಲೂಕು ರೈತರಿಂದ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಭೇಟಿ



ದಾವಣಗೆರೆ, ಅ. 10 - ಭದ್ರಾ ಜಲಾಶಯದಿಂದ ಬಲದಂಡೆ ನಾಲೆಗೆ ಹರಿಸುತ್ತಿರುವ ನೀರನ್ನು ಆಫ್ ಅಂಡ್ ಆನ್ ಮಾಡದೇ ಸತತವಾಗಿ ನೀರು ಹರಿಸುವಂತೆ ಸಿಎಂ ಹಾಗೂ ಡಿಸಿಎಂ ಮೇಲೆ ಒತ್ತಡ ಹಾಕಿ ಎಂದು ಹರಿಹರ ತಾಲ್ಲೂಕಿನ ರೈತರು ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರನ್ನು ಇಂದು ಭೇಟಿ ಮಾಡಿ ಒತ್ತಾಯಿಸಿದರು.

**ಸತತವಾಗಿ ನೀರು ಹರಿಸುವಂತೆ ಹೇಳುತ್ತೇನೆ : ಎಸ್ಸೆಸ್ಸೆಂ** - ಭದ್ರಾ ಕಾಡಾ ಸಮಿತಿ ಮಾಡಿರುವ ತೀರ್ಮಾನದಂತೆ ಇದೇ ದಿನಾಂಕ 16 ರಿಂದ 25 ರವರೆಗೆ 10 ದಿವಸ ಬಲದಂಡೆ ನಾಲೆಯಲ್ಲಿ ನೀರು ಬಂದ್ ಮಾಡಲಾಗುವುದು. ಅಚ್ಚು ಕಟ್ಟು ಪ್ರದೇಶದಲ್ಲಿ ಭತ್ತದ ಬೆಳೆ ಕಾಳು ಕಟ್ಟುವ ಹಂತದಲ್ಲಿರುವುದರಿಂದ ನೀರಿನ ಅವಶ್ಯಕತೆ ಇರುತ್ತದೆ.


ಈ ಸಂದರ್ಭದಲ್ಲಿ 10 ದಿವಸ ನಾಲೆಯಲ್ಲಿ ನೀರು ಬಂದ್ ಮಾಡುವುದರಿಂದ ಭತ್ತದ ಬೆಳೆಗೆ ತೊಂದರೆ ಆಗಲಿದೆ ಎಂದು ರೈತರು ಸಚಿವ ಮಲ್ಲಿಕಾರ್ಜುನ್ ಅವರಿಗೆ ಮನವರಿಕೆ ಮಾಡಿಕೊಟ್ಟರು. ರೈತರ ಮನವಿಗೆ ಪೂರಕವಾಗಿ ಸ್ಪಂದಿಸಿದ ಸಚಿವರು, ಭದ್ರಾ ಬಲದಂಡೆ ನಾಲೆಯಲ್ಲಿ ಆಫ್ ಅಂಡ್ ಆನ್ ಮಾಡಬೇಡಿ ಎಂದು ಅಧಿಕಾರಿಗಳಗೆ ತಿಳಿಸಿದ್ದೇನೆ. ಆದರೆ ಅವರು ನೀರಾವರಿ ಸಚಿವರು ಮತ್ತು ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರಿಗೆ ತಿಳಿಸಿ ಎಂದಿದ್ದಾರೆ.

ನಾನೂ ಕೂಡಾ ಇವತ್ತು ಬೆಂಗಳೂರಿಗೆ ತೆರಳುತ್ತಿದ್ದು, ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಇಲ್ಲಿನ ಪರಿಸ್ಥಿತಿ ತಿಳಿಸಿ ನಾಲೆಯಲ್ಲಿ ಸತತವಾಗಿ ನೀರು ಹರಿಸುವಂತೆ ಮನವಿ ಮಾಡುತ್ತೇನೆ.

ಶಿವಮೊಗ್ಗ, ಭದ್ರಾವತಿ, (3ನೇ ಪುಟಕ್ಕೆ)

॥ ಶ್ರೀ ಮಾವಿನಹಳ್ಳಿ ಬಸವೇಶ್ವರ ಪ್ರಸನ್ನ ॥

ಗುರು-ಲಿಂಗ-ಜಂಗಮಾರಾಧನೆ ಆಹ್ವಾನ



ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆ, 14ನೇ ಕ್ರಾಸ್ ವಾಸಿ
ಶ್ರೀಮತಿ ಎಸ್.ಎಂ. ಶಿವಲೀಲಾ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 03.10.2023ನೇ ಮಂಗಳವಾರ ಬೆಳಿಗ್ಗೆ 10.10ಕ್ಕೆ ನನ್ನ ಪೂಜ್ಯ ಪತಿಯವರಾದ
ವೇ॥ ಶಾಂತವೀರಪ್ಪ ಮಠದ ಷಡಾಕ್ಷರಯ್ಯನವರು
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಗುರು-ಲಿಂಗ-ಜಂಗಮಾರಾಧನೆ"ಯನ್ನು
ದಿನಾಂಕ : 11.10.2023ನೇ ಬುಧವಾರ ಮಧ್ಯಾಹ್ನ 12.00ಕ್ಕೆ ಮೃತರ ಸ್ವಗೃಹ, "ಶ್ರೀ ಶರಣ ಬಸವೇಶ್ವರ ನಿಲಯ" # 3364/A-14, ಸಿದ್ಧವೀರಪ್ಪ ಬಡಾವಣೆ, 14ನೇ ಕ್ರಾಸ್, ದಾವಣಗೆರೆ ಇಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಶ್ರೀಮತಿ ಎಸ್.ಎಂ. ಶಿವಲೀಲಾ ಮತ್ತು ಮಕ್ಕಳು
ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

# ಹರಿಹರ ಮನೆಗಳ್ಳನ ಬಂಧನ 4.8 ಲಕ್ಷ ರೂ ಮೌಲ್ಯದ ಆಭರಣ ವಶ



ಹರಿಹರ, ಅ.10- ನಗರದ ಜೆ.ಸಿ.ಬಡಾವಣೆಯಲ್ಲಿ ಜರುಗಿದ್ದ ಮನೆಗಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರ ಪೊಲೀಸರು ತುರುವೇಕೆರೆ ವೆಂಕಟೇಶ ಎಂಬಾತನ್ನು ದಸ್ತಗಿರಿ ಮಾಡಿದ್ದು, ಆರೋಪಿತನಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ 4,80,000 ರೂ. ಬೆಲೆಯ 80 ಗ್ರಾಂ ಬಂಗಾರದ ಆಭರಣಗಳನ್ನು ವಶಪಡಿಸಿಕೊಂಡಿರುತ್ತಾರೆ.

ಸದರಿ ಪ್ರಕರಣದ ಪತ್ತೆ ಕಾರ್ಯಕ್ಕೆ ಗ್ರಾಮಾಂತರ ಉಪ-ವಿಭಾಗದ ಪೊಲೀಸ್ ಉಪಾಧೀಕ್ಷಕ ಬಸವರಾಜ ಬಿ.ಎಸ್. ಅವರ ಮಾರ್ಗದರ್ಶನದಲ್ಲಿ ಹರಿಹರ ನಗರ ಠಾಣೆ ಪೊಲೀಸ್ ನಿರೀಕ್ಷಕ ಬಿ. ದೇವಾನಂದ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಲಾಗಿತ್ತು.

ಮನೆಗಳ್ಳತನ ಪ್ರಕರಣದಲ್ಲಿ ಆರೋಪಿತನ ಪತ್ತೆ ಹಾಗೂ ಸ್ವತ್ತನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದ ಅಧಿಕಾರಿಗಳಾದ ಬಿ. ದೇವಾನಂದ, ಪ್ರವೀಣ್ ಕುಮಾರ, ಶ್ರೀಪತಿ ಗಿನ್ನಿ, ಮಂಜುನಾಥ ಕಲ್ಲೇದೇವರು (ಬೆರಳು ಮುದ್ರೆ ಘಟಕ) ಹಾಗೂ ಸಿಬ್ಬಂದಿಯವರಾದ ಮಂಜುನಾಥ ಬಿ.ವಿ, ದೇವರಾಜ್ ಸುರ್ವೆ, ಮಂಜುನಾಥ ಕ್ಯಾತಮ್ಮನವರ, ಹನುಮಂತ ಗೋಪನಾಳ, ಹೇಮಾನಾಯ್ಕ್, ರುದ್ರಸ್ವಾಮಿ, ಸಿದ್ದರಾಜು, ರಾಘವೇಂದ್ರ, ಶಾಂತರಾಜ್, ನಾಗರಾಜ ಕುಂಬಾರ, ಅಖ್ತರ್, ವೀರೇಶ, ಅಡಿವೆಪ್ಪನವರ್ ಮಾರುತಿ ಇವರುಗಳನ್ನೊಳಗೊಂಡ ತಂಡವು ಆರೋಪಿತರನ್ನು ಪತ್ತೆ ಮಾಡಿ ಮಾಲನ್ನು ಅಮಾನತ್ತು ಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಸದರಿ ತಂಡಕ್ಕೆ ಪೊಲೀಸ್ ಅಧೀಕ್ಷಕ ಶ್ರೀಮತಿ ಉಮಾ ಪ್ರಶಾಂತ್ ಮತ್ತು ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಮಗೊಂಡ ಬಿ. ಬಸರಗಿ ಅವರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

# ವಿದ್ಯುತ್ ಸಮಸ್ಯೆ ಬಗೆಹರಿಯದಿದ್ದರೆ ಶಾಸಕರ ಮನೆ ಮುಂದೆ ಪ್ರತಿಭಟನೆ



**ನ್ಯಾಮತಿ ತಾಲ್ಲೂಕು ಘೋಷಣೆಯಾದ ನಂತರ ಮೊದಲನೇ ರೈತ ಸಂಪರ್ಕ ಸಭೆ**

ನ್ಯಾಮತಿ, ಅ.10- ಅರಣ್ಯ ಇಲಾಖೆಯ ಜಾಗವೆಂದು ಗುರುತಿಸಲ್ಪಟ್ಟಿದ್ದರೂ, ಒಂದು ವೇಳೆ ರೈತರು ಉಳುಮೆ ಮಾಡುತ್ತಿದ್ದರೆ, ಅವರನ್ನು ಒಕ್ಕಲೆಬ್ಬಿಸದಂತೆ ಕಂದಾಯ ಸಚಿವರು ಸೂಚನೆ ನೀಡಿದ್ದಾರೆ ಎಂದು ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮಾಹಿತಿ ನೀಡಿದರು.

ಪಟ್ಟಣದ ಬನಶಂಕರಿ ಸಮುದಾಯ ಭವನದಲ್ಲಿ ರೈತ ಸಂಪರ್ಕ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಕಂದಾಯ ಇಲಾಖೆಯ ಸಚಿವ ಕೃಷ್ಣ ಭೈರೇಗೌಡ ಅವರಿಂದ ಮುಂದಿನ ಆದೇಶ ಬರುವವರೆಗೂ ಫಲವನಹಳ್ಳಿ, ಕ್ಯಾತಿನಕೊಪ್ಪ ಸೇರಿದಂತೆ, ಅವಳಿ ತಾಲ್ಲೂಕುಗಳ ಯಾವ ಹಳ್ಳಿಗಳಲ್ಲಿಯೂ ರೈತರನ್ನು ಒಕ್ಕಲೆಬ್ಬಿಸದಂತೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಕುಡಿಯುವ ನೀರಿನ ಸಮಸ್ಯೆ ಎದುರಾದರೆ ಸ್ಥಳೀಯರಿಂದ ಮೋಟಾರ್ ಪಂಪ್‌ಸೆಟ್‌ಗಳನ್ನು ಬಾಡಿಗೆ ಪಡೆದು ಸಮಸ್ಯೆ ಬಗೆಹರಿಸಬೇಕು. ಮೋಟಾರ್ ಪಂಪ್‌ಸೆಟ್‌ಗಳು ಬಾಡಿಗೆಗೆ ಸಿಗದಿದ್ದಲ್ಲಿ, ಟ್ಯಾಂಕರ್‌ಗಳ ಮೂಲಕ ನೀರು ತಲುಪಿಸುವ ವ್ಯವಸ್ಥೆ ಮಾಡಬೇಕೆಂದು ತಾಪಂ ಇಓ ಎಚ್. ವಿ.ರಾಘವೇಂದ್ರ ಅವರಿಗೆ ಸೂಚಿಸಿದರು.

ಬೆಳಗುತ್ತಿಯ 3 ಕೆರೆಗಳನ್ನು ಸರ್ವೆ ಮಾಡಿಸಿ ಟ್ರೆಂಚ್ ಮಾಡಿಕೊಡಬೇಕೆಂದು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿ ವಿಕಾಸ್ ಅವರಿಗೆ ಸೂಚಿಸಿದರು.

ಗೋ ಶಾಲೆಯ ಅವಶ್ಯಕತೆ ಕಂಡುಬಂದರೆ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು. ಇದುವರೆಗೂ ಒಟ್ಟು 28 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, 4 ಮನೆಗಳು ಬಿದ್ದಿದ್ದು ಸಂಬಂಧಪಟ್ಟವರ ಖಾತೆಗೆ ಪರಿಹಾರವನ್ನು ವಿತರಿಸಲಾಗಿದೆ ಎಂದು ತಿಳಿಸಿದರು. ಬರುವ ಶುಕ್ರವಾರ ಬ್ಯಾಂಕ್ ಅಧಿಕಾರಿಗಳ ಸಭೆ ಕರೆದು ಬರಗಾಲ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ಸಾಲ ವಸೂಲಿಗೆ ಮುಂದಾಗದಂತೆ ಕ್ರಮ ವಹಿಸಲಾಗುವುದು ಎಂದು ವಿವರಿಸಿದರು.

ತಹಶೀಲ್ದಾರ್ ಎಚ್.ಬಿ. ಗೋವಿಂದಪ್ಪ ಮಾತನಾಡಿ, ತಾಲ್ಲೂಕಿನ ಎಲ್ಲಾ ಹಳ್ಳಿಗಳಿಗೂ ಶಾಸಕ ಡಿ.ಜಿ.ಶಾಂತನಗೌಡ, ಕೃಷಿ ಮತ್ತು ತೋಟಗಾರಿಕಾ ಇಲಾಖೆಯ ಅಧಿಕಾರಿಗಳ ತಂಡದೊಂದಿಗೆ ವೀಕ್ಷಣೆ ಮಾಡಿ, ಬರಗಾಲದ ಬಗ್ಗೆ ವರದಿ ನೀಡಿದ ಹಿನ್ನೆಲೆಯಲ್ಲಿ ನ್ಯಾಮತಿ ತಾಲ್ಲೂಕು ಬರಗಾಲದ ಪಟ್ಟಿಯಲ್ಲಿ ಸೇರಿದ್ದು, ನಮ್ಮ ವರದಿಯ ಬಗ್ಗೆ ಕಂದಾಯ ಇಲಾಖೆಯ ಸಚಿವರು ರೈತರಿಗೆ ಅನುಕೂಲವಾದ ವರದಿ ನೀಡಿದ್ದಾರೆಂದು ವಿಡಿಯೋ ಕಾನ್ಫರೆನ್ಸ್ ಮೂಲಕ ವರದಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

ತಾಪಂ ಇಓ ಎಚ್.ವಿ.ರಾಘವೇಂದ್ರ ಮಾತನಾಡಿ, ಇ-ಸ್ವತ್ತನ್ನು ನಿಯಮಾನುಸಾರವಾಗಿ ಅರ್ಜಿ ಹಾಕಿದವರಿಗೆ ಸಿಗುವಂತೆ ಎಲ್ಲಾ ಪಿಡಿಓಗಳಿಗೆ ಸೂಚಿಸಲಾಗುವುದು ಎಂದು ಮಾಹಿತಿ ನೀಡಿದರು.

ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಬಿ.ಎಚ್.ಉಮೇಶ್ ಮಾತನಾಡಿ, ಈಗಾಗಲೇ ರೈತರು ಬರಗಾಲದಿಂದ ಆತಂಕಕ್ಕೊಳಗಾಗಿದ್ದು, ಬ್ಯಾಂಕ್‌ಗಳು ಇಂತಹ ವಿಷಮ ಪರಿಸ್ಥಿತಿಯಲ್ಲಿ ರೈತರಿಗೆ ನೀಡಿದ ಸಾಲ ಮರುಪಾವತಿಗೆ ನೋಟಿಸ್ ಜಾರಿ ಮಾಡುತ್ತಿದ್ದು, ನೋಟಿಸ್ ಜಾರಿ ಮಾಡುವುದನ್ನು ಕೂಡಲೇ ಕೈಬಿಡಬೇಕು. ಇದು ಹೀಗೆಯೇ ಮುಂದುವರೆದರೆ ಬ್ಯಾಂಕ್‌ಗಳ ಮುಂದೆ ಉಗ್ರ ಹೋರಾಟ ಮಾಡಲಾಗುವುದು ಎಂದು ಬ್ಯಾಂಕ್ ಅಧಿಕಾರಿಗಳಿಗೆ ಎಚ್ಚರಿಸಿದರು.

ವಿದ್ಯುತ್ ಸಮಸ್ಯೆ ಬಗೆಹರಿಯದಿದ್ದರೆ, ಶಾಸಕರ ಮನೆ ಮುಂದೆ ಅಕ್ಟೋಬರ್ 16 ರ ಸೋಮವಾರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ಹೊನ್ನಾಳಿ ಅಧ್ಯಕ್ಷ ಅರಬಗಟ್ಟೆ ಕೆ.ಸಿ.ಬಸಪ್ಪ ಮಾತನಾಡಿ, 261 ಬರಗಾಲ ಪೀಡಿತ ತಾಲ್ಲೂಕುಗಳ ಎಲ್ಲಾ ಸೊಸೈಟಿಗಳಲ್ಲಿರುವ ರೈತರ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು. ಬೆಳೆ ಪರಿಹಾರವನ್ನು ಎಕರೆಗೆ 25000 ರಂತೆ ನೀಡಬೇಕು ಮತ್ತು ತುರ್ತಾಗಿ ಬೆಳೆ ಪರಿಹಾರ ನೀಡಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ಕುರುವ ಗಣೇಶಪ್ಪ, ಕರಿಬಸಪ್ಪ ಗೌಡ ಅವರು ಮಾತನಾಡಿದರು.

ಸಮಾಜ ಕಲ್ಯಾಣಾಧಿಕಾರಿ ಎಚ್.ಎಲ್. ಉಮಾ, ಬಿಸಿಎಂ ಅಧಿಕಾರಿ ಟಿ.ಎಚ್. ಮೃತ್ಯುಂಜಯಸ್ವಾಮಿ, ಯು.ಟಿ.ಪಿ. ಎಇಇ ಕೆ.ಎಂ.ಮಂಜುನಾಥ್, ಟಿಎಚ್‌ಓ ಡಾ. ಕೆಂಚಪ್ಪ ಆರ್.ಬಂತಿ, ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಗಣೇಶ್ ರಾವ್, ಬೆಸ್ಕಾಂ ಎಇಇ ಬಿ.ಕೆ. ಶ್ರೀನಿವಾಸ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸೋಮ್ಲಾನಾಯ್ಕ್, ಪಿಐ ಎನ್. ರವಿ, ಪಿಎಸ್‌ಐ ಜಯಪ್ಪನಾಯ್ಕ್, ಅರಣ್ಯ ಇಲಾಖೆಯ ಸೈಯದ್ ರಿಜ್ವಾನ್ ಭಾಷಾ, ಲೋಕೋಪಯೋಗಿ ಇಲಾಖೆಯ ಎಸ್. ಕೆ.ಕಣುಮಪ್ಪ, ತೋಟಗಾರಿಕಾ ಇಲಾಖೆಯ ಸಿ.ವೈ. ರಮೇಶ್, ರಾಜಸ್ವ ನಿರೀಕ್ಷಕರಾದ ವೃಷಭೇಂದ್ರಯ್ಯ, ಸಂತೋಷ್, ಶಿರಸ್ತೇದಾರ್ ಕೆಂಚಮ್ಮ, ಗ್ರಾಮ ಆಡಳಿತಾಧಿಕಾರಿಗಳಾದ ರಾಘವೇಂದ್ರ, ಗಣೇಶ್, ವಿಜಯಕುಮಾರ್, ಮಲ್ಲೇಶಪ್ಪ, ಶಿವಕುಮಾರ್, ಮಂಜುನಾಥ್, ಎಫ್.ಡಿ.ಎ. ಸುಧೀರ್, ಧನುಷ್ ಹಾಗೂ ಅವಳಿ ತಾಲ್ಲೂಕುಗಳ ರೈತರು ಉಪಸ್ಥಿತರಿದ್ದರು.

# ನಿರ್ಲಕ್ಷ್ಯದಿಂದಾಗಿ ಕಾಯಿಲೆಗಳಿಗೆ ತುತ್ತಾಗುತ್ತಿರುವ ಜನರು : ಬಸವರಾಜ್



ಮಲೇಬೆನ್ನೂರು, ಅ. 10- ಮುಖದ ಸೌಂದರ್ಯ ಹೆಚ್ಚಿಸುವ ಹಲ್ಲುಗಳನ್ನು ಸ್ವಚ್ಛವಾಗಿ ಮತ್ತು ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು ಎಂದು ಬಾಪೂಜಿ ದಂತ ವೈದ್ಯಕೀಯ ಕಾಲೇಜಿನ ಡಾ. ಕಾವ್ಯ ಹೇಳಿದರು.

ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಲೇಬೆನ್ನೂರು ಲಯನ್ಸ್ ಕ್ಲಬ್ ಮತ್ತು ದಾವಣಗೆರೆಯ ಬಾಪೂಜಿ ದಂತ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ದಂತ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಹಲ್ಲಿನ ಜೊತೆಗೆ ದವಡೆ ಕೂಡಾ ಅಷ್ಟೇ ಮುಖ್ಯವಾಗಿದ್ದು, ಗುಟ್ಕಾ, ತಂಬಾಕು ಸೇರಿದಂತೆ ಇತ್ಯಾದಿಗಳನ್ನು ದುಶ್ಚಟಗಳನ್ನು ತಿಂದಾಗ ಬಾಯಿಯನ್ನು ನೀರಿನಿಂದ ಚೆನ್ನಾಗಿ ಮುಕ್ಕಳಿಸಿ ಎಂದು ತಿಳಿಸಿದ ಡಾ. ಕಾವ್ಯ ಅವರು, ಹಲ್ಲನ್ನು ಬ್ರಶ್‌ನಿಂದ ಯಾವ ರೀತಿ ಉಜ್ಜಬೇಕು ಎಂದು ಪ್ರಾತ್ಯಕ್ಷಿಕೆ ಮೂಲಕ ತೋರಿಸಿಕೊಟ್ಟರು.

ಡಾ. ಮಹಾಲಕ್ಷ್ಮಿ ಮಾತನಾಡಿ, ಗ್ರಾಮೀಣ ಪ್ರದೇಶದ ಜನರು ಆರೋಗ್ಯದ ಜೊತೆಗೆ ಹಲ್ಲುಗಳ ಬಗ್ಗೆಯೂ ಕಾಳಜಿ ವಹಿಸಬೇಕು. ಮಕ್ಕಳು ಈಗಿನಿಂದಲೇ ದಿನಕ್ಕೆ 2 ಬಾರಿ ಬ್ರಷ್ ಮಾಡಿ ಹಲ್ಲು ಹಾಗೂ ಬಾಯಿಯನ್ನು ಚೆನ್ನಾಗಿ ಇಟ್ಟುಕೊಳ್ಳಿ ಎಂದರು.

ಶಿಬಿರವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಲಯನ್ಸ್ ಮಾಜಿ ಗೌರ್ನರ್ ಡಾ. ಟಿ. ಬಸವರಾಜ್ ಮಾತನಾಡಿ, ಇತ್ತೀಚೆಗೆ ಜನರು ನಿರ್ಲಕ್ಷ್ಯದಿಂದಾಗಿ ಕಾಯಿಲೆಗಳಿಗೆ ಹೆಚ್ಚು ತುತ್ತಾಗುತ್ತಿದ್ದು, ಈ ಬಗ್ಗೆ ಪ್ರತಿಯೊಬ್ಬರೂ ಜಾಗ್ರತೆ ವಹಿಸಿ ಆರೋಗ್ಯದ ಬಗ್ಗೆ ನಿಗಾ ವಹಿಸಬೇಕು ಎಂದು ಕರೆ ನೀಡಿದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ ಮಾತನಾಡಿದರು. ಲಯನ್ಸ್ ಕ್ಲಬ್ ಅಧ್ಯಕ್ಷ ಚಿಟ್ಟಕ್ಕಿ ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು.

ಎಸ್‌ಡಿಎಂಸಿ ಅಧ್ಯಕ್ಷ ಬಿ. ಪ್ರಭಾಕರ್, ಲಯನ್ಸ್ ಕ್ಲಬ್ ಕಾರ್ಯದರ್ಶಿ ಸಿರಿಗೆರೆ ಸಿದ್ದಪ್ಪ, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷರಾದ ಓ.ಜಿ. ರುದ್ರಗೌಡ್ರು, ಎನ್.ಜಿ. ಶಿವಾಜಿ ಪಾಟೀಲ್, ಎನ್. ಶಿವನಗೌಡ್ರು, ಗೌಡ್ರ ಬಸವರಾಜಪ್ಪ, ಲಯನ್ಸ್ ಸದಸ್ಯ ಕೆ.ಹೆಚ್. ಚನ್ನಬಸವಣ್ಣ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷರಾದ ಓ.ಜಿ. ರುದ್ರಗೌಡ್ರು, ಎನ್.ಜಿ. ಶಿವಾಜಿ ಪಾಟೀಲ್, ಎನ್. ಶಿವನಗೌಡ್ರು, ಗೌಡ್ರ ಬಸವರಾಜಪ್ಪ, ಲಯನ್ಸ್ ಸದಸ್ಯ ಕೆ.ಹೆಚ್. ಚನ್ನಬಸವಣ್ಣ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷರಾದ ಜಿ.ಪಿ. ಹನುಮಗೌಡ, ಜಿ.ಆರ್. ಚಂದ್ರಪ್ಪ, ಗ್ರಾ.ಪಂ. ಸದಸ್ಯ ಡಿ.ಎಂ. ಹರೀಶ್, ಪತ್ರಕರ್ತ ಪ್ರಕಾಶ್, ಎಸ್‌ಡಿಎಂಸಿ ಸದಸ್ಯರಾದ ವಿಜಯ ಭಾಸ್ಕರ್, ತೆಲಗಿ ನಾಗರಾಜ್, ಶ್ರೀಮತಿ ಸುನೀತಾ ನಾಗರಾಜ್, ಶಾಲಾ ಮುಖ್ಯ ಶಿಕ್ಷಕ ನಾಗೇಶ್, ಶಿಕ್ಷಕರಾದ ಲೋಕೇಶ್, ಶ್ರೀನಿವಾಸ್ ರೆಡ್ಡಿ, ಕರಿಬಸಮ್ಮ, ಜಯಶ್ರೀ, ಬಾಲ ಕೇಂದ್ರದ ಸಂಗೀತ, ಸುಮಾ ಮತ್ತು ಇತರರು ಭಾಗವಹಿಸಿದ್ದರು.

# ಗ್ರಾಮೀಣ ನಿರುದ್ಯೋಗಿಗಳಿಗೆ ತರಬೇತಿ

ದಾವಣಗೆರೆ, ಅ.10- ಗ್ರಾಮಾಂತರ ಕೈಗಾರಿಕಾ ವಿಭಾಗೀಯ ಕಚೇರಿಯ ಜಿಲ್ಲಾ ಉದ್ಯಮ ಕೇಂದ್ರ ಕಾರ್ಯಕ್ರಮದಡಿ ಗ್ರಾಮೀಣ ಪ್ರದೇಶದ ವಿದ್ಯಾವಂತ ನಿರುದ್ಯೋಗಿಗಳಿಗೆ ಕೌಶಲ್ಯಾಭಿವೃದ್ದಿ ಇಲಾಖೆಯ ಅನುಮೋದಿತ ತರಬೇತಿ ಸಂಸ್ಥೆಗಳ ಮೂಲಕ ನಿಗದಿತ ಅವಧಿಗೆ ಉಚಿತ ತರಬೇತಿ ನಡೆಯಲಿದೆ.

ವಿವರ: ಆರ್ಕ್ ಮತ್ತು ಗ್ಯಾಸ್ ವೆಲ್ಡಿಂಗ್, ಮೋಟಾರ್ ರೀವೈಡಿಂಗ್, ಬ್ಯೂಟಿ ಥೆರಫಿಸ್ಟ್, ಫೀಲ್ಡ್ ಟೆಕ್ನೀಷಿಯನ್ ಅಂಡ್ ಕಂಪ್ಯೂಟಿಂಗ್ ಪೆರಿಫೆರಲ್ಸ್, ಡೊಮೆಸ್ಟಿಕ್ ಎಲೆಕ್ಟ್ರೀಷಿಯನ್ ಮತ್ತು ಹೌಸ್ ವೈರಿಂಗ್, ಟಿ.ವಿ ರಿಪೇರಿ.

ಆಸಕ್ತ ನಿರುದ್ಯೋಗಿಗಳು ತಮ್ಮ ಗ್ರಾಮ ಪಂಚಾಯಿತಿ ಅಥವಾ ಉಪನಿರ್ದೇಶಕರ ಕಚೇರಿ (ಖಾ.ಗ್ರಾ), ಗ್ರಾಮೀಣ ಕೈಗಾರಿಕಾ ವಿಭಾಗ, ಪ್ಲಾಟ್ ನಂ.76(ಪಿ1), ಕರೂರು ಕೈಗಾರಿಕಾ ಪ್ರದೇಶ, ಪಿ.ಬಿ.ರಸ್ತೆ, ದಾವಣಗೆರೆ ಕಚೇರಿಯಿಂದ ಅರ್ಜಿಯನ್ನು ಪಡೆದು ಇದೇ ದಿನಾಂಕ 21 ರೊಳಗೆ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ: 9448929717 ನ್ನು ಸಂಪರ್ಕಿಸಲು ಗ್ರಾಮಾಂತರ ಕೈಗಾರಿಕಾ ವಿಭಾಗದ ಉಪನಿರ್ದೇಶಕ ಸುರೇಶ್.ಹೆಚ್ ತಿಳಿಸಿದ್ದಾರೆ.

# ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರೋತ್ಸಾಹಕ್ಕೆ ಬದ್ಧ



**ಜಗಳೂರು ಶಾಸಕ ಬಿ.ದೇವೇಂದ್ರಪ್ಪ**

ಜಗಳೂರು, ಅ.10- ತಾಲ್ಲೂಕಿನಲ್ಲಿ ಬಡ ಮಕ್ಕಳ ಶಿಕ್ಷಣದ ಪರವಾಗಿರುವ ಸಂಘ, ಸಂಸ್ಥೆಗಳಿಗೆ ಕೈಜೋಡಿಸುವೆ ಎಂದು ಶಾಸಕ ಬಿ.ದೇವೇಂದ್ರಪ್ಪ ಭರವಸೆ ನೀಡಿದರು.

ಪಟ್ಟಣದ ಪ್ರೇರಣಾ ಸಮಾಜ ಸೇವಾ ಸಂಸ್ಥೆಯ ಸಭಾಂಗಣದಲ್ಲಿ ಡಾನ್ ಬಾಸ್ಕೋ ಬಾಲಕಾರ್ಮಿಕರ ಮಿಷನ್ (ದಾವಣಗೆರೆ), ಬ್ರೆಡ್ ಸಂಸ್ಥೆ (ಬೆಂಗಳೂರು), ಸಿಎಸ್ ಯೋಜನೆ ಜಗಳೂರು, ಶಾಲಾ ಮತ್ತು ಸಾಕ್ಷರತಾ ಇಲಾಖೆ ಇವರುಗಳ ಸಹಯೋಗದಲ್ಲಿ ತಾಲ್ಲೂಕು ಮಟ್ಟದ ಮಕ್ಕಳ ಹಕ್ಕುಗಳ ಕ್ಲಬ್ ನ ಸಮಾವೇಶ ಹಾಗೂ ನಾಯಕತ್ವ ತರಬೇತಿ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಾಲ್ಲೂಕಿನ ಕಡುಬಡತನ ಕುಟುಂಬದಲ್ಲಿ ಜನಿಸಿ ಶಿಕ್ಷಣಕ್ಕೆ ಹಂಬಲಿಸುತ್ತಿರುವ ಮಕ್ಕಳನ್ನು ಗುರುತಿಸಿ ವಿವಿಧ ಸಂಘ, ಸಂಸ್ಥೆಗಳು ಮುಖ್ಯವಾಹಿನಿಗೆ ತರಬೇಕಿದೆ. ನಾನೂ ಕೂಡ ಕುಗ್ರಾಮದಲ್ಲಿ ಜನಿಸಿ ಸಂಕಷ್ಟದ ಮಧ್ಯೆ ಶಿಕ್ಷಣ ಪಡೆದ ಫಲವಾಗಿ ಇಂದು ಶಾಸಕನಾಗಿರುವೆ. ಬಡಮಕ್ಕಳ ಶಿಕ್ಷಣಕ್ಕೆ ಅಗತ್ಯವಿರುವ ಪರಿಕರಗಳನ್ನು, ಸಮವಸ್ತ್ರವನ್ನು ನನ್ನ ವೈಯಕ್ತಿಕವಾಗಿ ವಿತರಿಸುವೆ ಎಂದು ತಿಳಿಸಿದರು.

ವಿದ್ಯಾರ್ಥಿ ದೆಸೆಯಿಂದಲೇ ಶಿಕ್ಷಕರ ಮಾರ್ಗದರ್ಶನದಿಂದ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ನೈತಿಕ ಶಿಕ್ಷಣ, ನಾಯಕತ್ವ ಗುಣಗಳನ್ನು ಮೈಗೂಡಿಸಿಕೊಂಡು ಭವಿಷ್ಯದಲ್ಲಿ ದೇಶದ ಸತ್ಪ್ರಜೆಗಳಾಗಿ ಹೊರಹೊಮ್ಮಬೇಕು ಎಂದು ಕಿವಿಮಾತು ಹೇಳಿದರು.

ಶಿಬಿರದಲ್ಲಿ ಭಾಗವಹಿಸಿದ್ದ ಮಕ್ಕಳಿಗೆ 'ಗುಟ್ಟೊಂದು ಹೇಳುವೆ ಪುಟಾಣಿ ಮಕ್ಕಳೆ' ಎಂಬ ಹಾಡು, ಬಸವಣ್ಣ, ಸರ್ವಜ್ಞರ ವಚನ, ಶ್ಲೋಕಗಳೊಂದಿಗೆ ಮಕ್ಕಳಿಗೆ 40 ನಿಮಿಷಗಳ ಕಾಲ ನೈತಿಕ ಶಿಕ್ಷಣದ ಪಾಠ ಹೇಳಿ, ಮಕ್ಕಳಲ್ಲಿ ಸ್ಫೂರ್ತಿ ತುಂಬಿದರು.

ಬಿಇಓ ಹಾಲಮೂರ್ತಿ ಮಾತನಾಡಿ, ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳಿಗೆ ಶಾಲಾ ಅಂಗಳದಲ್ಲಿ ನಡೆಯುವ ಪಠ್ಯೇತರ ಚಟುವಟಿಕೆಗಳು ಸೂಕ್ತ ವೇದಿಕೆಯಾಗುತ್ತವೆ. ವಿದ್ಯಾರ್ಥಿಗಳ ಪ್ರತಿಭೆ ಕಮರದಂತೆ ಪ್ರೋತ್ಸಾಹಿಸಬೇಕು ಎಂದರು.

ಡಾನ್ ಬಾಸ್ಕೋ ಸಂಸ್ಥೆ ನಿರ್ದೇಶಕ ಫಾದರ್ ಜೇಕಬ್ ಪ್ರಾಸ್ತಾವಿಕವಾಗಿ ಮಾತನಾಡಿ, ಸಮಾಜದಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗದಂತೆ ಗೌರವ ಮನ್ನಣೆಗಾಗಿ ಕಲಿಕಾ ಚಟುವಟಿಕೆಗಳ ಪ್ರಬುದ್ಧತೆಗಾಗಿ ದಸರಾ ರಜೆ ಅವಧಿಯಲ್ಲಿ ವಿಶೇಷ ಶಿಬಿರ ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜ್ಞಾನ ತರಂಗಿಣಿ ವಿದ್ಯಾಸಂಸ್ಥೆ ಕಾರ್ಯದರ್ಶಿ ಪಿ.ಎಸ್.ಅರವಿಂದನ್ ಮಾತನಾಡಿ, ಮಕ್ಕಳ ಹಕ್ಕುಗಳು, ಮಕ್ಕಳ ಲಾಲನೆ , ಲೈಂಗಿಕ ದೌರ್ಜನ್ಯ, ಬಾಲ್ಯವಿವಾಹ ನಿಷೇಧ, ಕಡ್ಡಾಯ ಮತ್ತು ಉಚಿತ ಶಿಕ್ಷಣ,ಬಾಲಕಾರ್ಮಿಕ ನಿಷೇಧ, ಮಕ್ಕಳ ರಕ್ಷಣಾ ಕಾಯ್ದೆಗಳ ಸಮಗ್ರ ಮಾಹಿತಿಗಳಿಗಾಗಿ ಇಂತಹ ಶಿಬಿರಗಳು ಸಹಕಾರಿಯಾಗಲಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರೇರಣಾ ಟ್ರಸ್ಟ್ ನ ಫಾದರ್ ಸಿಲ್ವೆಸ್ಟರ್,ಡಾನ್ ಬಾಸ್ಕೋ ಶಾಲೆಯ ವಿದೇಶಿ ಯಾತ್ರಿಕ ಜಾನಾ, ದುರುಗಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಹನುಮಂತೇಶ್, ಬಿಆರ್ ಸಿ ಡಿಡಿ ಹಾಲಪ್ಪ, ದೈಹಿಕ ಶಿಕ್ಷಣ ಅಧಿಕಾರಿ ಸುರೇಶ್ ರೆಡ್ಡಿ, ಫಾದರ್ ಎಜೆ, ರೊನಾಲ್ಡ್, ಪಿಎಸ್ ಐ ಸಾಗರ್ ಮುಂತಾದವರು ಇದ್ದರು.

# ಜಾಲತಾಣಗಳ ವಿಡಿಯೋಗಳಿಂದ ಮಾನಸಿಕ ಒತ್ತಡ

**ಕೌಟುಂಬಿಕ, ಸ್ನೇಹ ಸಂಬಂಧಕ್ಕೆ ಸಾಮಾಜಿಕ ಜಾಲತಾಣ ಬಳಕೆಯಿಂದ ಮಾನಸಿಕ ಆರೋಗ್ಯ**

ಸ್ನೇಹಿತರು ಹಾಗೂ ಕುಟುಂಬದ ಸದಸ್ಯರಿಂದ ದೂರವಿರುವವರು, ತಮ್ಮ ಆಪ್ತರ ಜೊತೆ ಸಂಪರ್ಕ ಹೊಂದಲು ಸಾಮಾಜಿಕ ಜಾಲತಾಣಗಳು ನೆರವಾಗುತ್ತಿವೆ ಎಂದು ಅಧ್ಯಯನ ತಿಳಿಸಿದೆ. ಈ ರೀತಿ ಸಾಮಾಜಿಕ ಜಾಲತಾಣ ಬಳಸಿಕೊಳ್ಳುತ್ತಿರುವವರಿಗೆ ಮಾನಸಿಕ ಆರೋಗ್ಯದ ಲಾಭವೂ ಆಗಿದೆ.

**(1ನೇ ಪುಟದಿಂದ)** ಬಳಸುತ್ತಿದ್ದಾರೆ. ಹೀಗಾಗಿ ಇವರ ಮೇಲೆಯೇ ಅತಿ ಹೆಚ್ಚಿನ ಪ್ರಭಾವ ಕಂಡು ಬರುತ್ತಿದೆ.

ಹಾಗೆಂದು ಜಾಲತಾಣದ ಬಳಕೆಯೆಲ್ಲ ಅಪಾಯಕಾರಿ ಎಂದೇನೂ ಅಲ್ಲ. ಸಾಮಾಜಿಕ ಜಾಲತಾಣಗಳ ಲಾಭಗಳ ಬಗ್ಗೆಯೂ ಅಧ್ಯಯನ ತಿಳಿಸಿದೆ. ಸಾಮಾಜಿಕ ಜಾಲತಾಣಗಳ ಮೂಲಕ ಜನರು ತಮ್ಮ ಪ್ರೀತಿ ಹಾಗೂ ಸಹಾನುಭೂತಿ ವ್ಯಕ್ತಪಡಿಸಲು ಸಾಧ್ಯವಾಗಿದೆ. ಸಾಮಾಜಿಕ ಜಾಲತಾಣಗಳಿಂದಾಗಿ ಜನರು ಒಂಟಿತನದಿಂದ ಹೊರ ಬರಲು ಹಾಗೂ ಗುಂಪುಗಳ ಜೊತೆ ಗುರುತಿಸಿಕೊಳ್ಳಲು ಸಾಧ್ಯವಾಗಿದೆ. ಆದರೆ, ಹದಿಹರೆಯದವರು ಸಾಮಾಜಿಕ ಮಾಧ್ಯಮ ಗಳನ್ನು ಅತಿಯಾಗಿ ಬಳಸಿದ ಸಂದರ್ಭದಲ್ಲಿ ಮಾನಸಿಕ ಆರೋಗ್ಯದ ಸಮಸ್ಯೆಗಳು ತೀವ್ರವಾಗುತ್ತಿವೆ.

ಹದಿಹರೆಯದವರು ಸಾಮಾಜಿಕ ಜಾಲತಾಣಗಳಲ್ಲಿ ಅತಿಯಾಗಿ ಸಮಯ ಕಳೆಯುವುದರಿಂದ ತಮ್ಮ ಜೀವನದ ಬೇರೆ ಬೇರೆ ವಲಯಗಳಲ್ಲಿ ಮುಂದುವರೆಯಲು ಸಾಧ್ಯವಾಗುತ್ತಿಲ್ಲ. ಉತ್ಪಾದಕ ಚಟುವಟಿಕೆಯಲ್ಲಿ ತೊಡಗಿಕೊಂಡು ಉತ್ತಮ ಜೀವನ ಕಂಡುಕೊಳ್ಳುವಲ್ಲಿ ತೊಡಕಾಗುತ್ತಿದೆ ಎಂದು ಅಧ್ಯಯನ ತಿಳಿಸಿದೆ.

ಒಟ್ಟಾರೆ, ಸಾಮಾಜಿಕ ಜಾಲತಾಣ ಮಾಧ್ಯಮಗಳನ್ನು ಸೂಕ್ತವಾಗಿ ಹಾಗೂ ನಿರ್ದಿಷ್ಟ ಉದ್ದೇಶಗಳಿಗೆ ಬಳಸಿಕೊಳ್ಳುವುದನ್ನು ಕಲಿಯಬೇಕು ಎಂದು ಈ ಅಧ್ಯಯನ ತಿಳಿಸಿದೆ.

ಸಾಮಾಜಿಕ ಜಾಲತಾಣಗಳ ಬಳಸುತ್ತಿರುವ ವಿಧಾನದ ಬಗ್ಗೆ ಜನರು ತಾವೇ ತಿಳಿದುಕೊಂಡಲ್ಲಿ, ಅದು ಮುಂದಿನ ಹೆಜ್ಜೆ ಇಡಲು ನೆರವಾಗಲಿದೆ. ಜಾಲತಾಣಗಳ ಬಳಕೆಯನ್ನು ತಾವೇ ಸರಿಪಡಿಸಿಕೊಳ್ಳಲು ಇಲ್ಲವೇ ಪರಿಣಿತರ ನೆರವು ಪಡೆಯಲು ಅವಕಾಶಗಳನ್ನು ಕಲ್ಪಿಸಬೇಕಿದೆ ಎಂದು ಈ ಅಧ್ಯಯನದಲ್ಲಿ ಅಭಿಪ್ರಾಯ ಪಡಲಾಗಿದೆ.

# ರಾಜ್ಯ ಮಟ್ಟದ ಸೈಕ್ಲಿಂಗ್ ಸ್ಪರ್ಧೆ

ದಾವಣಗೆರೆ, ಅ.10- ದಸರಾ ಸಿ.ಎಂ. ಕಪ್ ಕ್ರೀಡಾ ಕೂಟ–2023 ರ ಅಂಗವಾಗಿ ರಾಜ್ಯ ಮಟ್ಟದ ಸೈಕ್ಲಿಂಗ್ ಸ್ಪರ್ಧೆಯನ್ನು ಇದೇ ದಿನಾಂಕ 14 ರಂದು ಮೈಸೂರಿನಲ್ಲಿ ಏರ್ಪಡಿಸಲಾಗಿದೆ.

ದಾವಣಗೆರೆ ಜಿಲ್ಲೆಯಿಂದ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು ತಮ್ಮ ಹೆಸರನ್ನು ನಾಡಿದ್ದು ದಿನಾಂಕ 12ರೊಳಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಛೇರಿಗೆ ಸಲ್ಲಿಸಬೇಕು.

ಹೆಚ್ಚಿನ ವಿವರಗಳಿಗಾಗಿ ಶ್ರೀಮತಿ ಅಲ್ಕಾ ಪಡತಾರೆ ದೂ.9448234883, ಅನಿತಾ ನಿಂಬರಗಿ ದೂ. 9449959064ಗೆ ಸಂಪರ್ಕಿಸಬಹುದೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮೀ ಬಾಯಿ ತಿಳಿಸಿದ್ದಾರೆ.

# ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದಿಂದ ಅರ್ಜಿ

ದಾವಣಗೆರೆ, ಅ.10- ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದಿಂದ ಪ್ರಸಕ್ತ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಸಹಾಯಧನ ಮತ್ತು ಸಾಲ ಸೌಲಭ್ಯ ಪಡೆಯಲು ಸೇವಾ ಸಿಂಧು ತಂತ್ರಾಂಶದ ಮುಖಾಂತರ ಆನ್‌ಲೈನ್ ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇದೇ ದಿನಾಂಕ 30 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ನಿಗಮದ ವೆಬ್‌ಸೈಟ್ https://kvldcl.karnataka.gov.in ಅಥವಾ ಜಿಲ್ಲಾ ವ್ಯವಸ್ಥಾಪಕರು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ ದಾವಣಗೆರೆ ದೂ.ಸಂ 08192-230934 ಸಂಪರ್ಕಿಸಬಹುದು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕ ಸಾತ್ವಿಕ ತಿಳಿಸಿದ್ದಾರೆ.


## ಹನ್ನೊಂದನೇ ವರ್ಷದ ಪುಣ್ಯಸ್ಮರಣೆ



ಜನನ : 14.05.1951 ಮರಣ : 11.10.2012

**ದಿ|| ವೇ|| ಮುಕ್ತಿನಾಥ್ ಟಿ.ಹೆಚ್.ಎಂ.,**

ಇವರ ಹನ್ನೊಂದನೆ ವರ್ಷದ ಪುಣ್ಯ ಸ್ಮರಣೆ

*ನಿಮ್ಮ ಸರಳ ವ್ಯಕ್ತಿತ್ವ, ಸ್ನೇಹಪರತೆ ಹಾಗೂ ಆದರ್ಶ ಜೀವನವೇ ನಮಗೆ ದಾರಿ ದೀವಿಗೆ.*

ಪತ್ನಿ : ಶ್ರೀಮತಿ ಸುಧಾ ಟಿ.ಹೆಚ್.ಎಂ., ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

**ಜಯಲಕ್ಷ್ಮಿ ಟ್ರೇಡಿಂಗ್ ಕಾರ್ಪೊರೇಷನ್**

ಕೆ.ಆರ್. ಮಾರ್ಕೆಟ್, ದಾವಣಗೆರೆ.

## ಏಳನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ಓಬಳಮ್ಮನವರು**

(ದಾವಣಗೆರೆ ಎಪಿಎಂಸಿ ಮಾಜಿ ಅಧ್ಯಕ್ಷರಾದ ದಿ|| ಶ್ಯಾಗಲೆ ಜಿ. ನಾಗಪ್ಪನವರ ಧರ್ಮಪತ್ನಿ)

ಮರಣ : 11-10-2016

*ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳು ಕಳೆದರೂ*
*ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ.*
*ನಿಮ್ಮ ಮಾರ್ಗದರ್ಶನ ನಮಗೆ ದಾರಿದೀಪವಾಗಿದೆ.*
*ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುವ...*

**ಜಿ.ಎನ್. ಶಿವಮೂರ್ತಿ ಮತ್ತು ಸಹೋದರರು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಮತ್ತು ಗುರಪ್ಪರ ವಂಶಸ್ಥರು, ಶ್ಯಾಗಲೆ.**


# ರಾಜ ಸೋಮಶೇಖರ ನಾಯಕರ ಹೆಸರು ನಾಮಕರಣಕ್ಕೆ ಮನವಿ



**ಹರಪನಹಳ್ಳಿ**

ಹರಪನಹಳ್ಳಿ, ಅ. 10 - ಪಟ್ಟಣದ ಹಿರೇಕೆರೆ ವೃತ್ತಕ್ಕೆ ರಾಜ ಸೋಮಶೇಖರ ನಾಯಕ ವೃತ್ತವೆಂದು ನಾಮಕರಣ ಮಾಡುವಂತೆ ಇಂದು ನಡೆದ ಜನತಾದರ್ಶನ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ಹಾಗೂ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್‌ರವರಿಗೆ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜ ಹಾಗೂ ಏಕಲವ್ಯ ಸಂಘರ್ಷ ಸಮಿತಿ ವತಿಯಿಂದ ಮನವಿ ಸಲ್ಲಿಸಲಾಯಿತು.

ಈ ವೇಳೆ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಮಾತನಾಡಿ, ರಾಜ್ಯದಲ್ಲಿ 4ನೇ ಅತಿ ದೊಡ್ಡ ಸಮಾಜವಾದ ವಾಲ್ಮೀಕಿ ನಾಯಕ ಸಮಾಜ ಭವ್ಯ ಇತಿಹಾಸ ಐತಿಹಾಸಿಕ ಹಿನ್ನೆಲೆ ಇರುವ ಸಮಾಜವಾಗಿದ್ದು ರಾಜ್ಯದಲ್ಲಿ 77 ಪಾಳೆಗಾರರು ಆಳ್ವಿಕೆ ನಡೆಸಿದ್ದು ಅದರಲ್ಲಿ ಹರಪನಹಳ್ಳಿಯಲ್ಲಿ 16 ಪಾಳೆಗಾರರು ಆಳ್ವಿಕೆ ನಡೆಸಿದ ಇತಿಹಾಸವಿದ್ದು ಈಗ ಕೋಟೆ ಇಲ್ಲಿ ಇಲ್ಲಿಯ ಪರಂಪರೆ ಇತಿಹಾಸ ಉಳಿಯಲು ಪಟ್ಟಣದ ಹಿರೇಕೆರೆ ವೃತ್ತಕ್ಕೆ ರಾಜ ಸೋಮಶೇಖರ ನಾಯಕ ವೃತ್ತವೆಂದು ನಾಮಕರಣ ಮಾಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ವಾಲ್ಮೀಕಿ ನಾಯಕ ಮಹಿಳಾ ಘಟಕದ ಅಧ್ಯಕ್ಷರಾದ ಕಂಚಿಕೇರಿ ಜಯಲಕ್ಷ್ಮಿ, ಗುಂಡಗತ್ತಿ ನೇತ್ರಾವತಿ, ಏಕಲವ್ಯ ಸಂಘರ್ಷ ಸಮಿತಿ ಅಧ್ಯಕ್ಷ ರಾಯದುರ್ಗದ ಪ್ರಕಾಶ, ಕಾರ್ಯದರ್ಶಿ ಶಿವರಾಜ, ಆರ್. ಅರ್ಜುನ, ಅಜ್ಜಯ್ಯ, ಮುಖಂಡ ಆಲೂರು ಶ್ರೀನಿವಾಸ, ಕೆ. ತಿರುಮಲ, ರಾಜಪ್ಪ, ಎಂ. ದುರುಗಪ್ಪ ಸೇರಿದಂತೆ ಇತರರು ಇದ್ದರು.

## ಅಮರಾವತಿ ಗ್ರಾಮದ ಹೆಚ್. ಅಶೋಕ ನಿಧನ



ಹರಿಹರ ನಗರದ ಹೊರವಲಯದ
ಅಮರಾವತಿ ಗ್ರಾಮದ ನಿವಾಸಿ
ದಿ. ಹಿರೇಬಿದರಿ ಚಂದ್ರಪ್ಪನವರ ಪುತ್ರ
ಹೆಚ್. ಮಲ್ಲಿಕಾರ್ಜುನ್‌ರವರ ಸಹೋದರ

**ಹೆಚ್. ಅಶೋಕ**

ಇವರು ದಿನಾಂಕ 10.10.2023 ರ ಮಂಗಳವಾರ ರಾತ್ರಿ 11 ಕ್ಕೆ ನಿದನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಪತ್ನಿ, ಓರ್ವ ಪುತ್ರಿ, ನಾಲ್ವರು ಸಹೋದರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.10.2023 ರ ಬುಧವಾರ ಮಧ್ಯಾಹ್ನ 1 ಗಂಟೆಗೆ ನಗರದ ಹೊರವಲಯದ ಮೃತರ ಸ್ವಗ್ರಾಮ ಅಮರಾವತಿಯಲ್ಲಿ ನೆರವೇರಿಸಲಾಗುವುದು.

*ದುಃಖತಪ್ತ ಕುಟುಂಬ ವರ್ಗ*

# ಕರ್ನಾಟಕ ಮರಾಠ ಸಮುದಾಯ ಅಭಿವೃದ್ಧಿ ನಿಗಮದಿಂದ ಅರ್ಜಿ ಆಹ್ವಾನ

ದಾವಣಗೆರೆ, ಅ.10- ಕರ್ನಾಟಕ ಮರಾಠ ಸಮುದಾಯ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಡಿ ಸಹಾಯಧನ ಮತ್ತು ಸಾಲ ಸೌಲಭ್ಯ ಪಡೆಯಲು ಸೇವಾ ಸಿಂಧು ತಂತ್ರಾಂಶದ ಮುಖಾಂತರ ಆನ್‌ಲೈನ್ ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 30 ಕೊನೆ ದಿನ. ವಿವರಕ್ಕೆ ನಿಗಮದ www.kmcdc.karnataka.gov.in ಅಥವಾ ಜಿಲ್ಲಾ ವ್ಯವಸ್ಥಾಪಕರು ಕರ್ನಾಟಕ ಮರಾಠ ಸಮುದಾಯ ಅಭಿವೃದ್ಧಿ ನಿಗಮ ದಾವಣಗೆರೆ ದೂ.ಸಂ 08192-230934 ಸಂಪರ್ಕಿಸಬಹುದು. ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕ ಸಾತ್ವಿಕ ತಿಳಿಸಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಇಸ್ರೇಲ್ ಜೊತೆ ನಿಲ್ಲುವುದಾಗಿ ನೇತನ್ಯಾಹುಗೆ ತಿಳಿಸಿದ ಮೋದಿ**
ನವದೆಹಲಿ : ಸಂಕಷ್ಟದ ಸಮಯದಲ್ಲಿ ಇಸ್ರೇಲ್‌ಗೆ ಜೊತೆಯಾಗಿ ಭಾರತ ನಿಲ್ಲಲಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು ಅವರಿಗೆ ತಿಳಿಸಿದ್ದಾರೆ. ಎಲ್ಲ ಸ್ವರೂಪದ ಉಗ್ರವಾದದ ವಿರುದ್ಧ ಹೋರಾಟದಲ್ಲಿ ಜೊತೆಯಾಗುವುದಾಗಿಯೂ ಅವರು ಹೇಳಿದ್ದಾರೆ.

**ಉದಾರ ಆಮದು ನೀತಿಯಿಂದ ರೈತರಿಗೆ ಸಂಕಷ್ಟ : ಕಾಂಗ್ರೆಸ್**
ನವದೆಹಲಿ : ಕೇಂದ್ರ ಸರ್ಕಾರದ ಉದಾರ ಆಮದು ನೀತಿಯಿಂದಾಗಿ ದೇಶದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

**ರಕ್ಷಣಾ ಒಪ್ಪಂದಕ್ಕೆ ಭಾರತ - ಇಟಲಿ ಸಹಿ**
ನವದೆಹಲಿ : ಸೈನ್ಯಕ್ಕೆ ಅಗತ್ಯ ವ್ಯವಸ್ಥೆಗಳನ್ನು ಉತ್ಪಾದಿಸುವ ಸಲುವಾಗಿ ಭಾರತ ಹಾಗೂ ಇಟಲಿ ಒಪ್ಪಂದವೊಂದಕ್ಕೆ ಸಹಿ ಹಾಕಿವೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಇಟಲಿ ರಕ್ಷಣಾ ಸಚಿವ ಗ್ಯೂಡೆ ಕ್ರೆಸೆಟ್ಟೊ ನಡುವೆ ರೋಮ್‌ನಲ್ಲಿ ಮಾತುಕತೆ ನಡೆದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

**ಆನ್‌ಲೈನ್ ಗೇಮ್, ಕ್ರಿಪ್ಟೋಗಳಿಂದ 700 ಕೋಟಿ ರೂ. ತೆರಿಗೆ ಸಂಗ್ರಹ**
ನವದೆಹಲಿ : ನೂತನ ಟಿ.ಡಿ.ಎಸ್. ಪದ್ಧತಿ ವ್ಯಾಪ್ತಿಗೆ ಆನ್‌ಲೈನ್ ಗೇಮ್ ಹಾಗೂ ಕ್ರಿಪ್ಟೋಕರೆನ್ಸಿ ವ್ಯಾಪಾರ ತಂದ ನಂತರ ಇದುವರೆಗೂ 700 ಕೋಟಿ ರೂ. ತೆರಿಗೆ ಸಂಗ್ರಹವಾಗಿದೆ ಎಂದು ಸಿ.ಬಿ.ಡಿ.ಟಿ ಅಧ್ಯಕ್ಷ ನಿತಿನ್ ಗುಪ್ತ ತಿಳಿಸಿದ್ದಾರೆ.

**ಹಕ್ಕುಚ್ಯುತಿ ಸಮಿತಿ ಎದುರು ಹಾಜರಾಗದ ಬಿಧೂರಿ**
ನವದೆಹಲಿ : ಬಿ.ಎಸ್.ಪಿ. ಸಂಸದ ಡ್ಯಾನಿಶ್ ಅಲಿ ವಿರುದ್ಧ ವಿವಾದಿತ ಹೇಳಿಕೆಗಳನ್ನು ನೀಡಿದ್ದ ಬಿಜೆಪಿ ಸಂಸದ ರಮೇಶ್ ಬಿಧೂರಿ ಅವರು ಸದನದ ಹಕ್ಕುಚ್ಯುತಿ ಸಮಿತಿ ಎದುರು ಹಾಜರಾಗಿಲ್ಲ. ಪೂರ್ವನಿಯೋಜಿತ ಕಾರ್ಯಕ್ರಮ ಇದೆ ಎಂದು ಹೇಳಿ ಅವರು ಗೈರಾಗಿದ್ದಾರೆ ಎಂದು ಮೂಲಗಳು ಹೇಳಿವೆ.

**ಮುಂದಿನ ತಿಂಗಳು ತಾಂಜಾನಿಯಾದಲ್ಲಿ ಐಐಟಿ ಕ್ಯಾಂಪಸ್ ಉದ್ಘಾಟನೆ**
ನವದೆಹಲಿ : ತಾಂಜಾನಿಯಾದಲ್ಲಿ ಐ.ಐ.ಟಿ - ಮದ್ರಾಸ್‌ನ ಅನಿವಾಸಿ ಕ್ಯಾಂಪಸ್ ಮುಂದಿನ ತಿಂಗಳು ಉದ್ಘಾಟನೆಯಾಗಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.

**ವಿವೊ ಮೊಬೈಲ್ ಪ್ರಕರಣ : ನಾಲ್ವರ ಬಂಧನ**
ನವದೆಹಲಿ : ವಿವೊ ಮೊಬೈಲ್ ಕಂಪನಿ ವಿರುದ್ಧದ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಲಾವಾ ಇಂಟರ್‌ನ್ಯಾಷನಲ್ ಮೊಬೈಲ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಚೀನಾ ನಾಗರಿಕರನೋರ್ವ ಸೇರಿದಂತೆ ನಾಲ್ವರನ್ನು ಜಾರಿ ನಿರ್ದೇಶನಾಲಯ ಬಂಧಿಸಿದೆ.

**ಭಾರತದ ಬೆಳವಣಿಗೆ ದರ ಶೇ.6.3 : ಐ.ಎಂ.ಎಫ್.**
ನವದೆಹಲಿ : ಭಾರತದ ಜಿ.ಡಿ.ಪಿ. ಬೆಳವಣಿಗೆ ದರ ಶೇ.6.3ರಷ್ಟಿರಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ ತಿಳಿಸಿದೆ. ಇದೇ ವೇಳೆ ಜಾಗತಿಕ ಬೆಳವಣಿಗೆ ಅಂದಾಜು ಶೇ.3ರಷ್ಟಿದೆ ಎಂದು ತಿಳಿಸಲಾಗಿದೆ.

**ಇಸ್ರೇಲ್‌ಗೆ ಬ್ರಿಟನ್ ಬೆಂಬಲ**
ಲಂಡನ್ : ಇಸ್ರೇಲ್‌ಗೆ ಬೆಂಬಲ ನೀಡುವುದಾಗಿ ಬ್ರಿಟನ್ ಪ್ರಧಾನ ಮಂತ್ರಿ ರಿಷಿ ಸುನಕ್ ತಿಳಿಸಿದ್ದಾರೆ. ಅಮೆರಿಕ, ಫ್ರಾನ್ಸ್, ಜರ್ಮನಿ ಹಾಗೂ ಇಟಲಿ ದೇಶಗಳ ನಾಯಕರ ಜೊತೆ ಚರ್ಚಿಸಿದ ನಂತರ ಅವರು ಈ ಹೇಳಿಕೆ ನೀಡಿದ್ದಾರೆ.

**ಟಾಲ್‌ಸ್ಟಾಯ್ ಫಾರಂನಲ್ಲಿ ಗಾಂಧೀಜಿ ಪ್ರತಿಮೆ ಅನಾವರಣ**
ಜೋಹಾನ್ಸ್‌ಬರ್ಗ್ : ದಕ್ಷಿಣ ಆಫ್ರಿಕಾದ ಟಾಲ್‌ಸ್ಟಾಯ್ ಫಾರ್ಮ್‌ನಲ್ಲಿ ಮಹಾತ್ಮ ಗಾಂಧೀಜಿ ಅವರ 8 ಅಡಿ ಎತ್ತರದ ಪ್ರತಿಮೆ ಅನಾವರಣಗೊಳಿಸಲಾಗಿದೆ. ಗಾಂಧೀಜಿ ಅವರು 20ನೇ ಶತಮಾನದ ಆರಂಭದಲ್ಲಿ ದಕ್ಷಿಣ ಆಫ್ರಿಕಾದಲ್ಲಿದ್ದಾಗ ಟಾಲ್‌ಸ್ಟಾಯ್ ಫಾರಂ ಸಮುದಾಯ ಆರಂಭಿಸಿದ್ದರು.

# ‘ಸಂಭ್ರಮ್- 2023’ ಎಸ್.ಎಸ್. ಪಬ್ಲಿಕ್ ಶಾಲೆಗೆ ಸಮಗ್ರ ಪ್ರಶಸ್ತಿ

## ಬಾಪೂಜಿ- ನಿಟ್ಟೂರು ಸೆಂಟ್ರಲ್ ಸ್ಕೂಲ್ ದ್ವಿತೀಯ, ಅಮೃತ ವಿದ್ಯಾಲಯ ತೃತೀಯ



ದಾವಣಗೆರೆ,ಅ.10- ತೋಳಹುಣಸೆಯ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಆಂಗ್ಲ ಮಾಧ್ಯಮ ವಸತಿ ಶಾಲೆ ಮತ್ತು ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಪಿ.ಯು ಕಾಲೇಜ್ ಶಿವಗಂಗೋತ್ರಿಯಲ್ಲಿ ಆಯೋಜಿಸಿದ್ದ ನಾಲ್ಕನೇಯ ಆವೃತ್ತಿಯ ‘ಸಂಭ್ರಮ್-2023’ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಶಾಮನೂರು ಶಿವಶಂಕರಪ್ಪ ನ್ಯಾಷನಲ್ ಪಬ್ಲಿಕ್ ಶಾಲೆ ಒಟ್ಟು 195 ಅಂಕಗಳನ್ನುಗಳಿಸಿ ಸಮಗ್ರ ಪ್ರಶಸ್ತಿ ಪಡೆಯಿತು.

ನಗರದ ಎಂ.ಸಿ.ಸಿ ಬ್ಲಾಕ್‌ನ ಬಾಪೂಜಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ನಿಟ್ಟೂರು ಸೆಂಟ್ರಲ್ ಸ್ಕೂಲ್ ರಾಣೇಬೆನ್ನೂರು ತಲಾ 125 ಅಂಕಗಳನ್ನು ಗಳಿಸಿ ದ್ವಿತೀಯ ಸ್ಥಾನ ಪಡೆದವು. ನಗರದ ಅಮೃತ ವಿದ್ಯಾಲಯ ಪಿಯು ಕಾಲೇಜು 120 ಅಂಕಗಳನ್ನು ಗಳಿಸಿ ತೃತೀಯ ಸ್ಥಾನ ಪಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯಸ್ಥ ಮಂಜುನಾಥ ರಂಗರಾಜು ಮಾತನಾಡಿ, ‘ಸಂಭ್ರಮ್ 2023’ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆ, ಜ್ಞಾನ, ಕ್ರಿಯಾಶೀಲತೆಗಳ ಅನಾವರಣಗೊಳಿಸುವ ನಿಟ್ಟಿನಲ್ಲಿ ಚಿತ್ರಕಲೆ, ಸಂಗೀತ, ನೃತ್ಯ, ನಾಟಕ, ಛಾಯಾಗ್ರಹಣ, ರಂಗೋಲಿ, ಸಾಕ್ಷ್ಯಚಿತ್ರ, ಮಣ್ಣಿನಲ್ಲಿ ಕರಕೌಶಲ ಮುಂತಾದ 38 ವಿಭಾಗಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಎಂದು ತಿಳಿಸಿದರು.

ವಿವಿಧ ಜಿಲ್ಲೆಗಳ ಸುಮಾರು 40ಕ್ಕೂ ಹೆಚ್ಚು ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿಯ ಜೊತೆ ನಗದು ಬಹುಮಾನವನ್ನು ವಿತರಿಸಲಾಯಿತು.

ಎಸ್. ಎಸ್. ಗಣೇಶ್ ಸಭಾಭವನದ ವೇದಿಕೆಯಲ್ಲಿ ಜರುಗಿದ ನೃತ್ಯ ಕಾರ್ಯಕ್ರಮಗಳು, ಸಿರಿಗೆರೆಯ ತರಳಬಾಳು ಶಾಲೆಯ ವಿದ್ಯಾರ್ಥಿಗಳ ಮಲ್ಲಕಂಬ ಪ್ರದರ್ಶನ ರೋಮಾಂಚನಕಾರಿಯಾಗಿತ್ತು. ಯಕ್ಷಗಾನ ಪ್ರದರ್ಶನ ಪ್ರೇಕ್ಷಕರ ಕಣ್ಮನ ಸೆಳೆಯಿತು. ವಿವಿಧ ಶಾಲೆಗಳ ವಿದ್ಯಾರ್ಥಿಗಳ ‘ಫ್ಯಾಷನ್ ಶೋ’ ಆಕರ್ಷಕವಾಗಿತ್ತು.

ವಿವಿಧ ಶಾಲೆಗಳ ಪ್ರಾಂಶುಪಾಲರಾದ ಶ್ರೀಮತಿ ಜೆ.ಎಸ್.ವನಿತಾ, ಶ್ರೀಮತಿ ಪ್ರೀತಿ ಸಿಂಗ್, ಶ್ರೀಮತಿ ಕಮಲಾ ಬಿ.ಎನ್, ಅರುಣ್ ಪ್ರಸಾದ್, ರಾಜೇಶ್ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆ ಯನ್ನು ಶಾಲೆಯ ವಿದ್ಯಾರ್ಥಿಗಳಾದ ಸಮೃದ್ಧ್, ಶ್ರದ್ಧಾ, ಸುಶ್ರುತ್ ನಿರೂಪಣೆ ಮಾಡಿದರು.

# ಭದ್ರಾ : ಒತ್ತಾಯ

(1ನೇ ಪುಟದಿಂದ) ಇಲ್ಲಿನ ಪರಿಸ್ಥಿತಿ ತಿಳಿಸಿ ನಾಲೆಯಲ್ಲಿ ಸತತವಾಗಿ ನೀರು ಹರಿಸುವಂತೆ ಮನವಿ ಮಾಡುತ್ತೇನೆ.

ಶಿವಮೊಗ್ಗ, ಭದ್ರಾವತಿ, ತರೀಕೆರೆ ತಾಲ್ಲೂಕಿನವರು ಆಫ್ ಅಂಡ್ ಆನ್ ಮಾಡುವಂತೆ ಒತ್ತಡ ಹಾಕಿದ್ದಾರೆಂಬ ಮಾಹಿತಿಯೂ ಇದೆ, ಸಾಧ್ಯವಾದರೆ ಎಲ್ಲರೂ ಸೇರಿ ಸಿಎಂ ಭೇಟಿ ಮಾಡಿ ಮಾತಾನಾಡೋಣ ಎಂದು ಸಚಿವ ಮಲ್ಲಿಕಾರ್ಜುನ್ ರೈತರಿಗೆ ಭರವಸೆ ನೀಡಿದರು.

ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾ ಮಂಡಳದ ಅಧ್ಯಕ್ಷ ವೈ. ದ್ಯಾವಪ್ಪರೆಡ್ಡಿ, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಸಿರಿಗೆರೆ ರಾಜಣ್ಣ, ಡಿಸಿಸಿ ಬ್ಯಾಂಕ್‌ನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಮಲೇಬೆನ್ನೂರಿನ ಮುಖಂಡ ಮುದೇಗೌಡ್ರ ತಿಪ್ಪೇಶ್, ಓ.ಜಿ. ಕುಮಾರ್, ವಿನಾಯಕ ನಗರ ಕ್ಯಾಂಪಿನ ಗ್ರಾ.ಪಂ. ಸದಸ್ಯ ಶ್ರೀನಿವಾಸ್, ಮಾಜಿ ಅಧ್ಯಕ್ಷರಾದ ಸುಬ್ಬರಾವ್, ಹಲಗೇರಿ ಕರಿಬಸಪ್ಪ, ಸಿ. ಪ್ರಸಾದ್, ಭುವನ್, ರಮೇಶ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

# ಮಾದಕ ಮಟ್ಟ ಹಾಕಿ, ಹಬ್ಬದಂತೆ ಟ್ರಾಫಿಕ್ ದಂಡ ವಸೂಲಿ ಮಾಡಿ

(1ನೇ ಪುಟದಿಂದ) ಸಿಗ್ನಲ್ ಲೆಕ್ಕಿಸುತ್ತಿಲ್ಲ. ಮನಸೋಇಚ್ಛೆ ವಾಹನ ಚಾಲನೆ ಮಾಡುತ್ತಿದ್ದಾರೆ ಎಂದು ಮಂಜುನಾಥ್ ಎಂಬುವವರು ದೂರಿದರು.

ಈ ಬಗ್ಗೆ ಮಾತನಾಡಿದ ಅಲೋಕ್ ಕುಮಾರ್, ನಗರದಲ್ಲಿ 1.10ಲಕ್ಷ ದಂಡದ ಚಲನ್‌ಗಳನ್ನು ಕಳಿಸಲಾಗಿದೆಯಾದರೂ, ದಂಡ ವಸೂಲಿ ಮಾಡಿಲ್ಲ. ಈ ಬಗ್ಗೆ ಬಾಕಿ ಉಳಿಸಿಕೊಂಡವರ ಮನೆಗೆ ತೆರಳಿ ದಂಡ ವಸೂಲಿ ಮಾಡಬೇಕು. ದಂಡ ವಸೂಲಿಯನ್ನು ‘ಹಬ್ಬ’ದ ರೀತಿ ಮಾಡಬೇಕು ಎಂದು ಪೊಲೀಸರಿಗೆ ತಿಳಿಸಿದರು.

ಬಿಜೆಪಿ ಮುಖಂಡ ಬಾಡದ ಆನಂದರಾಜ್ ಅವರು ಅರ್ಧ ಹೆಲ್ಮೆಟ್ ಧರಿಸಲು ಅನುಮತಿ ನೀಡಬೇಕು ಎಂದು ಕೇಳಿದರು.

ಈ ಬಗ್ಗೆ ಮಾತನಾಡಿದ ಅಲೋಕ್ ಕುಮಾರ್, ಮುಖವನ್ನು ಸಂಪೂರ್ಣ ರಕ್ಷಣೆ ಮಾಡುವ ಐ.ಎಸ್.ಐ. ಮಾನದಂಡದ ಹೆಲ್ಮೆಟ್ ಧರಿಸುವುದು ಕಡ್ಡಾಯವಾಗಿದೆ.

ಪೊಲೀಸರಿಗೆ ಕಾನೂನು ಪಾಲನೆ ಮಾಡುವ ಅಧಿಕಾರ ಇದೆಯೇ ವಿನಃ, ವಿನಾಯಿತಿ ಕೊಡುವ ಅಧಿಕಾರ ಇಲ್ಲ ಎಂದರು.

ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ಅಪಘಾತಗಳಲ್ಲಿ 11,735 ಜನರು ಸಾವನ್ನಪ್ಪಿದ್ದಾರೆ. ಇವರ ಪೈಕಿ ಶೇ.60ರಷ್ಟು ಜನರು ದ್ವಿಚಕ್ರ ವಾಹನ ಸವಾರರು. ಹೀಗಾಗಿ ಕಾನೂನು ಪಾಲನೆಗಿಂತ ಹೆಚ್ಚಾಗಿ, ಸಾರ್ವಜನಿಕರು ತಮ್ಮ ಜೀವ ರಕ್ಷಣೆಗಾಗಿ ಹೆಲ್ಮೆಟ್ ಧರಿಸಲೇಬೇಕು. ಪೊಲೀಸರೂ ಸಹ ಹೆಲ್ಮೆಟ್ ಧರಿಸದವರಿಗೆ ದಂಡ ಹಾಕಬೇಕು ಎಂದು ತಿಳಿಸಿದರು.

ಐಜಿಪಿ ಕೆ. ತ್ಯಾಗರಾಜನ್, ಎಸ್ಪಿ ಉಮಾ ಪ್ರಶಾಂತ್, ಎಎಸ್ಪಿ ರಾಮಗೊಂಡ ಬಸರಗಿ ವೇದಿಕೆ ಮೇಲಿದ್ದರು.

ಮಾಜಿ ಮೇಯರ್ ಎಸ್.ಟಿ. ವೀರೇಶ್, ದುರ್ಗಾಂಬಿಕ ದೇವಸ್ಥಾನದ ಧರ್ಮದರ್ಶಿ ಚನ್ನಬಸಪ್ಪ ಗೌಡ್ರು, ಬಿಜೆಪಿ ಮುಖಂಡ ಬಾಡದ ಆನಂದರಾಜ್, ಎನ್.ಕೆ. ಕೊಟ್ರೇಶ್, ಮಂಜುನಾಥ್, ರಾಜಶೇಖರ್, ಜಗಳೂರಿನ ಸತೀಶ್, ಚನ್ನಗಿರಿಯ ಸರ್ದಾರ್ ಸಾಬ್, ಹರಿಹರದ ಟಿ.ಜೆ. ಮುರುಗೇಶ್ ಮತ್ತಿತರರು ಸಮಸ್ಯೆಗಳ ಬಗ್ಗೆ ಮಾತನಾಡಿದರು.

# ಶಿಕ್ಷಕರಲ್ಲಿ ಜಾತ್ಯತೀತ ಭಾವನೆ ಇರಲಿ: ಡಾ. ಪ್ರಸಾದ್



**ಎಸ್ ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ**

ದಾವಣಗೆರೆ, ಅ. 10- ಶಿಕ್ಷಕರು ಜಾತ್ಯತೀತ ಭಾವನೆಯುಳ್ಳವರಾಗಿರಬೇಕು. ಪೂರ್ವಾಗ್ರಹ ಇಲ್ಲದೆ, ನಿಷ್ಪಕ್ಷಪಾತದ ಧೋರಣೆಯನ್ನು ಹೊಂದಿ ಬೋಧಿಸಬೇಕು ಎಂದು ಎಸ್ ಎಸ್ ಐ ಎಂ ಎಸ್ ನ ಪ್ರಾಂಶುಪಾಲ ಡಾ॥ ಬಿ.ಎಸ್. ಪ್ರಸಾದ್ ಸಲಹೆ ನೀಡಿದರು.

ನಗರದ ಎಸ್ ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಡೆದ ಶಿಕ್ಷಕರ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ತಮ್ಮ ವಿದ್ಯಾರ್ಥಿ ದಿನಗಳನ್ನು ನೆನಪಿಸಿಕೊಂಡ ಅವರು, ಶಿಕ್ಷಕರಿಂದ ತಾವು ಕಲಿತ ಶಿಸ್ತಿನ ಪಾಠಗಳನ್ನು ನೆನಪಿಸಿಕೊಂಡರು.

ಮುಖ್ಯ ಅತಿಥಿಯಾಗಿದ್ದ ಜಜಮು ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ॥ ಶುಕ್ಲಾ ಶೆಟ್ಟಿ ಅವರು ಮಾತನಾಡಿ, ತಮ್ಮ ಮೇಲೆ ಪ್ರಭಾವ ಬೀರಿದ ಶಿಕ್ಷಕರನ್ನು ಸ್ಮರಿಸಿದರು. ಶಿಕ್ಷಕ ವೃತ್ತಿಯು ಸಮಾಜದಲ್ಲಿ ಎಷ್ಟು ಮುಖ್ಯ ಎಂದು ಬಿಡಿಸಿ ಹೇಳಿದರು.

ಉಪ ಪ್ರಾಂಶುಪಾಲರಾದ ಡಾ॥ ಶಶಿಕಲಾ ಪಿ. ಕೃಷ್ಣಮೂರ್ತಿ, ಸರ್ವಪಲ್ಲಿ ರಾಧಾಕೃಷ್ಣನ್ ಬದುಕಿನ ಕುರಿತು ಪರಿಚಯ ಮಾಡಿಕೊಟ್ಟರು. ವೈದ್ಯಕೀಯ ಶಿಕ್ಷಣವು ಇತ್ತೀಚಿನ ಸಿಬಿಎಂಇ ಪಠ್ಯಕ್ರಮದ ಅನ್ವಯ ವಿದ್ಯಾರ್ಥಿಗಳಿಗೆ AETCOM (ವರ್ತನೆ, ನೀತಿ ಮತ್ತು ಸಂವಹನೆ) ಅನ್ನು ವಿಶೇಷವಾಗಿ ಕಲಿಸುತ್ತಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಶಿಕ್ಷಕರಿಗೆ ಅದರ ಪ್ರಾಮುಖ್ಯತೆಯ ಅರಿವು ಮೂಡಿಸಿದರು.

ವೈದ್ಯಕೀಯ ನಿರ್ದೇಶಕ ಡಾ॥ ಅರುಣ್ ಕುಮಾರ್ ಅಜ್ಜಪ್ಪ ಮಾತನಾಡಿ, ತಮ್ಮ ವಿದ್ಯಾರ್ಥಿ ದಿನಗಳ ಗುರು-ಶಿಷ್ಯರ ಸಂಬಂಧದ ಬಗ್ಗೆ ಮಾತನಾಡಿದರು. ಇತ್ತೀಚಿನ ಆಧುನಿಕತೆಯು ವಿದ್ಯಾರ್ಥಿಗಳ ಮೇಲೆ ಹೇಗೆ ಪರಿಣಾಮ ಬೀರಿದೆ ಮತ್ತು ಅದನ್ನು ಹೇಗೆ ಶಿಕ್ಷಕರು ನಿಭಾಯಿಸಬೇಕು ಎಂದು ತಿಳಿಸಿದರು.

ಕಾಲೇಜಿನ ವಿವಿಧ ವಿಭಾಗಗಳ ಬೋಧಕ ಸಿಬ್ಬಂದಿಗಳಿಂದ ಮನಮೋಹಕ ನೃತ್ಯ, ಗಾಯನ ಪ್ರದರ್ಶನ ನಡೆಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳು ಕಳೆಗಟ್ಟಿಸಿದವು. ಭಾರತೀಯ ಚಿತ್ರರಂಗವನ್ನು ಪ್ರತಿಬಿಂಬಿಸುವ ರ್‍ಯಾಂಪ್‌ವಾಕ್ ಆಕರ್ಷಕವಾಗಿತ್ತು.

ವಿದ್ಯಾರ್ಥಿ ಸಂಘದ ಚೇರ್ಮನ್ ಡಾ॥ ಹರೀಶ್ ಕುಮಾರ್ ವಿ.ಎಸ್. ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಪತ್ರಿಕಾ ವಿತರಕರಿಗೂ ‘ಸ್ವ ನಿಧಿ’ ಸಾಲ ಯೋಜನೆ ವಿಸ್ತರಣೆ



ದಾವಣಗೆರೆ, ಅ. 10- ಬೀದಿ ಬದಿ ವ್ಯಾಪಾರಿಗಳಿಗೆ ಮಾತ್ರ ಇದ್ದ ಕೇಂದ್ರ ಸರ್ಕಾರದ ‘ಸ್ವ ನಿಧಿ’ ಸಾಲ ಯೋಜನೆಯನ್ನು ಪತ್ರಿಕಾ ವಿತರಕರಿಗೂ ವಿಸ್ತರಿಸಲಾಗಿದೆ ಎಂದು ಪಾಲಿಕೆಯ ಅಭಿಯಂತರ ವ್ಯವಸ್ಥಾಪಕ ವಿರುಪಾಕ್ಷಗೌಡ ಹೇಳಿದರು.

ನಗರದ ಶಿವಯೋಗಾಶ್ರಮದ ಆವರಣದಲ್ಲಿ ಜಿಲ್ಲಾ ಪತ್ರಿಕಾ ವಿತರಕರ ಸಂಘದಿಂದ ಆಯೋಜಿಸಿದ್ದ ‘ಸ್ವ ನಿಧಿ’ ಸಾಲ ಯೋಜನೆಯ ಮಾಹಿತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

‘ಸ್ವ ನಿಧಿ’ ಯೋಜನೆ ಕೇವಲ ಬೀದಿ ಬದಿ ವ್ಯಾಪಾರಸ್ಥರಿಗೆ ಸೀಮಿತವಾಗಿತ್ತು. ಆದರೆ ಅವರೊಟ್ಟಿಗೆ ಚಳಿ, ಮಳೆ ಎನ್ನದೇ ಸೂರ್ಯೋದಯಕ್ಕೂ ಮುನ್ನವೇ ನಿತ್ಯ ಕಾಯಕದಲ್ಲಿ ತೊಡಗಿರುವ ಪತ್ರಿಕಾ ವಿತರಕರಿಗೂ ಈ ಯೋಜನೆ ವಿಸ್ತರಿಸಲಾಗಿದೆ ಎಂದರು.

ಕೇಂದ್ರ ಸರ್ಕಾರದ ಈ ಯೋಜನೆಯಡಿ ಹೆಸರು ನೋಂದಾಯಿಸುವ ಮೂಲಕ ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಪತ್ರಿಕಾ ವಿತರಕರು ಸರ್ಕಾರದ ಸಾಲ ಸೌಲಭ್ಯ ಪಡೆಯುವಂತೆ ಮನವಿ ಮಾಡಿದರು.

ಈ ಯೋಜನೆಯಡಿ ಮೊದಲ ಕಂತು 10 ಸಾವಿರ ರೂ., ಎರಡನೇ ಕಂತು 20 ಸಾವಿರ ರೂ., ಮೂರನೇ ಕಂತು 50 ಸಾವಿರ ರೂ. ಗಳು ದೊರೆಯಲಿದ್ದು, ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿ ಮಾಡಿದರೆ ಮುಂದಿನ ಸಾಲ ಸೌಲಭ್ಯಕ್ಕೆ ಅರ್ಹರಾಗುತ್ತಾರೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಲ್ಟಿ ಟಾಸ್ಕಿಂಗ್ ಅಧಿಕಾರಿ ವೈ.ಸಿ. ಶೃತಿ, ಸಮುದಾಯ ಸಂಪನ್ಮೂಲ ವ್ಯಕ್ತಿಗಳಾದ ಜ್ಯೋತಿ ಎಂ. ದೊಡ್ಡಮನಿ, ಆರತಿ ರಮೇಶ್, ದಾವಣಗೆರೆ ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೆಚ್. ಚಂದ್ರು, ಇತರೆ ಪದಾಧಿಕಾರಿಗಳಾದ ಅರುಣ್ ಕುಮಾರ್, ಎ. ನಿಂಗಪ್ಪ, ಎಂ.ಬಿ. ಬಸವರಾಜ್, ಟಿ.ಪಿ. ನಾಗರಾಜ್, ರಮೇಶ್ ಜೆ. ವತನ್, ದಿನೇಶ್ ಶೆಟ್ಟಿ, ಕುಮಾರಸ್ವಾಮಿ, ಕೃಷ್ಣಮೂರ್ತಿ, ಗಂಗಾಧರ್ ಮತ್ತಿತರರು ಭಾಗವಹಿಸಿದ್ದರು.

# ಸಂಸ್ಕೃತ ಶಾಲೆಯಲ್ಲಿ ಭಗತ್ ಸಿಂಗ್ ಜನ್ಮದಿನ



ದಾವಣಗೆರೆ, ಅ.10- ಶ್ರೀಶೈಲ ಮಠದ ಜಗದ್ಗುರು ಪಂಚಾಚಾರ್ಯ ವೇದ, ಆಗಮ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀಶೈಲ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಕ್ರಾಂತಿಕಾರಿ ಭಗತ್ ಸಿಂಗ್ ಅವರ ಜನ್ಮದಿನ ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಂಬಿಕಾ ನಗರದ ಸ್ವಾಮೀಜಿ, ಕೋಣಂದೂರು ಸ್ವಾಮೀಜಿ, ಯುವ ಮುಖಂಡ ರಾದ ಆರ್.ಟಿ ಪ್ರಶಾಂತ್ ದುಗ್ಗತ್ತಿಮಠ್, ಎನ್.ಎಂ.ತಿಪ್ಪೇಸ್ವಾಮಿ, ಶಶಿ, ಬಸವರಾಜ್ ಶಾಸ್ತ್ರೀಜಿ, ಮುತ್ತು ಶಾಸ್ತ್ರೀಜಿ, ಬನ್ನಯ ಸ್ವಾಮಿ ಮತ್ತು ಪಾಠ ಶಾಲೆಯ ವಿದ್ಯಾರ್ಥಿಗಳು ಹಾಜರಿದ್ದರು.

# ಆದಿವಾಸಿ ಬುಡಕಟ್ಟು ಸಮುದಾಯದ ಸಮಸ್ಯೆ ಪರಿಹಾರಕ್ಕೆ ಸಭೆ

ಬೆಂಗಳೂರು, ಅ. 10 - ಕಾಡು, ಕಾಡಂಚಿನ ಅರಣ್ಯಾಧಾರಿತ ಆದಿವಾಸಿ ಬುಡಕಟ್ಟುಗಳ ಸಮಸ್ಯೆಗಳ ಬಗ್ಗೆ ಚರ್ಚಿಸಲು ಕೊಡಗು, ಚಾಮರಾಜನಗರ, ಮೈಸೂರು, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳ ಜಿಲ್ಲಾಧಿಕಾರಿ, ಜಿ.ಪಂ ಸಿಇಒ ಹಾಗೂ ಬುಡಕಟ್ಟು ಅಧಿಕಾರಿಗಳೊಂದಿಗೆ ಸಭೆ ಕರೆಯಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.


ಕರ್ನಾಟಕ ರಾಜ್ಯದ ಕಾಡು, ಕಾಡಂಚಿನ ಅರಣ್ಯಾಧಾರಿತ ಆದಿವಾಸಿ ಬುಡಕಟ್ಟುಗಳ ಒಕ್ಕೂಟದ ನಿಯೋಗವು ಇಂದು ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಮಾತನಾಡಿದರು.

ರಾಜ್ಯದಲ್ಲಿ 51 ಆದಿವಾಸಿ ಜನಾಂಗಗಳಿದ್ದು, ಸೋಲಿಗ, ಜೇನುಕುರುಬ ಸೇರಿದಂತೆ 12 ಬುಡಕಟ್ಟು ಜನಾಂಗಗಳು ಸೌಲಭ್ಯ ವಂಚಿತವಾಗಿವೆ. ಅವರಲ್ಲಿ ಹಲವರಿಗೆ ಯೋಜನೆಗಳ ಸೌಲಭ್ಯ ಪಡೆಯಲು ಅಗತ್ಯವಿರುವ ದಾಖಲೆಗಳು ಕೂಡ ಇಲ್ಲದ ಪರಿಸ್ಥಿತಿ ಇದೆ. ಶಿಬಿರಗಳನ್ನು ಆಯೋಜಿಸಿ ಆಧಾರ್ ಮುಂತಾದ ದಾಖಲೆಗಳನ್ನು ನೀಡುವ ವ್ಯವಸ್ಥೆ ಕಲ್ಪಿಸಬೇಕು ಎಂದು ನಿಯೋಗವು ಮನವಿ ಮಾಡಿತು.

ಎಎನ್‌ಎಮ್, ನರ್ಸಿಂಗ್, ಮುಂತಾದ ಶಿಕ್ಷಣ ಪಡೆದಿರುವ ಬುಡಕಟ್ಟು ಜನಾಂಗಗಳ ಮೊದಲ ಪೀಳಿಗೆಗೆ ಆರೋಗ್ಯ ಇಲಾಖೆಯಲ್ಲಿ ಕೆಲಸ ನೀಡುವ ಬಗ್ಗೆ ಹಾಗೂ ಪ್ರಸ್ತುತ ಅರಣ್ಯ ಇಲಾಖೆಯ ಅರಣ್ಯ ಹುದ್ದೆಗಳಿಗೆ ಅರಣ್ಯವಾಸಿಗಳಿಗೆ ನೀಡಲು ಮರು ಆದೇಶ ಹೊರಡಿಸುವ ಬಗ್ಗೆ ಮನವಿ ಮಾಡಲಾಯಿತು.

ರಾಜ್ಯದಲ್ಲಿನ 115 ಆಶ್ರಮ ಶಾಲೆಗಳಲ್ಲಿ ಖಾಯಂ ಶಿಕ್ಷಕರಿಲ್ಲ. ಆದಿವಾಸಿ ಸಮುದಾಯಕ್ಕೆ ಸೇರಿದ ಬಿಎಡ್ ಶಿಕ್ಷಣ ಪಡೆದಿರುವವರನ್ನೇ ಈ ಶಾಲೆಗಳಿಗೆ ನೇಮಕ ಮಾಡುವಂತೆ ಮುಖ್ಯಮಂತ್ರಿಗಳನ್ನು ಕೋರಲಾಯಿತು.

# ಅರಣ್ಯ ಗಣಿ ಗುತ್ತಿಗೆ ಸಮಸ್ಯೆ ಇತ್ಯರ್ಥಕ್ಕೆ ಏಕಗವಾಕ್ಷಿ ವ್ಯವಸ್ಥೆ



ಬೆಂಗಳೂರು, ಅ. 10 - ಅರಣ್ಯ ಇಲಾಖೆಯ ಗಣಿ ಗುತ್ತಿಗೆ ಸಮಸ್ಯೆಗಳನ್ನು ಬಗೆಹರಿಸಲು ಏಕಗವಾಕ್ಷಿ ಮಾದರಿ ವ್ಯವಸ್ಥೆ ರೂಪಿಸಿ ಕ್ರಮ ವಹಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಅರಣ್ಯ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದ ಅವರು ರಾಜ್ಯದಲ್ಲಿ ಗಣಿ ಗುತ್ತಿಗೆ ಪಡೆದಿರುವ ಸಂಸ್ಥೆಗಳಿಗೆ ಅರಣ್ಯ ಇಲಾಖೆ ತೀರುವಳಿ ಮತ್ತಿತರೆ ಅನುಮತಿ ಪತ್ರಗಳನ್ನು ನೀಡಲು ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ಗಣಿ ಮತ್ತು ಭೂ ವಿಜ್ಞಾನ, ಕಂದಾಯ ಹಾಗೂ ಅರಣ್ಯ ಇಲಾಖೆಯ ಸಚಿವರು ಹಾಗೂ ಅಧಿಕಾರಿಗಳು ಪ್ರತ್ಯೇಕ ಸಭೆ ನಡೆಸಬೇಕು ಎಂದು ನಿರ್ದೇಶನ ನೀಡಿದರು.

ಅರಣ್ಯ ಇಲಾಖೆ ತೀರುವಳಿ ಪಡೆಯಲು ಬಹಳಷ್ಟು ಪ್ರಕರಣಗಳು ಬಾಕಿ ಇರುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಇದಕ್ಕೆ ಗಣಿ ಗುತ್ತಿಗೆ ಪಡೆದ ಸಂಸ್ಥೆಗಳು ಅರಣ್ಯೀಕರಣಕ್ಕೆ ಪರ್ಯಾಯ ಭೂಮಿ ನೀಡಿಲ್ಲ. ಆನೆಗಳು ಮತ್ತಿತರೆ ವನ್ಯಜೀವಿಗಳ ಉಪಟಳದಿಂದಾಗಿ ಕೃಷಿ ಭೂಮಿ ಮಾರಲು ಸಿದ್ಧರಿರುವ ರೈತರು ಹಾಸನ ಮತ್ತು ರಾಜ್ಯದ ಇತರೆ ಕೆಲವು ಭಾಗಗಳಲ್ಲಿದ್ದಾರೆ. ಇಂತಹ ರೈತರಿಗೆ ಈ ಸಂಸ್ಥೆಗಳು ಸೂಕ್ತ ಬೆಲೆ ನೀಡಿ ಜಮೀನು ಖರೀದಿಸಬಹುದು ಎಂದು ಅಧಿಕಾರಿಗಳಿಂದ ಅಭಿಪ್ರಾಯ ವ್ಯಕ್ತವಾಯಿತು.

ಭಾರತ ಸರ್ಕಾರಿ ಸ್ವಾಮ್ಯದ ಕೆಐಓಸಿಎಲ್ ಕುದುರೆಮುಖದ ಭೂಮಿಯನ್ನು ಅರಣ್ಯ ಇಲಾಖೆಗೆ ವಹಿಸಿಕೊಡುವ ಬಗ್ಗೆ ಚರ್ಚಿಸಿ ಬಗೆಹರಿಸಲು ಸೂಚಿಸಲಾಯಿತು.

ಅನಗತ್ಯವಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಅರಣ್ಯ ಇಲಾಖೆ ತೊಂದರೆ ನೀಡಬಾರದು. ಅನಗತ್ಯ ವಿಳಂಬ ಮಾಡಬಾರದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಅರಣ್ಯ ಇಲಾಖೆಯ 25 ಮಿಲಿಯನ್ ಟನ್ ಅದಿರನ್ನು ಹರಾಜು ಮಾಡುವ ಸಂಬಂಧ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯ ಪಡೆದು ಮುಂದುವರೆಯುವಂತೆ ಸೂಚಿಸಿದರು.

2023-24 ನೇ ಸಾಲಿನಲ್ಲಿ ಮುಖ್ಯ ಖನಿಜ ಹಾಗೂ ಉಪಖನಿಜಗಳಿಗೆ ಸಂಬಂಧಿಸಿದಂತೆ ಸೆಪ್ಟೆಂಬರ್ ಅಂತ್ಯದವರೆಗೆ 3276 ಕೋಟಿ ರೂ.ಗಳ ರಾಜಧನ ಸಂಗ್ರಹಣೆಯಾಗಿದೆ ಎಂದು ಸಭೆಗೆ ಮಾಹಿತಿ ಒದಗಿಸಲಾಯಿತು.

ಸರ್ಕಾರಕ್ಕೆ ಸಲ್ಲಿಕೆಯಾಗಬೇಕಾದ ರಾಜಧನ ಅನಗತ್ಯವಾಗಿ ಸೋರಿಕೆಯಾಗದಂತೆ ತಡೆಯುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಜಾಗೃತ ದಳ ಕಾಲಕಾಲಕ್ಕೆ ಪರಿಶೀಲಿಸುವಂತೆ, ಕ್ರಮವಹಿಸಲು ಸೂಚಿಸಿದರು.

ಸಿ ವರ್ಗದ ಅದಿರಿನ ಬ್ಲಾಕ್ ಗಳಿಗೆ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಅರಣ್ಯ ಅನುಮತಿಗಳನ್ನು ವರ್ಗಾಯಿಸುವ ಬಗ್ಗೆ ಕಾನೂನು ಅಭಿಪ್ರಾಯ ಪಡೆಯಬೇಕು.

ಈಗಾಗಲೇ ಗಣಿಗಾರಿಕೆ ನಡೆಸಿದ ಅರಣ್ಯ ಪ್ರದೇಶದಲ್ಲಿ ಮತ್ತು ಅರಣ್ಯೇತರ ಪ್ರದೇಶದಲ್ಲಿ ಗಣಿಗಾರಿಕೆಗೆ ಅವಕಾಶ ನೀಡುವ ಕುರಿತು ಚರ್ಚಿಸಲಾಯಿತು.

# ಆಟಗಾರ್ತಿಯರ ಮೇಲೆ ಅತ್ಯಾಚಾರ : ಶೂಟಿಂಗ್ ಕೋಚ್ ವಿರುದ್ಧ ಎಫ್.ಐ.ಆರ್

ಜೈಪುರ, ಅ. 10 – ಕಳೆದ ಕೆಲ ವರ್ಷಗಳಲ್ಲಿ ಐವರು ಮಹಿಳಾ ಶೂಟರ್‌ಗಳ ಮೇಲೆ ಅತ್ಯಾಚಾರ ಎಸಗಿದ ಹಾಗೂ ಲೈಂಗಿಕವಾಗಿ ಪೀಡಿಸಿದ ಆರೋಪದ ಮೇಲೆ ರಾಜಸ್ಥಾನ ರೈಫಲ್ ಒಕ್ಕೂಟದ ತರಬೇತುದಾರನ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

ಮಹಿಳೆಯರ ಪರವಾಗಿ ಒಕ್ಕೂಟದ ಜಂಟಿ ಕಾರ್ಯದರ್ಶಿ ನೀಡಿದ ದೂರು ಆಧರಿಸಿ ಎಫ್.ಐ.ಆರ್. ದಾಖಲಿಸಲಾಗಿದೆ.

ತರಬೇತುದಾರ ಶಶಿಕಾಂತ ಶರ್ಮ ಇಬ್ಬರು ಆಟಗಾರ್ತಿಯ ಮೇಲೆ ಅತ್ಯಾಚಾರ ಎಸಗಿದ್ದಾನೆ ಮತ್ತು ಮೂವರನ್ನು ಲೈಂಗಿಕವಾಗಿ ಪೀಡಿಸಿದ್ದಾನೆ ಎಂದು ಆರೋಪಿಸಲಾಗಿದೆ.

ಇನ್ನಷ್ಟು ಆಟಗಾರ್ತಿಯರು ಈತನ ಪೀಡನೆಗೆ ಸಿಲುಕಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿರುವುದಾಗಿ ಮಾಳವೀಯ ನಗರದ ಠಾಣಾಧಿಕಾರಿ ಪೂನಂ ಕುಮಾರಿ ತಿಳಿಸಿದ್ದಾರೆ.


**ಶ್ರೀ ವೀರಮಾಹೇಶ್ವರ ಕೋ ಆಪ್ ಸೊಸೈಟಿ**
8ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ -02
08192 25963, 78292 71401

**ಬೇಕಾಗಿದ್ದಾರೆ**

1) **ಸಹಾಯಕರು** (ಪುರುಷ) (ತಾತ್ಕಾಲಿಕ ಹುದ್ದೆ) :
ಬಿಕಾಂ, ಬಿ.ಬಿ.ಎಂ / ತತ್ಸಮಾನ
(ಬ್ಯಾಂಕಿಂಗ್ ವಲಯದಲ್ಲಿ ಕನಿಷ್ಠ 2 ವರ್ಷ ಅನುಭವ)

2) **ಅಟೆಂಡರ್** (ಮಹಿಳೆ) : ಎಸ್.ಎಸ್.ಎಲ್.ಸಿ. ಉತ್ತೀರ್ಣ

**ವಯೋಮಿತಿ 18 ರಿಂದ 28 ವರ್ಷ**

*ಆಸಕ್ತರು ದಿನಾಂಕ 25.10.2023ರೊಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಲು ತಿಳಿಸಿದೆ.*

ಅಧ್ಯಕ್ಷರು
ತ್ಯಾವಣಗಿ ವೀರಭದ್ರಸ್ವಾಮಿ

ಪ್ರಭಾರಿ ಕಾರ್ಯದರ್ಶಿ
ಐನಳ್ಳಿ ನಾಗರಾಜಯ್ಯ


# ನಗರದಲ್ಲಿ ನಾಳೆ ವಿಭಾಗೀಯ ಅಂಚೆ ಅದಾಲತ್

ದಾವಣಗೆರೆ, ಅ. 10 - ಪ್ರಧಾನ ಅಂಚೆ ಕಚೇರಿಯಲ್ಲಿರುವ ಜಿಲ್ಲಾ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ನಾಳೆ ದಿ. 12ರಂದು ಸಂಜೆ ಅಂಚೆ ವಿಭಾಗೀಯ ಡಾಕ್ ಅದಾಲತ್ತನ್ನು ಆಯೋಜಿಸಲಾಗಿದೆ.


**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೇ, ನನ್ನ ಕಕ್ಷಿದಾರರಾದ ಶ್ರೀಮತಿ ಸುನೀತಾ ಕೋಂ ಶಿವಕುಮಾರ್ ಸುಮಾರು 46 ವರ್ಷ ವಯಸ್ಸು, ದಾವಣಗೆರೆಯ ವಿನಾಯಕ ಬಡಾವಣೆಯಲ್ಲಿನ ಮೊದಲ ಮುಖ್ಯ ರಸ್ತೆ, 2ನೇ ತಿರುವು, ತರಳಬಾಳು ಕೃಷಿ ವಿಜ್ಞಾನ ಶಾಲೆಯ ಹಿಂದುಗಡೆಯಿರುವ ಮನೆ ನಂ. 5413/18 ರ ನಿವಾಸಿಯಾದ ಇವರು ಈ ತಿಳುವಳಿಕೆಯ ಷೆಡ್ಯೂಲ್ ನಲ್ಲಿ ನಮೂದಿಸಿರುವ ಷೆಡ್ಯೂಲ್ ಸ್ವತ್ತುಗಳಲ್ಲಿ 1/5 ಭಾಗ ಜನ್ಮ ಸಿದ್ಧ ಹಿಸ್ಸಾ ಹಕ್ಕನ್ನು ಹೊಂದಿದ್ದು, ಸದರಿ ಹಿಸ್ಸಾ ವಿಂಗಡನೆ ಮಾಡಿಕೊಡುವಂತೆ ಪ್ರಾರ್ಥಿಸಿ ದಾವಣಗೆರೆಯ ಹಿರಿಯ ಸಿವಿಲ್ ನ್ಯಾಯಾಧೀಶರ ಘನ ನ್ಯಾಯಾಲಯದಲ್ಲಿ ಸೂಕ್ತ ಪರಿಹಾರ ಕೇಳಿ ದಾವೆ ಹೂಡಲಿದ್ದಾರೆ. ಈ ವಿಚಾರ ತಿಳಿದ ಶ್ರೀಮತಿ ಸುನೀತಾರವರ ತಂದೆಯಾದ ಶ್ರೀ ರಾಮಚಂದ್ರಪ್ಪನವರು, ಈಗಾಗಲೇ ಶ್ರೀಮತಿ ಸುನೀತಾರವರ ವಿರುದ್ಧ ಕೇವಿಯೇಟ್ ಅರ್ಜಿಯನ್ನು ಸಲ್ಲಿಸಿದ್ದು ಈ ಹಂತದಲ್ಲಿ ಸಾರ್ವಜನಿಕರು ಯಾರೇ ಆಗಲಿ ಷೆಡ್ಯೂಲ್ ಸ್ವತ್ತುಗಳನ್ನಾಗಲಿ ಅಥವಾ ಅವುಗಳ ಪೈಕಿ ಯಾವುದೇ ಸ್ವತ್ತನ್ನಾಗಲೀ ಶ್ರೀ ರಾಮಚಂದ್ರಪ್ಪನವರಿಂದ, ಶ್ರೀಮತಿ ರತ್ನಮ್ಮನವರಿಂದ, ಶ್ರೀ ಬಸವರಾಜರವರಿಂದ ಅಥವಾ ಶ್ರೀ ಲಿಂಗರಾಜರವರಿಂದ ಪ್ರತ್ಯೇಕವಾಗಲೀ ಅಥವಾ ಒಟ್ಟಾಗಿ ಕೊಂಡುಕೊಳ್ಳುವ ಅಥವಾ ಇನ್ಯಾವುದೇ ರೀತಿಯಲ್ಲಿ ವ್ಯವಹರಿಸುವುದಾಗಲೀ ಮಾಡಬಾರದೆಂದೂ, ಒಂದು ವೇಳೆ ಹಾಗೆ ಯಾವುದೇ ರೀತಿಯಲ್ಲಿ ವ್ಯವಹರಿಸಿದಲ್ಲಿ ಮುಂದೆ ಆಗುವ ನಷ್ಟಕ್ಕೆ ಅವರೇ ಹೊಣೆಗಾರರಾಗಿರುತ್ತಾರೆಂದು ಸಾರ್ವಜನಿಕ ತಿಳುವಳಿಕೆ ನೀಡುವಂತೆ ನಮ್ಮ ಕಕ್ಷಿದಾರರು ಕೋರಿದ್ದು, ಅವರ ಕೋರಿಕೆಯಂತೆ ಈ ತಿಳುವಳಿಕೆಯನ್ನು ಪ್ರಕಟಿಸಿದೆ.

**ಷೆಡ್ಯೂಲ್ ಸ್ವತ್ತು**

**ಸ್ವತ್ತು ನಂ. 1:** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಬನೂರು ಗ್ರಾಮದ ಸರ್ವೆ ನಂ. 226/1ಎಪಿ1ರಲ್ಲಿ ಇರುವ 1 ಎಕರೆ 19 ಗುಂಟೆ ವ್ಯವಸಾಯ ಭೂಮಿ.

**ಸ್ವತ್ತು ನಂ. 2:** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಬನೂರು ಗ್ರಾಮದ ಸರ್ವೆ ನಂ. 222/1 ರಲ್ಲಿ ಇರುವ 4 ಎಕರೆ 1 ಗುಂಟೆ ಇರುವ ವ್ಯವಸಾಯ ಭೂಮಿ.

**ಸ್ವತ್ತು ನಂ. 3:** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ನಾಗರಸನಹಳ್ಳಿ ಗ್ರಾಮದ ಸರ್ವೆ ನಂ. 66/1 ರಲ್ಲಿ ಇರುವ 6 ಎಕರೆ 1 ಗುಂಟೆ ಇರುವ ವ್ಯವಸಾಯ ಭೂಮಿ.

**ಸ್ವತ್ತು ನಂ, 4:** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ವಡೇರಹಳ್ಳಿ ಗ್ರಾಮದ ಸರ್ವೆ ನಂ. 14/2 ರಲ್ಲಿ ಇರುವ 3 ಎಕರೆ 32 ಗುಂಟೆ ಇರುವ ವ್ಯವಸಾಯ ಜಮೀನು,

**ಸ್ವತ್ತು ನಂ. 5:** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ವಡೇರಹಳ್ಳಿ ಗ್ರಾಮದ ಸರ್ವೆನ 14/6 ರಲ್ಲಿ ಇರುವ 1 ಎಕರೆ 34 ಗುಂಟೆ ಇರುವ ವ್ಯವಸಾಯ ಜಮೀನು.

**ಸ್ವತ್ತು ನಂ. 6:** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ವಡೇರಹಳ್ಳಿ ಗ್ರಾಮದ ಸರ್ವೆ ನಂ. 14/7 ರಲ್ಲಿ ಇರುವ 1 ಎಕರೆ 34 ಗುಂಟೆ ಇರುವ ವ್ಯವಸಾಯ ಜಮೀನು.

**ಸ್ವತ್ತು ನಂ. 7:** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಬನೂರು ಗ್ರಾಮದ ಸರ್ವೆಸ ನಂ. 168/1 ರಲ್ಲಿ ಇರುವ 30 ಗುಂಟೆ ವ್ಯವಸಾಯ ಜಮೀನು.

**ಸ್ವತ್ತು ನಂ. 8:** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಬನೂರು ಗ್ರಾಮದ ಸರ್ವೆ ನಂ, 168/2ಪಿ ರಲ್ಲಿ ಇರುವ 08.12 ಗುಂಟೆ ವ್ಯವಸಾಯ ಜಮೀನು.

**ಬಿಂಬಾಧರ್ ಎಮ್. ಗೌಡರ್**, ವಕೀಲರು
ಶ್ರೀ ಸಾಯಿರಂಗ ಬಿಲ್ಡಿಂಗ್, ನಂ. 58, ಆರನೇ ತಿರುವು, ಸಂಪಿಗೆ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560003. **ಮೊ : 94491 02902**

# ಆದಿಚುಂಚನಗಿರಿ ಸ್ವಾಮೀಜಿ ಭೇಟಿ ಮಾಡಿದ ಮುಸ್ಲಿಂ ಬಾಂಧವ್ಯ ವೇದಿಕೆ ನಿಯೋಗ



ದಾವಣಗೆರೆ, ಅ.10- ಮುಸ್ಲಿಂ ಸಾಹಿತಿಗಳು, ಲೇಖಕರು, ಚಿಂತಕರು ಮತ್ತು ಸಾಧಕರ ವೇದಿಕೆಯಾದ ಮುಸ್ಲಿಂ ಬಾಂಧವ್ಯ ವೇದಿಕೆ ನಿಯೋಗ ಆದಿಚುಂಚನಗಿರಿ ಮಠದಲ್ಲಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಭೇಟಿ ಮಾಡಿ ಸುದೀರ್ಘ ಮಾತುಕತೆ ನಡೆಸಿತು.

ಸಂಘಟನೆಯ ಉದ್ದೇಶ, ಕಾರ್ಯ ಮತ್ತು ಸ್ವರೂಪದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಸ್ವಾಮೀಜಿಗಳು, ಕರ್ನಾಟಕದಲ್ಲಿ ಮುಸ್ಲಿಂ ಬಾಂಧವ್ಯ ವೇದಿಕೆಯು ಎಲ್ಲ ಸಮುದಾಯಗಳ ನಡುವಿನ ಬಾಂಧವ್ಯಕ್ಕೆ ಹೊಸ ಭಾಷ್ಯ ಬರೆಯಲಿದೆ. ಸಮುದಾಯಗಳ ನಡುವೆ ಕಾರಣಾಂತರಗಳಿಂದ ಉದ್ಭವವಾಗುವ ಸಮಸ್ಯೆಗಳನ್ನು ನಿಭಾಯಿಸಲು ಮತ್ತು ಸೂಕ್ತ ಸಂಪರ್ಕ ಸಾಧಿಸಲು ಇಂತಹ ಪ್ರಬುದ್ಧರ ವೇದಿಕೆಗಳು ಅವಶ್ಯಕ ಎಂದರು.

ನಿಯೋಗದಲ್ಲಿ ಅಧ್ಯಕ್ಷ ಅನೀಸ್ ಪಾಷಾ, ಕಾರ್ಯದರ್ಶಿ ಮುಷ್ತಾಕ್ ಹೆನ್ನಾಬೈಲ್, ಖಜಾಂಚಿ ಮುಬಾರಕ್ ಗುಲ್ವಾಡಿ, ನಜೀರ್ ಬೆಳುವಾಯಿ, ರಶೀದ್ ಉಪ್ಪಿನಂಗಡಿ, ಚಮನ್ ಷರೀಫ್ ಚಿತ್ರದುರ್ಗ, ಸಯ್ಯದ್ ಗನಿ ಖಾನ್ ಮಂಡ್ಯ, ಅಬ್ದುಲ್ ರೆಹಮನ್ ಬಿದರಕುಂದಿ, ದಸ್ತಗೀರ್ ಕಲಹಳ್ಳಿ, ಇಬ್ರಾಹಿಮ್ ಸಾಬ್ ಕೋಟಾ, ಮುಜಾಫರ್ ಹುಸೈನ್ ಪಿರಿಯಾಪಟ್ಟಣ, ಜಾಕೀರ್ ಹುಸೇನ್, ಎಸ್ ಕೆ ಇಬ್ರಾಹಿಮ್, ಲೋಹಾನಿ ಮಳಗಿ, ಅಶ್ರಫ್ ಕುಂದಾಪುರ, ಉಸ್ಮಾನ್ ಹೈಕಾಡಿ, ಹಕೀಮ್ ತೀರ್ಥಹಳ್ಳಿ, ಇಕ್ಬಾಲ್ ಹಾಲಾಡಿ ಮತ್ತು ಸ್ಥಳೀಯ ಮುಖಂಡರಾದ ಅಭಿಗೌಡ ಮತ್ತು ಕಲಿಮುಲ್ಲಾ ನಾಗಮಂಗಲ ಉಪಸ್ಥಿತರಿದ್ದರು.

## ರಾಣೇಬೆನ್ನೂರಿನ ಸೊಸೈಟಿ ಪ್ರಗತಿಗೆ ಪ್ರಭಾಕರ್ ಕೋರೆ ಮೆಚ್ಚುಗೆ

ರಾಣೇಬೆನ್ನೂರು, ಅ.10- ತಮ್ಮ ಹೆಸರಿನ 49 ಶಾಖೆಗಳಲ್ಲಿ ರಾಣೇಬೆನ್ನೂರಿನ ಶಾಖೆ 22-23ನೇ ಸಾಲಿನಲ್ಲಿ ಬಹಳಷ್ಟು ಪ್ರಗತಿ ಸಾಧಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿರುವ ಸಂಸ್ಥಾಪಕ ಅಧ್ಯಕ್ಷ ಪ್ರಭಾಕರ ಕೋರೆ ಅವರು, ಶಾಖೆಗೆ ಫಲಕ ಹಾಗೂ ಪ್ರಶಸ್ತಿ ಪತ್ರ ನೀಡಿದ್ದಾರೆ ಎಂದು ಸ್ಥಳೀಯ ಅಧ್ಯಕ್ಷ ವಿ.ಪಿ.ಲಿಂಗನಗೌಡ ತಿಳಿಸಿದ್ದಾರೆ.

ಬ್ಯಾಂಕಿನ ಕಛೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಠೇವು ಸಂಗ್ರಹಣೆ, ಸಾಲ ನೀಡಿಕೆ ಮತ್ತು ಸಾಲ ವಸೂಲಾತಿಯಲ್ಲಿ ಎಲ್ಲ ಶಾಖೆಗಳಿಗಿಂತ ರಾಣೇಬೆನ್ನೂರು ಶಾಖೆ ಮುಂಚೂಣಿಯಲ್ಲಿದೆ ಎಂದು ಲಿಂಗನಗೌಡ ಹೇಳಿದರು. ಉಮೇಶ ಹೊನ್ನಾಳಿ, ಜಿ.ಜಿ. ಹೊಟ್ಟಿಗೌಡ್ರ, ಉಮೇಶ ಗುಂಡಗಟ್ಟಿ, ಈರಣ್ಣ ಅಂಗಡಿ, ಮ್ಯಾನೇಜರ್ ಮನೋಹರ ಬಡಿಗೇರ ಮತ್ತು ಪ್ರದೀಪಸಿಂಗ್ ಬಾಬುಸಿಂಗ್ ಇದ್ದರು.

## ಸೈಕಲ್ ವಿತರಣೆ

ದಾವಣಗೆರೆ, ಅ.10- ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಕಡು ಬಡವ ವಿದ್ಯಾರ್ಥಿಗಳಿಗೆ, ಕೂಲಿ ಕಾರ್ಮಿಕರಿಗೆ ಸೈಕಲ್ ಗಳನ್ನು ವಿತರಿಸಲಾಗುತ್ತದೆ.


ಟ್ರಸ್ಟ್ 200 ಸೈಕಲ್‌ಗಳನ್ನು ವಿತರಿಸುವ ಗುರಿ ಹೊಂದಿದ್ದು, ದಾನಿಗಳು ಹೊಸ ಸೈಕಲ್‌ಗೆ 7 ಸಾವಿರ ರೂ. ಮತ್ತು ಹಳೆಯ ಸೈಕಲ್ ಗೆ 3 ಸಾವಿರ ರೂ. ಧನಸಹಾಯ ಮಾಡಿ ಸಹಕರಿಸಬೇಕಾಗಿ ವಿನಂತಿ.

ತಮ್ಮಲ್ಲಿ ಉಪಯೋಗಿಸದೆ ಹಾಗೆಯೇ ಉಳಿದಿರುವ ಹಳೆಯ ಸೈಕಲ್‌ಗಳನ್ನು ದಾನ ಮಾಡುವ ಮೂಲಕ ಬಡವರ ಜೀವನ ನಿರ್ವಹಣೆಗೆ ಸಹಕರಿಸಿ. ಸಂಪರ್ಕಿಸಿ : 9538024422

# ಭಗವಂತನ ನಾಮ ಸ್ಮರಣೆಯಿಂದ ಮುಕ್ತಿ ಸಂಪಾದನೆ

ಬರುವಾಗ ಬೆತ್ತಲೆ, ಹೋಗುವಾಗ ಬೆತ್ತಲೆ. ಬಂದು ಹೋಗುವ ನಡುವೆ ಬರೀ ಕತ್ತಲೆ. ಭಕ್ತಿಯ ಬೆಳಕು ಬಾಳಿಗೆ ಬೇಕು. ಮುಕ್ತಿಗೆ ವಿಠ್ಠಲನ ಕೊಂಡಾಡಬೇಕು ಎಂಬ ನುಡಿಮುತ್ತನ್ನು ನೋಡಿದಾಗ, ಭಕ್ತಿಯ ಬೆಳಕಿನಿಂದ ಮುಕ್ತಿಗೆ ದಾರಿಯನ್ನು ಹುಡುಕಬೇಕಾಗಿದೆ. ಇದುವೇ ಮೋಕ್ಷ ಸಾಧನೆಗೆ ಮಾರ್ಗ. ಇದು ಮನುಷ್ಯ ಜನ್ಮದಲ್ಲಿ ಮಾತ್ರ ಸಾಧ್ಯ. ಮನುಷ್ಯ ಜನ್ಮ ಸಿಕ್ಕಿರುವುದೇ ದುರ್ಲಭ. ಈ ಜನ್ಮಕ್ಕೆ ನಾವು ಬರಬೇಕಾದರೆ ಹಲವು ಜನ್ಮಗಳನ್ನು ದಾಟಿ ಬರಬೇಕಾಗುತ್ತದೆ.

ವೃಕ್ಷ, ಗಿಡ, ಮರ, ಬಳ್ಳಿ, ಜಲಚರಗಳಲ್ಲಿ, ಕ್ರಿಮಿಕೀಟಗಳಲ್ಲಿ, ಪಕ್ಷಿ ಜಾತಿಗಳಲ್ಲಿ,ಮೃಗ, ಪಶುಜಾತಿಗಳಲ್ಲೆದರಲ್ಲೂ ಸಹ ಹಲವು, ಹಲವು ಸಾರಿ ಹುಟ್ಟಿ ನಂತರ ಮನುಷ್ಯ ಜನ್ಮಕ್ಕೆ ಕಾಲಿಡುತ್ತಾನೆ. ಈ ಜನ್ಮದಲ್ಲಿಯೂ ಸಹ ಹಲವು, ಹಲವು ಸಾರಿ ಜನ್ಮವೆತ್ತಿ ಪಾಪ-ಕರ್ಮಗಳೆಂಬ ಕೂಪದಲ್ಲಿ ಬಿದ್ದು, ಬಿದ್ದು ಬರಬೇಕಾಗುತ್ತದೆ. ಈ ಜನ್ಮದಲ್ಲಿ ಮೋಕ್ಷ ಸಾಧನೆಯಾಗದಿದ್ದರೆ, ಪುನರಪಿ ಜನನಂ ಪುನರಪಿ ಮರಣಂ, ಎಂಬಂತಾಗುತ್ತದೆ. ಮೋಕ್ಷ ಸಾಧನೆಗೆ ಭಗವಂತನ ನಾಮ ಸ್ಮರಣೆಯಿಂದ ಮುಕ್ತಿ ಸಂಪಾದನೆ ಮಾಡಬಹುದಾಗಿದೆ. ಇಂದ್ರಾದಿ ದೇವತೆಗಳಿಗೂ ಮುಕ್ತಿ ಪಡೆಯಲು ಸಾಧ್ಯವಿಲ್ಲ. ಅಲ್ಲಿ ಐಹಿಕ ಸುಖಭೋಗಗಳು ಮಾತ್ರ ಲಭ್ಯವಾಗುತ್ತವೆ. ಇಂದ್ರಾದಿ ದೇವತೆಗಳೂ ಸಹ ಭೂ ಲೋಕದಲ್ಲಿ ಮನುಷ್ಯರಾಗಿ ಜನಿಸಿ ಮುಕ್ತಿ ಪಡೆಯಬೇಕಾಗುತ್ತದೆ. ಇಲ್ಲದಿದ್ದರೆ ಇಲ್ಲ. ಬ್ರಹ್ಮದೇವನ ಪ್ರಹರದಲ್ಲಿ 14 ಜನ ಇಂದ್ರರಲ್ಲಿ ಚಾಂಗ ಎಂಬ ಇಂದ್ರನು ಕಾರಣಾಂತರದಿಂದ ಕಾರಾಗೃಹದಲ್ಲಿದ್ದು, ನಾರದಮುನಿಗಳು ಅಲ್ಲಿಗೆ ಬಂದಾಗ ಚಾಂಗ ಎಂಬ ಇಂದ್ರನು ನಾರದರಿಗಾಗಿ ಬಿಡುಗಡೆಯಾಗಿ ಮೋಕ್ಷ ಸಾಧನೆಯ ಮಾರ್ಗ ತಿಳಿಸಿ ಎಂದು ಬೇಡಿಕೊಂಡಾಗ, ಇಂದ್ರ ಲೋಕದಲ್ಲಿ ಇದು ಸಾಧ್ಯವಿಲ್ಲ. ನೀನು ಭೂ ಲೋಕದಲ್ಲಿ ಭಗವಂತನ ಸನ್ನಿಧಿಯಾದ ಪಂಡರೀಪುರ ತೀರ್ಥ ಕ್ಷೇತ್ರದಲ್ಲಿ ಅವತಾರ ತಾಳಿ, ಅಲ್ಲಿ ಸಂತರ ಸಂಗದಲ್ಲಿ ಸೇರಿ ಹರಿಕೀರ್ತನೆ ಭಜನೆ ಮಾಡಿ, ಮೋಕ್ಷವನ್ನು ಪಡೆ ಎಂದು ಮಂತ್ರೋಪದೇಶ ಮಾಡಿದರು. ಈ




ಮಂತ್ರೋಪದೇಶದ ಸಾಧನೆಯಿಂದ ಬಿಡುಗಡೆಯಾದ ಕೆಲ ವರ್ಷದ ನಂತರ ಪಂಡರೀಪುರ ಕ್ಷೇತ್ರದಲ್ಲಿ ವಿಠೋಬ ರುಕ್ಮಿಣಿ ಎಂಬ ವೃದ್ಧ ದಂಪತಿಯ ಉದರದಲ್ಲಿ ಜನಿಸಿದನು. ಬಹಳ ವರ್ಷಗಳ ನಂತರ ಸಂತಾನವಾಗದಿದ್ದರಿಂದ ಸಂತೋಷಪಟ್ಟು ಸಮಯಕ್ಕೆ ಸರಿಯಾಗಿ ಮುಂಜಿ ಮತ್ತು ಮದುವೆಯನ್ನು ಮಾಡಿದರು. ಮಂತ್ರ ಸಾಧನೆಯ ಯೋಗದಿಂದ ಸಕಲ ವೇದ ಶಾಸ್ತ್ರ ಪಾರಂಗತನಾದನು. ಅರವತ್ತು ನಾಲ್ಕು ಕಲೆಗಳಲ್ಲಿ ಪಾರಂಗತನಾದನು, ವೃದ್ಧಿ, ಸಿದ್ಧಿಗಳೆಲ್ಲವೂ ಆತನ ದಾಸರಾದರು. ತನ್ನ ಆತ್ಮವನ್ನು ದೇಹದಿಂದ ಬೇರ್ಪಡಿಸಿ, ಬ್ರಹ್ಮಾಂಡದಲ್ಲಿಡುವ ವಿದ್ಯೆಯು ಆತನಿಗೆ ಸಂಪೂರ್ಣವಾಗಿ ತಿಳಿದಿತ್ತು. ಅವನ ಶರೀರಕ್ಕೆ ನೂರು ವರ್ಷ ಆಯುಸ್ಸು ತುಂಬಿ ಮೃತ್ಯುಕಾಲ ಬಂದಾಗ ಅವನು ತನ್ನ ಆತ್ಮವನ್ನು ಬ್ರಹ್ಮಾಂಡದ ಅಂದರೆ ಪಿಂಡಾಂಡದ ಬ್ರಹ್ಮ ರಂಧ್ರದಲ್ಲಿರಿಸಿ ಮರಣದ ಸಂಧಿಕಾಲವು ಮುಗಿದೊಡನೆ ಅವನು ಆತ್ಮವನ್ನು ತನ್ನ ದೇಹದಲ್ಲಿ ತರುತ್ತಿದ್ದನು. ಈ ಪ್ರಕಾರವಾಗಿ ಕಾಲಚಕ್ರದ ಬಾಧೆಯಿಲ್ಲದೆ 14 ನೂರು ವರ್ಷ ಬಾಳಿದನು. ಇವನಿಗೆ ಸಾವಿರಾರು ಮಂದಿ ಶಿಷ್ಯರಿದ್ದರು. ಶಿಷ್ಯರ ಸಮೇತ ಆಕಾಶದಲ್ಲಿ ಹಾರಾಡುವ ಸಾಮರ್ಥ್ಯ ಗಳಿಸಿದ್ದನು.

ಇಂತಹದೊಂದು ವಿದ್ಯೆ ನಮ್ಮ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮಿಗಳಿಗೆ ತಿಳಿದಿತ್ತು. ಅವರಿಗೆ ಮೃತ್ಯುಕಾಲ ಬಂದಾಗ ಬ್ರಹ್ಮಾಂಡದ ಪಿಂಡಾಂಡದ ಬ್ರಹ್ಮ ರಂಧ್ರದಲ್ಲಿರಿಸಿ ಕಾಲನ ಘಳಿಗೆ ಮುಗಿದ ಕೂಡಲೇ ಪುನಃ ಆತ್ಮವನ್ನು ತನ್ನ ದೇಹದಲ್ಲಿ ತರುತ್ತಿದ್ದರು. ಇವರು ಮಾಡುವ ಕ್ರಮವನ್ನು ಹೊಸದುರ್ಗ ತಾಲ್ಲೂಕಿನ (ಚಿತ್ರದುರ್ಗ ಜಿಲ್ಲೆ) ಬೂದಾಳು ಶ್ರೀರಾಂಪುರದ ಶ್ರೀ ಗುರು ಪರಪ್ಪ ಸ್ವಾಮೀಜಿಯವರು ಆಕ್ಷೇಪಿಸಿ, ಅವರು ತಮ್ಮದೇ ಆದ ಭಾಷೆಯಲ್ಲಿ 'ಹೇ ಗುರುಸಿದ್ಧ ನೀನು ಜೀವಗಳ್ಳ'. ಎಂದಾದರೊಮ್ಮೆ ಕಾಯ ಬಿಡಬೇಕು. ಅಂದಾಗ ಇದನ್ನರಿತ ಶ್ರೀ ಸಿದ್ಧಾರೂಢರು ಕೆಲ ದಿನಗಳ ನಂತರ ಕಾಯ ಬಿಟ್ಟರು. ಶ್ರೀ ಸಿದ್ಧಾರೂಢರು ಇಹಲೋಕ ತ್ಯಜಿಸಿದಾಗ, ಶ್ರೀ ಗುರು ಪರಪ್ಪ ಸ್ವಾಮಿಗಳು ಶ್ರೀರಾಂಪುರದ ತಮ್ಮ ಆಶ್ರಮದಲ್ಲಿ ಶಿಷ್ಯರೊಂದಿಗೆ ಇದ್ದಾಗ 'ಸಿದ್ಧ ಹೋದ ಬೆಳಗಿ ಆರತಿಯನ್ನು' ಎಂದರು. ಅಲ್ಲಿದ್ದ ಭಕ್ತರಿಗೆ ಆಶ್ಚರ್ಯ, ಆತಂಕ. ನಂತರ ಬಂದ ದೂರವಾಣಿ ಕರೆಯಲ್ಲಿ ಶ್ರೀ ಗುರು ಸಿದ್ಧಾರೂಢರು ದೇಹತ್ಯಾಗ ಮಾಡಿದರು ಎಂದರು. ಹೀಗೆ ಶ್ರೀ ಗುರು ಪರಪ್ಪ ಸ್ವಾಮಿಗಳು ಭೂತ, ಭವಿಷ್ಯ, ವರ್ತಮಾನದ ಸಂಗತಿಯನ್ನು ಕುಳಿತಲ್ಲಿಯೇ ಹೇಳುತ್ತಿದ್ದರು. ಶ್ರೀ ಗುರು ಪರಪ್ಪ ಸ್ವಾಮಿಗಳ ಮಠ ಬಹಳ ಪ್ರಸಿದ್ಧಿ ಪಡೆದಿದೆ.

ಚಾಂಗದೇವನು ಜ್ಞಾನದೇವರ ಕೀರ್ತಿಯನ್ನು ಕೇಳಿ ಮೋಕ್ಷ ಪಡೆಯುವ ಉಪದೇಶ ಪಡೆಯಬೇಕೆಂದು ಪತ್ರ ಬರೆಯಲು ಕುಳಿತನು. ಚಿರಂಜೀವಿ ಅಥವಾ ತೀರ್ಥರೂಪು ಏನು ಬರೆಯಬೇಕೆಂದು ತಿಳಿಯದೇ ಬರಿ ಬಿಳಿಯ ಹಾಳೆಯನ್ನು ತನ್ನ ಶಿಷ್ಯನೊಂದಿಗೆ ಕಳಿಸಿದನು. ಇದನ್ನು ಜ್ಞಾನದೇವರು ನೋಡಿ ಇವನ ಹೃದಯವು ಇನ್ನೂ ಬಿಳಿಯ ಕಾಗದ ಇರುವುದೆಂದು ಉಪದೇಶದ 65 ಓವಿಗಳನ್ನು (ಓವಿ ಎಂಬ ಛಂದಸ್ಸು) ಬರೆದು ಕಳುಹಿಸಿದನು. ಈ ಅಭಂಗಗಳಿಗೆ 'ಚಾಂಗದೇವ ಪಾಸಷ್ಟಿ' ಎಂಬ ಹೆಸರು ಬಂದಿದೆ.

ಮರುದಿನ ಚಾಂಗದೇವನು ಮಹಾವಿಷ್ಣುವಿನ ಅವತಾರಿಯಾದ ಜ್ಞಾನದೇವರ ಭೇಟಿಗೆ ಹೊರಟನು. ಅವನು ಹುಲಿಯನ್ನೇರಿ ಕೈಯಲ್ಲಿ ಭೀಕರವಾದ ಸರ್ಪಗಳನ್ನು ಚಾಬೂಕವಾಗಿ ಹಿಡಿದು ಆಕಾಶ ಮಾರ್ಗದಲ್ಲಿ ಬರುತ್ತಿದ್ದನು. ಆಗ ಬಾಲಕರಾದ ನಿವೃತ್ತಿ ಜ್ಞಾನದೇವ, ಸೋಪಾನ, ಮುಕ್ತಾಬಾಯಿ ಈ ನಾಲ್ಕು ಜನ ಮುಂಜಾನೆ ಬಿಸಿಲನ್ನು ಕಾಯಿಸುತ್ತಾ, ಒಂದು ಗೋಡೆಯ ಮೇಲೆ ಕುಳಿತಿದ್ದರು. ಚಾಂಗದೇವನು ಬರುವುದನ್ನು ಕಂಡು ಜ್ಞಾನೇಶ್ವರರು ತಾವು ಕುಳಿತ ಮಣ್ಣಿನ ಗೋಡೆಯನ್ನೇ ನಡೆಸುತ್ತಾ, ಚಾಂಗದೇವನನ್ನು ಸ್ವಾಗತಿಸುತ್ತಾರೆ. ಸಜೀವ ವಸ್ತುಗಳನ್ನು ಅಂಕಿತದಲ್ಲಿ ಇಟ್ಟುಕೊಳ್ಳಬಹುದು. ನಿರ್ಜೀವ ವಸ್ತುಗಳನ್ನು ಸಜೀವಿಗಳಂತೆ ಜೀವಕಳೆಯನ್ನು ತುಂಬಿ ಉಪಯೋಗಿಸಿಕೊಳ್ಳುವುದು ಚಾಂಗದೇವನಿಗೆ ಅರಿವನ್ನುಂಟುಮಾಡಿ, ಅವನಲ್ಲಿದ್ದ ಅಹಂಕಾರ ಕರಗಿ ನೀರಾಗಿ ಸಂಪೂರ್ಣ ಶರಣಾಗತನಾಗುತ್ತಾನೆ. ನಂತರ ಅಲ್ಲಿಯೇ ಇದ್ದ ವಟ ವೃಕ್ಷದ ಕೆಳಗೆ ಕುಳಿತು ಚರ್ಚಿಸಿ, ತಮ್ಮ ಕುಟೀರಕ್ಕೆ ಕರೆತಂದು ಉಪದೇಶವನ್ನು ಮಾಡುತ್ತಾರೆ. ಹೀಗೆ ಚಾಂಗದೇವನು ಪಂಡರೀನಾಥನ ನಿಜವಾದ ಭಕ್ತನಾದನು. ಪಂಡರೀನಾಥನ ಮಹಿಮೆಯನ್ನು ಕೊಂಡಾಡುತ್ತಾ, ಕಾಲ ಕಳೆದು ಮುಂದೆ ಅಂತ್ಯದಲ್ಲಿ ಗೋದಾ ತೀರದ ಪುಣೆತಾಂಬದಲ್ಲಿ ಮಾಘಮಧ್ಯ ತ್ರಯೋದಶಿಯಂದು ಭಗವಂತನಾದ ಶ್ರೀ ಪಾಂಡುರಂಗ ವಿಠ್ಠಲ ಮತ್ತು ನಿವೃತ್ತಿನಾಥರ ಸಮ್ಮುಖದಲ್ಲಿ ಜೀವಂತ ಸಮಾಧಿಯಾಗುತ್ತಾರೆ.

ಪ್ರತಿ ವರ್ಷ ಆಷಾಢ ಶುದ್ಧ ಏಕಾದಶಿ ಜಾತ್ರೆಯಲ್ಲಿ ಚಾಂಗದೇವರ ರಥವು ತನ್ನ ಶಿಷ್ಯ ಪರಂಪರೆಯು ಭಾಗವಹಿಸುವುದು ವಿಶೇಷವಾಗಿರುತ್ತದೆ. ಅದಕ್ಕೆ ಹೇಳುವುದು ಭಕ್ತಿಯ ಬೆಳಕು ಬಾಳಿಗೆ ಬೇಕು, ಮುಕ್ತಿಗೆ ವಿಠ್ಠಲನ ಕೊಂಡಾಡಬೇಕು ಎಂದು. ಇದು ಶ್ರೀ ರುಕ್ಮಿಣಿ ರಮಣಿ ಶ್ರೀ ಪಾಂಡುರಂಗ ವಿಠ್ಠಲ ಚರಣ ಕಮಲಕ್ಕೆ ಭಕ್ತಿಯಿಂದ ಅರ್ಪಿಸುವ ತುಳಸಿ ಪುಷ್ಪಮಾಲೆ.



- ಶ್ರೀ ಜಿ. ಪರಪ್ಪ ಸೇಲ್ಕರ್,
ನಿವೃತ್ತ ಶಿಕ್ಷಕರು,
ದಾವಣಗೆರೆ.
ಮೊ : 63639 65282

# ವಿಕಲಚೇತನರ ಸೌಲಭ್ಯಗಳಿಗೆ ಅನುದಾನದ ಭರವಸೆ

## ಹೊನ್ನಾಳಿ 'ಜೀವ' ಪುನಶ್ಚೇತನ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ಶಾಂತನಗೌಡ

ಹೊನ್ನಾಳಿ, ಅ.10- ಶಾಸಕರ ನಿಧಿಯಿಂದ ಬರುವ ಹಣದಲ್ಲಿ ವಿಕಲಚೇತನರ ಸೌಲಭ್ಯಗಳಿಗೆ ಅನುದಾನ ಒದಗಿಸಿಕೊಡಲಾಗುವುದು ಎಂದು ಶಾಸಕ ಡಿ.ಜಿ.ಶಾಂತನಗೌಡ ಭರವಸೆ ನೀಡಿದರು.

ಪಟ್ಟಣದ ಸರ್ವರ್ ಕೇರಿಯಲ್ಲಿ ಸ್ಫೂರ್ತಿ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿ ವೃದ್ಧಿ ಸಂಸ್ಥೆಯ ವತಿಯಿಂದ ಆಯೋಜಿ ಸಲಾಗಿದ್ದ 'ಜೀವ' ಪುನಶ್ಚೇತನ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು.

ಜೀರೋದಿಂದ 6 ವರ್ಷದ ನಿಧಾನಗತಿ ಬೆಳವಣಿಗೆಯ ವಿಕಲಚೇತನ ಮಕ್ಕಳ ತಾಯಂದಿರುಗಳು ಈ ಥೆರಫಿ ಕೇಂದ್ರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

2002ರಲ್ಲಿ ನಾನು ಶಾಸಕನಾದಾಗ, ಸ್ಫೂರ್ತಿ ಸಂಸ್ಥೆಯ ಕಾರ್ಯನಿರ್ವಹಣಾಧಿ ಕಾರಿ ರೂಪ್ಲಾನಾಯ್ಕ ಮನವಿ ಮೇರೆಗೆ ಕಮ್ಮಾರಗಟ್ಟೆ ಬಳಿ ಇರುವ ನೀರಾವರಿ ಕಟ್ಟಡ ತೆರವುಗೊಳಿಸಿ, ಜೇನುಗೂಡು ಶಾಲೆ, ದುಂಬಿ ಶಾಲೆ, ನಕ್ಷತ್ರ ಶಾಲೆಗಳನ್ನು ಆರಂಭಿಸಿ ಸುಮಾರು ಎರಡು ಸಾವಿರ ಮಕ್ಕಳಿಗೆ ಶಿಕ್ಷಣ ನೀಡಿದ್ದರಿಂದ ಅನೇಕ ವಿದ್ಯಾರ್ಥಿಗಳು ಉದ್ಯೋಗಸ್ಥರಾಗಿ ಬದುಕನ್ನು ಕಟ್ಟಿಕೊಂಡಿದ್ದಾರೆ ಎಂದರು.



ಸ್ಫೂರ್ತಿ ಸಂಸ್ಥೆಯ ಕಾರ್ಯನಿರ್ವಹಣಾಧಿಕಾರಿ ರೂಪ್ಲಾನಾಯ್ಕ ಮಾತನಾಡಿ, ಅಂಗವಿಕಲರಿಗೆ ಅಗತ್ಯ ಉಪಕರಣಗಳ ಬಳಕೆಯ ವಿಧಾನ ಹಾಗೂ ವಸ್ತುಗಳ ಸೌಲಭ್ಯ ಅದರ ಬಳಕೆ ವಿಧಾನದ ಮೂಲಕ ಸಮಾಜದ ಮುಖ್ಯವಾಹಿನಿಗೆ ತರುವುದು ಥೆರಪಿ ಕೇಂದ್ರದ ಸದುದ್ದೇಶವಾಗಿದೆ, ಎರಡು ತಿಂಗಳಿಂದ ಎರಡು ಪಂಚಾಯ್ತಿಗಳಿಂದ 27 ಮಕ್ಕಳನ್ನು ವಿಕಲ ಚೇತನ ಮಕ್ಕಳನ್ನು ಗುರುತಿಸಲು ಸಾಧ್ಯವಾಗಿದೆ. ವಿವಿಧ ತರಬೇತಿ ನೀಡಿ ಸ್ವಯಂ ಉದ್ಯೋಗ ಹಾಗೂ ಕಂಪನಿಗಳಲ್ಲಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಲು ಅನುವು ಮಾಡಿಕೊಡಲಾಗಿದೆ. ಮಹಿಳೆಯರಿಗೆ 125 ಡಿಜಿಟಲ್ ಡ್ರೈವಿಂಗ್ ಲೈಸೆನ್ಸ್ ನೀಡಲಾಗಿದೆ ಮತ್ತು ಮಹಿಳಾ ಸಾಂತ್ವನ ಕೇಂದ್ರಗಳ ಸಹಾಯದಿಂದ ಮಹಿಳೆಯರ ಸಬಲೀಕರಣಕ್ಕೆ ಹೆಚ್ಚು ಆದ್ಯತೆ ನೀಡಲಾಗಿದೆ ಎಂದರು.

ಜಿಲ್ಲಾ ವಿಕಲಚೇತನ ಕಲ್ಯಾಣಾಧಿಕಾರಿ ಕೆ.ಕೆ.ಪ್ರಕಾಶ್, ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕಾಧಿಕಾರಿ ರಾಘವೇಂದ್ರ, ಸಮಾಜ ಕಲ್ಯಾಣಾಧಿಕಾರಿ ಹೆಚ್.ಎಲ್.ಉಮಾ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಹಾಂತೇಶ್ ಪೂಜಾರ್, ಕಾಂಗ್ರೆಸ್ ಓಬಿಸಿ ಸಮಿತಿ ರಾಜ್ಯ ಉಪಾಧ್ಯಕ್ಷ ಹೆಚ್.ಎ.ಉಮಾಪತಿ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಹಕಾರ ಸಂಘದ ನಿರ್ದೇಶಕ ಕರಿಬಸಪ್ಪ, ಪುರಸಭೆ ಸದಸ್ಯೆ ಉಷಾ ಗಿರೀಶ್, ಸ್ಫೂರ್ತಿ ಸಂಸ್ಥೆ ನಿರ್ದೇಶಕಿ ಎಂ.ರೇಣುಕಾ, ನಿರ್ದೇಶಕ ಕೃಷ್ಣ, ಹಿರಿಯ ಸಂಯೋಜಕಿ ಸುಧಾ, ಸುಪ್ರೀತ ರಾಜೇಶ್ವರಿ, ಕೊಡತಾಳ ರುದ್ರೇಶ್, ನೇತ್ರಾವತಿ, ರೇಷ್ಮಾ, ಭಾರತಿ, ಭವ್ಯ, ವಿಕಲಚೇತನ ಸಂಪನ್ಮೂಲಾಧಿಕಾರಿ ವಿನಯ್‌ಕುಮಾರ್ ಇದ್ದರು.

# ಗಾಜಾದ ರಿಮಲ್ ಪ್ರದೇಶ ನೆಲಸಮ

(1ನೇ ಪುಟದಿಂದ) ಉಗ್ರರು 150 ಜನರನ್ನು ಒತ್ತೆಯಾಳುಗಳಾಗಿ ಇಟ್ಟುಕೊಂಡಿದ್ದಾರೆ.

ಇಸ್ರೇಲ್ ಸುಮಾರು 3.60 ಲಕ್ಷ ಹೋರಾಟಗಾರರನ್ನು ಸಂಘಟಿಸುತ್ತಿದೆ. ಇದರಿಂದಾಗಿ ಹೋರಾಟ ಮತ್ತಷ್ಟು ತೀವ್ರವಾಗುವ ಸಾಧ್ಯತೆ ಇದೆ. ಗಾಜಾ ಕಡೆಯಿಂದ ಹಮಾಸ್ ಉಗ್ರರು ದಾಳಿ ನಡೆಸಿದ್ದ ಎಲ್ಲ ಪ್ರದೇಶಗಳನ್ನು ಇಸ್ರೇಲ್ ಮತ್ತೆ ತನ್ನ ವಶಕ್ಕೆ ತೆಗೆದುಕೊಂಡಿದೆ.

ಸುಮಾರು 40 ಕಿ.ಮೀ. ಉದ್ದ ಇರುವ ಗಾಜಾ ಪಟ್ಟಿಯಲ್ಲಿ ಇಸ್ರೇಲ್ ನೆಲದ ಮೂಲಕ ಕಾರ್ಯಾಚರಣೆ ನಡೆಸಲಿದೆಯೇ ಎಂಬುದು ಈಗಿರುವ ಮುಖ್ಯ ಪ್ರಶ್ನೆಯಾಗಿದೆ. ಇಲ್ಲಿ ಸುಮಾರು 23 ಲಕ್ಷ ಜನರಿದ್ದಾರೆ. 2007ರಿಂದಲೂ ಇದನ್ನು ಹಮಾಸ್ ಆಳುತ್ತಿದೆ.

ಇಸ್ರೇಲ್ ನಡೆಸಿದ ದಾಳಿಗೆ ಸಿಲುಕಿ ಗಾಜಾ ನಗರದ ರಿಮಲ್ ಪ್ರದೇಶ ನೆಲಸಮವಾಗಿದೆ. ಈ ಪ್ರದೇಶವು ಹಮಾಸ್‌ನ ಹಲವು ಸಂಸ್ಥೆಗಳನ್ನು ಹೊಂದಿದೆ.

ಈ ಪ್ರದೇಶದಲ್ಲಿನ ಜನರು ಹೊರ ಹೋಗುವಂತೆ ಇಸ್ರೇಲ್ ಮೊದಲೇ ತಿಳಿಸಿತ್ತು. ನಂತರ ಆ ಜಾಗದ ಮೇಲೆ ಅಭೂತಪೂರ್ವ ತೀವ್ರತೆಯೊಂದಿಗೆ ದಾಳಿ ನಡೆಸಿದೆ. ಇದಲ್ಲದೇ, ಇನ್ನೊಂದು ಪ್ರದೇಶವನ್ನು ಖಾಲಿ ಮಾಡುವಂತೆಯೂ ಇಸ್ರೇಲ್ ಸೈನ್ಯ ತಿಳಿಸಿತ್ತು.

ಈ ನಡುವೆ, ಮಂಗಳವಾರ ಮಧ್ಯಾಹ್ನ ಹಮಾಸ್ ಉಗ್ರರು ದಕ್ಷಿಣ ಇಸ್ರೇಲ್ ನಗರವಾದ ಅಶ್ಕೆಲೊನ್ ಹಾಗೂ ಟೆಲ್ ಅವೀವ್ ಮೇಲೆ ತೀವ್ರ ರಾಕೆಟ್ ದಾಳಿ ನಡೆಸಿದ್ದರು. ಈ ದಾಳಿಯಿಂದ ಸಾವು - ನೋವುಗಳಾದ ವರದಿಗಳು ಸದ್ಯಕ್ಕೆ ಬಂದಿಲ್ಲ.

ಹಮಾಸ್ ಸಂಘಟನೆ ಪೂರ್ಣ ಯುದ್ಧಕ್ಕೆ ಸಿದ್ಧವಾಗಿದೆ.

ಎಷ್ಟೇ ತೀವ್ರ ಹೊಡೆತ ಬಿದ್ದರೂ ಎದುರಿಸಲು ಸಿದ್ಧರಿದ್ದೇವೆ ಎಂದು ಹಿರಿಯ ಹಮಾಸ್ ಅಧಿಕಾರಿ ಸಲೇರ್ ಅಲ್ - ಅರೌರಿ ಹೇಳಿದ್ದರು.

ಪಶ್ಚಿಮ ದಂಡೆಯ ಮೂಲಕವೂ ಇಸ್ರೇಲ್ ಮೇಲೆ ದಾಳಿ ನಡೆಯಲಿದೆ ಎಂದು ಅರೌರಿ ಇಂಗಿತ ವ್ಯಕ್ತಪಡಿಸಿದಂತಿತ್ತು. ಆದರೆ, ಸಣ್ಣ ಪುಟ್ಟ ಹಿಂಸಾಚಾರ ಹೊರತು ಪಡಿಸಿದರೆ ಪಶ್ಚಿಮ ದಂಡೆಯಲ್ಲಿ ಹೆಚ್ಚೇನೂ ಬೆಳವಣಿಗೆಗಳಾಗಿಲ್ಲ.

ಗಾಜಾದ ನಾಗರಿಕರನ್ನು ಗುರಿಯಾಗಿಟ್ಟುಕೊಂಡು ಇಸ್ರೇಲ್ ದಾಳಿ ನಡೆಸಿದರೆ, ಒತ್ತೆಯಾಳಾಗಿರುವ ಇಸ್ರೇಲ್ ನಾಗರಿಕರ ಹತ್ಯೆ ಮಾಡುವುದಾಗಿ ಹಮಾಸ್ ಬೆದರಿಕೆ ಹಾಕಿತ್ತು.

ಆದರೆ, ಒತ್ತೆಯಾಳುಗಳ ಹತ್ಯೆ ಮಾಡುವುದು ಯುದ್ಧಾಪರಾಧ. ಇದನ್ನು ಕ್ಷಮಿಸುವುದಿಲ್ಲ ಎಂದು ಇಸ್ರೇಲ್ ವಿದೇಶಾಂಗ ಸಚಿವ ಎಲಿ ಕೊಹೆನ್ ಹೇಳಿದ್ದಾರೆ. ಯಾವುದೇ ಬೆಲೆ ತೆತ್ತಾದರೂ ಹಮಾಸ್ ದಮನಿಸಲು ಇಸ್ರೇಲ್ ನಿರ್ಧರಿಸಿರುವಂತೆ ಕಂಡು ಬರುತ್ತಿದೆ.

ಇದುವರೆಗಿನ ಸಂಘರ್ಷದಲ್ಲಿ ಇಸ್ರೇಲ್‌ನ 1,000 ಜನ ಸಾವನ್ನಪ್ಪಿದ್ದಾರೆ ಎಂದು ಇಸ್ರೇಲ್ ಸೈನಿಕ ಅಧಿಕಾರಿಗಳು ತಿಳಿಸಿದ್ದಾರೆ. ಗಾಜಾ ಹಾಗೂ ಪಶ್ಚಿಮ ದಂಡೆಯಲ್ಲಿ 830 ಜನ ಸಾವನ್ನಪ್ಪಿದ್ದಾರೆ. ಇವರಲ್ಲಿ ನೂರಾರು ಜನರು ಉಗ್ರರಿದ್ದಾರೆ ಎಂದು ಇಸ್ರೇಲ್ ಹೇಳಿದೆ.

ಇಸ್ರೇಲ್ ನೆಲದ ಮೇಲೆ ದಾಳಿ ನಡೆಸಿದ್ದ ಸುಮಾರು 1,500 ಉಗ್ರರ ಮೃತದೇಹಗಳು ಪತ್ತೆಯಾಗಿವೆ ಎಂದು ಇಸ್ರೇಲ್ ಸೈನ್ಯ ತಿಳಿಸಿದೆ.

ಈ ನಡುವೆ, ಗಾಜಾದ 1.87 ಲಕ್ಷ ಜನರು ತಮ್ಮ ಮನೆಗಳನ್ನು ತೊರೆದಿದ್ದಾರೆ. ಇಸ್ರೇಲ್ ದಾಳಿಯಿಂದಾಗಿ 4 ಲಕ್ಷ ಜನ ಸ್ಥಳಾಂತರಗೊಂಡಿದ್ದಾರೆ. ಅಲ್ಲಿನ ನೀರು ಹಾಗೂ ನೈರ್ಮಲ್ಯ ತಾಣಗಳಿಗೆ ಹಾನಿಯಾಗಿದೆ.

ಪ್ಯಾಲೆಸ್ತೇನಿನ ಜನರು ರಫಾ ಗಡಿಯ ಮೂಲಕ ಈಜಿಪ್ಟ್‌ಗೆ ತೆರಳಬಹುದು ಎಂದು ಇಸ್ರೇಲ್ ಸೈನ್ಯದ ವಕ್ತಾರ ಲೆಫ್ಟಿನೆಂಟ್ ಕರ್ನಲ್ ರಿಚರ್ಡ್ ಹೆಚ್ ಸಲಹೆ ನೀಡಿದ್ದಾರೆ.

ಗಾಜಾದ ದೊಡ್ಡ ಪ್ರಮಾಣದ ಜನರು ಈಜಿಪ್ಟ್‌ಗೆ ತೆರಳುವ ಸಾಧ್ಯತೆಯೂ ಇದೆ. ಈ ಬಗ್ಗೆ ಎಚ್ಚೆತ್ತುಕೊಂಡಿರುವ ಈಜಿಪ್ಟ್ ಅಧಿಕಾರಿಗಳು, ಪ್ಯಾಲೆಸ್ತೇನಿನ ಜನರನ್ನು ಹಿಂದೆ ಸರಿಸುತ್ತಿದ್ದಾರೆ.

# ಸಮಾರಂಭಗಳಲ್ಲಿ ಪಟಾಕಿ ಸಿಡಿಸುವುದಕ್ಕೆ ನಿಷೇಧ

(1ನೇ ಪುಟದಿಂದ) ನೀಡಿದರು. ತಪಾಸಣಾ ವರದಿ ಸರಿಯಾಗಿದೆಯೇ ಎಂದು ಪರಿಶೀಲಿಸಿಯೇ ಲೈಸನ್ಸ್ ನೀಡುವ ಬಗ್ಗೆ ತೀರ್ಮಾನಿಸಬೇಕು. ಪಟಾಕಿ ದುರಂತ ಪ್ರಕರಣದಲ್ಲಿ ಗೋಡೌನ್‌ಗೆ ಅನುಮತಿ ನೀಡಿರಲಿಲ್ಲ. ಮಾರಾಟಕ್ಕೆ ಮಾತ್ರ ಅನುಮತಿ ನೀಡಲಾಗಿತ್ತು ಎಂದು ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು ಎಂದರು. ರಾಜ್ಯದೆಲ್ಲೆಡೆ, ತಪಾಸಣೆ ನಡೆಸಿ, ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದ ಎಲ್ಲ ಗೋಡೌನ್‌ಗಳು ಹಾಗೂ ಮಳಿಗೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು, ಅವುಗಳ ಪರವಾನಗಿ ರದ್ದುಪಡಿಸಬೇಕು. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಅಧಿಕಾರಿಗಳು ಎಲ್ಲಾ ಮುನ್ನೆಚ್ಚರಿಕೆಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಸೈಟ್ ಮಾರಾಟಕ್ಕೆ (KHB)
ಕರ್ನಾಟಕ ಗೃಹ ಮಂಡಳಿಯಲ್ಲಿ
(for immediately register only)
(ಕಮೀಷನ್ +ರಿಜಿಸ್ಟರ್ ಸೇರಿ 40x60 ದಕ್ಷಿಣ ಡಬಲ್ ರೋಡ್ ಪಕ್ಕ 40 ಅಡಿ ರಸ್ತೆಗೆ (64 ಲಕ್ಷ) 30x40 ದಕ್ಷಿಣ (32 ಲಕ್ಷ) 20x30 (13.5 ಲಕ್ಷ)
ಕಿರಣ್ ಭೂಸನೂರ್ (ಏಜೆಂಟ್)
98440-63409
(ಕೇವಲ ಇನ್ನು ಒಂದು ದಿನ ಮಾತ್ರ*)

ಶಿವ-ಪಾರ್ವತಿ ಲೇಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ
40x57 East, 40x50 Corner, 40x36 Corner, 33x50 Corner, 30x55 North, 30x40 East.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಮನೆ ಮಾರಾಟಕ್ಕಿದೆ
ಹೊಸ ಮನೆ ಡಾಲರ್ಸ್ ಕಾಲೋನಿಯಲ್ಲಿ 30x50 West, ಕೆಳಗಡೆ ಎರಡು ಬೆಡ್ ರೂಮ್, ಮೇಲಗಡೆ ಎರಡು ಬೆಡ್ ರೂಮ್.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಮನೆಯ ರೀ ಪೇಂಟಿಂಗ್
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

EC / ಇಸಿ,
E-swathu,
Khatha Change
Building Licence
& Property Documents,
Loans-All banks
96118-66449

ಹುಡುಗರು ಬೇಕಾಗಿದ್ದಾರೆ
ಹಾಸ್ಟೇಲ್ ಕೆಲಸಕ್ಕೆ ಹಾಗೂ ಅಡುಗೆ ಸಹಾಯಕ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಸತಿ ವ್ಯವಸ್ಥೆ ಇರುತ್ತದೆ.
99806 47014

ಬೇಕಾಗಿದ್ದಾರೆ
ಲಾಡ್ಜ್‌ನಲ್ಲಿ ಹಗಲು ಪಾಳೆಯಕ್ಕೆ ರೂಂ ಬಾಯ್ ಮತ್ತು ಸೂಪರ್‌ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
63639-54459

ಗಾಡಿ ಬಾಡಿಗೆಗಿದೆ
ಹೋಟೆಲ್ ಮಾಡಲು ತಳ್ಳುವ ಕಬ್ಬಿಣದ ಹೊಸ ಗಾಡಿ ಬಾಡಿಗೆಗಿದೆ.
8 ಡೋರ್, 4ಸೆಲ್ಫ್, ಟಾಪ್ ಕೆಳಗೆ ಬಾಕ್ಸ್, 4 ಬೈಕ್ ವ್ಹೀಲ್‌ಗಳಿವೆ. ಸಂಪರ್ಕಿಸಿ.
90080 92650

ಮಾರಾಟಕ್ಕಿದೆ
ಕುಂದವಾಡ ಮಹಾಲಕ್ಷ್ಮಿ ಲೇಔಟ್ ನಲ್ಲಿ 30x50 ಸೈಟ್ ಮತ್ತು ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಸರ್ವೀಸ್ ರಸ್ತೆಗೆ ಬಾತಿ ಬಳಿ ಕಮರ್ಷಿಯಲ್ ಉದ್ದೇಶಕ್ಕೆ 18 ಗುಂಟೆ ಜಾಗ ಮಾರಾಟಕ್ಕೆ ಇದೆ. ಸೈಟ್ ಮತ್ತು ಮನೆ ಮಾರಾಟಕ್ಕೆ, ಖರೀದಿಗೆ ಇವೆ. ವಿಚಾರಿಸಿ.
88675 15890, 72592 22590

ಕಾರುಗಳು ಮಾರಾಟಕ್ಕಿವೆ
Hyundai Creta 2019
VW Vento 2014
Honda City 2009
Renault Duster 2014
ದೈವಿಕ್ ಐನಳ್ಳಿ
99456 43223

ಮಳಿಗೆ ಮಾರಾಟಕ್ಕಿದೆ
ಕೆಎಸ್‌ಎಸ್‌ಐಡಿಸಿ ಇಂಡಸ್ಟ್ರೀಯಲ್ ಏರಿಯಾ ಸಾಗರ ರಸ್ತೆ, ಎಪಿಎಂಸಿ ಪಕ್ಕ, ಶಿವಮೊಗ್ಗದಲ್ಲಿ 50x40 ಅಡಿ ಅಳತೆಯಲ್ಲಿ 50 ಹೆಚ್‌ಪಿ ವಿದ್ಯುತ್ ಸಂಪರ್ಕವಿರುವ ಮಳಿಗೆ ಮಾರಾಟಕ್ಕಿದೆ.
86182 88005, 98444 93506

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

PART TIME JOBS
(ಸುವರ್ಣಾವಕಾಶ)
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ
(ಕೋರಿಯರ್ ಸೌಲಭ್ಯವಿದೆ)
87490 98879

ಶಾಕಿರ ಬ್ಯೂಟಿ ಪಾರ್ಲರ್
Shakeera Beauty Parlour
ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸ ಮಾಡಲಿಕ್ಕೆ ಸಹಾಯಕಿಯರು ಬೇಕಾಗಿದ್ದಾರೆ.
Wanted Lady Helpers
# 74 1/4, 10th Main, PJ. Extension, Davanagere. Contact :
93420 19013

ಬೇಕಾಗಿದ್ದಾರೆ
ಅಕೌಂಟೆಂಟ್ ಹುದ್ದೆಗೆ ಲೇಡೀಸ್ ಬೇಕಾಗಿದ್ದಾರೆ. ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಸಂಪರ್ಕಿಸಿ.
94838 62779

ಕಂಪನಿಗಳಿಗೆ ತಕ್ಷಣ ಬೇಕಾಗಿದ್ದಾರೆ
SSLC. PUC, ITI, Diploma, Degree, ಪಾಸ್ / ಫೇಲ್.
ನೇರ ನೇಮಕಾತಿ
ಸಂಬಳ : 17000/- ದಿಂದ 70000/-
ವಸತಿ, ಊಟದ ವ್ಯವಸ್ಥೆ ಇದೆ.
72595 52930

ಬೇಕಾಗಿದ್ದಾರೆ
ನುರಿತ ಪಂಚಕರ್ಮ ಥೆರಪಿಸ್ಟ್
ಪುರುಷರು - 1
ಮಹಿಳೆಯರು - 1
ಸಂಪರ್ಕಿಸಿ :
84978 54095

ಹುಡುಗರು ಬೇಕಾಗಿದ್ದಾರೆ
ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ನಾಲ್ವರು ಹುಡುಗರು ಬೇಕಾಗಿದ್ದಾರೆ. ರಾಂ & ಕೋ ಸರ್ಕಲ್ ಹತ್ತಿರ, ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

ಬೇಕಾಗಿದ್ದಾರೆ
ದಾವಣಗೆರೆ ತಾಲ್ಲೂಕಿನಲ್ಲಿ ಬರುವ ಅನುದಾನಿತ ಪ್ರೌಢಶಾಲೆಗೆ ತಾತ್ಕಾಲಿಕವಾಗಿ ಹಿಂದಿ ಭಾಷಾ ವಿಷಯ ಬೋಧಿಸಲು ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ. (ನವೆಂಬರ್ 1 ರಿಂದ)
9538215550, 9901658878
ಮುಖ್ಯೋಪಾಧ್ಯಾಯರು

ಸೈಟು ಮಾರಾಟಕ್ಕಿದೆ
(KHB) ಕರ್ನಾಟಕ ಗೃಹ ಮಂಡಳಿ 40 ಅಡಿ ರಸ್ತೆಗೆ ಬರುವಂತಹ 40x60 ಪೂರ್ವ ದಿಕ್ಕಿನ ಸೈಟ್ ಮಾರಾಟಕ್ಕಿದೆ.
87622 85869, 76763 81314

WANTED
Freshers & Learners Required for Auditor Office
Contact :
77607 40760

ನೇತ್ರದಾನ ಮಹಾದಾನ

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಸೈಟ್ ಮಾರಾಟಕ್ಕಿದೆ
ಪಿ.ಬಿ. ರೋಡ್, Hyundai Car Show room ಹಿಂಭಾಗ ಬಸವನಗೌಡ ಬಡಾವಣೆ, ಆವರಗೆರೆ. 30x46 ಉತ್ತರ, 30x46 ದಕ್ಷಿಣ 1850 per sq ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ACHARYA REALTORS
826 826 7878

CAREER OPPORTUNITY
Top MNC Looking for Candidates from Banking/Finance/Insurance Industry. Age 30 above. Fixed Pay upto 75K, Huge Incentives, PF,ESI, Reward & Recognition and Foreign travel.
98806 56168

ಅಡುಗೆ ಭಟ್ಟರು ಬೇಕಾಗಿದ್ದಾರೆ
ಬೆಂಗಳೂರಿನ ಹೋಟೆಲ್‌ನಲ್ಲಿ ಬೆಣ್ಣೆ ದೋಸೆ ಮಾಡಲು ಬರುವಂತಹ ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ.
77608 06203

ಮಾರಾಟಕ್ಕೆ ಇದೆ
ದಾವಣಗೆರೆ-ಚನ್ನಗಿರಿ ರಸ್ತೆ, ಬೈಪಾಸ್‌ನಿಂದ ಕೇವಲ 2 1/2 ಕಿ.ಮೀ. ದೂರದಲ್ಲಿ ಶಿರಮಗೊಂಡನಹಳ್ಳಿ ಗ್ರಾಮದಲ್ಲಿ ಉತ್ತರ ಮುಖದ ರಸ್ತೆಗೆ ಹೊಂದಿರುವ ಜಮೀನು 0:10 ಗುಂಟೆ ರಸ್ತೆಗೆ 100 ಅಡಿ ಬರುವಂತಹ ಈ ಜಾಗ ಮಾರಾಟಕ್ಕೆ ಇದೆ. ಆಸಕ್ತಿಯುಳ್ಳವರು ಈ ಕೆಳಗೆ ಕೊಟ್ಟಿರುವ ನಂಬರ್‌ಗೆ ಕರೆ ಮಾಡಿ.
82175 40468

WANTED
Any Degree with Computer knoweldge is must. For Male / Female.
Contact : Time Excellent Electronics
#2137/1, 4th Main, 3rd Cross, (Near-Purantha Hospital) 'A' Block, Davanagere - 577004.
98865 15100

ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

WANTED
Team Leader / Sales Manager
Education: Any Degree
Experience: 3 to 5 years in any Sales domain
Age: 30 +
Monthly income: up to 50K
Contact :
9740069720

ವಿದ್ಯುತ್ ಸಮಸ್ಯೆಗೆ ಪರಿಹಾರ
ನಮ್ಮಲ್ಲಿ ಎಲ್ಲಾ ತರಹದ
• UPS ಬ್ಯಾಟರಿ • RO ಫಿಲ್ಟರ್
• ಸೋಲಾರ್ ಸೇಲ್ಸ್ ಮತ್ತು ಸರ್ವೀಸ್ ಮಾಡಲಾಗುವುದು.
ಸಂಪರ್ಕಿಸಿ
ಫೀಸ್ ಎಂಟರ್ ಪ್ರೈಸಸ್
ಬಕ್ಕೇಶ್ವರ ಹೈಸ್ಕೂಲ್ ಎದುರು, ನಿಜಲಿಂಗಪ್ಪ ಲೇಔಟ್, ದಾವಣಗೆರೆ.
83100 42490
99013 18277, 98801 56667

WANTED
Excutives Male =100, Excutives Females =100, Office Staff Females =4 Members (Good communication skill and computer knowledge language knowns kannada, Hindi, English, Marathi ) Good Salary +Incentive. More Details Contact :
80505 10329
Watsapp 72597 82546
Send The Photo And Biodata

ತಕ್ಷಣ ಬೇಕಾಗಿದ್ದಾರೆ
ಮಹಿಳಾ ಅಭ್ಯರ್ಥಿ ಆಫೀಸ್ ಕೆಲಸಕ್ಕಾಗಿ ಪಾಪ್ಯುಲರ್ ಸೆಕ್ಯೂರಿಟಿ ಈರುಳ್ಳಿ ಮಾರ್ಕೆಟ್ ಹತ್ತಿರ, ಪಿ.ಬಿ. ರೋಡ್, ದಾವಣಗೆರೆ.
99165 29326, 98445 17979

AVOID MOSQUITOES
Mosquito Net For Doors & Windowes.
SRI GOWRI ENTERPRISES
# 7C2, 4th Cross, Near Shanesh-wara Temple, Karur Industrial Area, P.B. Road, Davangere-6
72049 94628

ಪಾರ್ಟನರ್ ಬೇಕಾಗಿದ್ದಾರೆ
ನಮ್ಮ ಟ್ರೇಡಿಂಗ್ ಬ್ಯುಸಿನೆಸ್‌ಗೆ ಸ್ಲೀಪಿಂಗ್ ಪಾರ್ಟನರ್ ಆಗಿ ಪ್ರತಿ ತಿಂಗಳು ಉತ್ತಮ ಹಾಗೂ ಸ್ಥಿರವಾದ ಲಾಭ ಗಳಿಸಿ.
76767 50280

CHANGE OF NAME
I, SANDHYA RANI MURTHI PARADESHPPLA (old name) #839/12, 'Samprada', Saraswathi Nagar 'A' Block, Davangere – 577005. Have changed my name to SANDHYA RANI PARADESHPPLA MURTHY vide affidavit dated 10-10-2023 before notary M. PRATHAPARUDRA, Davangere.

# ವ್ಯಕ್ತಿಯ ಸಾಮರ್ಥ್ಯವನ್ನು ಸಮರ್ಥವಾಗಿ ಬಳಸಿಕೊಳ್ಳುವುದು ಮಾನಸಿಕ ಆರೋಗ್ಯ

## 'ಪ್ರಾಜೆಕ್ಟ್ ಗೀವ್' ಉದ್ಘಾಟನಾ ಕಾರ್ಯಕ್ರಮದಲ್ಲಿ ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಪುಷ್ಪಲತಾ



ದಾವಣಗೆರೆ, ಅ.10- ವ್ಯಕ್ತಿಯಲ್ಲಿರುವ ಸಾಮರ್ಥ್ಯವನ್ನು ಸಮರ್ಥವಾಗಿ ಬಳಸಿಕೊಳ್ಳುವುದು ಮಾನಸಿಕ ಆರೋಗ್ಯ ಎಂದು ವಿಶ್ವಸಂಸ್ಥೆ ವ್ಯಾಖ್ಯಾನಿಸಿದೆ ಎಂದು ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಪುಷ್ಪಲತಾ ಹೇಳಿದರು.

ನಗರದ ಶ್ರೀ ಸಿಗಂದೂರು ಚೌಡಮ್ಮ ಎಜುಕೇಶನ್ ಅಂಡ್ ಚಾರಿಟಬಲ್ ಟ್ರಸ್ಟ್‌ನ ವಿದ್ಯಾಸಾಗರ ಶಾಲೆಯಲ್ಲಿ ಹಮ್ಮಿಕೊಂಡಿದ್ದ 'ಪ್ರಾಜೆಕ್ಟ್ ಗೀವ್' ಉದ್ಘಾಟನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಾಗಾಗಿ ಸಾಮರ್ಥ್ಯವನ್ನು ಅರ್ಥಮಾಡಿಕೊಂಡು ಅದನ್ನು ಸಮರ್ಥವಾಗಿ ಬೆಳೆಸಿಕೊಳ್ಳುವಂತಹ ವ್ಯಕ್ತಿಗಳಾದಾಗ ಸಬಲ ಶಕ್ತಿಯುತವಾದ ಪ್ರಜೆಗಳಾಗಿ ಜನಾಂಗದ ನಿರ್ಮಾಣಕ್ಕೆ ಕಾರಣರಾಗುತ್ತೇವೆ ಎಂದರು. ಅವತ್ತು ಸೌಲಭ್ಯಗಳೇ ಇಲ್ಲದೇ ಇದ್ದ ದಿನಗಳು, ಎಲ್ಲೋ ಹಳ್ಳಿಗಾಡಿನ ಪ್ರದೇಶ, ಮನೆಯಲ್ಲಿ ಇದ್ದ ಒಬ್ಬ ತಾಯಿಗೆ ಮಗನನ್ನು ವಿಜ್ಞಾನಿಯಾಗಿ ನಿರ್ಮಾಣ ಮಾಡಲು ಸಾಧ್ಯವಾಯಿತು. ಇವತ್ತು ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಸೌಲಭ್ಯಗಳಿವೆ, ಚಟುವಟಿಕೆಗಳಿವೆ. ಮುಂದುವರೆದ ಸಮೂಹ ಮಾಧ್ಯಮವಿದೆ. ಟಿವಿ, ಪ್ರಪಂಚ ನಾಗಾಲೋಟದಲ್ಲಿ ಓಡುತ್ತಿದೆ. ಮಕ್ಕಳನ್ನು ಬೆಳೆಸಬಹುದಾದ ವಿಧಾನದಲ್ಲಿ ನಮ್ಮದೇ ಆದ ಜವಾಬ್ದಾರಿ ಇದೆ ಎಂಬ ಚಿಂತನೆ ಪೋಷಕರಿಗೆ ಬರಬಾರದು ಎಂದು ಹೇಳಿದರು.

ಸೌಲಭ್ಯವೇ ಇಲ್ಲದ ದಿನಗಳಲ್ಲಿ ಇರುವ ಒಬ್ಬ ತಾಯಿ ತೆಗೆದುಕೊಳ್ಳುವ ನಿರ್ಧಾರವನ್ನು ಸಕಲ ಸೌಲಭ್ಯಗಳಿರುವ ಶಾಲಾ ಶಿಕ್ಷಕಿಗೇಕೆ ಸಾಧ್ಯವಾಗುವುದಿಲ್ಲ ಎಂದು ಪ್ರಶ್ನಿಸಿದರು.

ಮಾನಸಿಕ ಆರೋಗ್ಯ ಚನ್ನಾಗಿ ಇರಲು ಮನಸ್ಸು ಬಿಚ್ಚಿ ಮಾತನಾಡಬೇಕು. ಆಗ ಪರಿಹಾರಗಳು ಸಿಗುತ್ತವೆ. ಕಲಿಕೆಯಲ್ಲಾಗಬಹುದು ಅಥವಾ ಇತರೆ ವಿಚಾರದಲ್ಲಾಗಬಹುದು. ಈ ನಿಟ್ಟಿನಲ್ಲಿ ವಿದ್ಯಾಸಾಗರ ಶಾಲೆ ಉತ್ತಮ ಸಾಧನೆಗೈಯ್ಯಲು ಮುಂದಾಗಲಿ ಎಂದು ಶುಭ ಹಾರೈಸಿದರು.

ಮಕ್ಕಳ ಮೇಲೆ ವಿನಾಕಾರಣ ಒತ್ತಡ ಹೇರದೇ, ಕೇವಲ ಅಂಕಗಳಿಕೆಗೆ ಸೀಮಿತರನ್ನಾಗಿ ಮಾಡದೆ, ಅವರಲ್ಲಿ ಆತ್ಮವಿಶ್ವಾಸ ತುಂಬುವಂತಹ ಕೆಲಸ ಮಾಡಿ, ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ದಾರಿ ಮಾಡಿಕೊಡಿ ಎಂದು ಹಿತ ನುಡಿದರು.

ಜೀವನ ನಡೆಯುವುದು ನಂಬಿಕೆ, ವಿಶ್ವಾಸದ ಜೊತೆ, ಅಂಜಿಕೆ ಜೊತೆಯಲ್ಲ ಎಂದು ಮಾರ್ಮಿಕವಾಗಿ ನುಡಿದರು.

ಇಸಿಓ ಚೇತನಾ ಮಾತನಾಡಿ, ಪ್ರಪಂಚ ಇಂದು ಭಾರತ ದತ್ತ ಚಿತ್ತ ಹರಿಸಿದೆ. ಭಾರತ ವಿಶ್ವಗುರುವಾಗಿ ಮೆರೆಯುತ್ತಿರುವ ಈ ದಿನಗಳಲ್ಲಿ ನಾವು ನಮ್ಮ ಸಂಸ್ಕೃತಿ, ಪರಂಪರೆಯನ್ನು ಉಳಿಸಿಕೊಳ್ಳುವ ದಿಕ್ಕಿನಲ್ಲಿ ಸಾಗಬೇಕಾಗಿದೆ ಎಂದರು.

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಂಸ್ಥಾಪಕ ಶಿವನಕೆರೆ ಬಸವಲಿಂಗಪ್ಪ ಮಾತನಾಡಿ, ವಿದ್ಯಾರ್ಥಿಗಳು ಸಕಾರಾತ್ಮಕ ಆಲೋಚನೆಗಳನ್ನು ಮಾಡುವ ಮೂಲಕ ಬುದ್ಧನ ಸರಳ ಸೂತ್ರಗಳನ್ನು ಚಾಚೂ ತಪ್ಪದೇ ಅನುಸರಿಬೇಕು. ಓದಿನಲ್ಲಿ ಏಕಾಗ್ರತೆ, ಸಮಚಿತ್ತತೆ, ದೃಢಸಂಕಲ್ಪ ಹೊಂದಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಸಿಗಂದೂರು ಚೌಡೇಶ್ವರಿ ದೇವಸ್ಥಾನ ಸಮಿತಿ ಧರ್ಮದರ್ಶಿ ರಾಮಪ್ಪ ಮಾತನಾಡಿ, ಇಂದು ಎಲ್ಲೆಡೆ ಸ್ವಾರ್ಥ ಹೆಚ್ಚಾಗುತ್ತಿದ್ದು, ಸಮಾಜಕ್ಕೆ ನಮ್ಮ ಕೊಡುಗೆ ಏನು ಎಂಬುದರ ಬಗ್ಗೆ ಗಮನ ಕೊಡಬೇಕಾಗಿದೆ. ಯಾವುದೇ ಕಾರಣಕ್ಕೂ ಮಕ್ಕಳ ಮೇಲೆ ಒತ್ತಡ ಹೇರದೆ. ಅವರಲ್ಲಿರುವ ಅದ್ಭುತ ಬುದ್ಧಿ ಶಕ್ತಿಯನ್ನು ಪ್ರೋತ್ಸಾಹಿಸುವ ಕೆಲಸ ಮಾಡಬೇಕಾಗಿದ ಎಂದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಹರಿಹರ ರಾಮಕೃಷ್ಣ ಆಶ್ರಮದ ಶ್ರೀ ಶಾರದೇಶಾನಂದಜೀ ಮಹಾರಾಜ್ ಆಶೀರ್ವಚನ ನೀಡಿದರು.

ನಿಟುವಳ್ಳಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಮುಖ್ಯ ಶಿಕ್ಷಕರಾದ ಸುರೇಶ್, ಚಂದ್ರಪ್ಪ, ವಿದ್ಯಾಸಾಗರ ಶಾಲೆಯ ಸಂಸ್ಥಾಪಕ ಭರತ್ ಸಿಂಗ್, ವಿಶ್ವಜಿತ್ ಮತ್ತಿತರರು ಇದ್ದರು.

## ಟಿ.ಜಿ. ರವಿಕುಮಾರ್ - ವಿಜಯೇಂದ್ರ ಭೇಟಿ



ದಾವಣಗೆರೆ, ಅ. 10- ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಹಾಗೂ ಮಾಜಿ ಶಾಸಕ ಟಿ. ಗುರುಸಿದ್ದನಗೌಡ ಹಾಗೂ ವೈದ್ಯಕೀಯ ಪ್ರಕೋಷ್ಠ ರಾಜ್ಯ ಸಹ ಸಂಚಾಲಕ ಮತ್ತು ದಾವಣಗೆರೆ ಲೋಕಸಭಾ ಕ್ಷೇತ್ರದ ಪ್ರಬಲ ಆಕಾಂಕ್ಷಿ ಟಿ.ಜಿ. ರವಿಕುಮಾರ್ ಅವರು ಬೆಂಗಳೂರಿನ ಡಾಲರ್ಸ್ ಕಾಲೋನಿ ನಿವಾಸದಲ್ಲಿ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಭೇಟಿ ಮಾಡಿ, ಮುಂಬರುವ 2024ರ ಲೋಕಸಭಾ ಚುನಾವಣೆ ಕುರಿತು ಚರ್ಚಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರುಗಳಾದ ಬಾಬಣ್ಣ, ದಿನೇಶ್, ಶಿವರಾಜ್, ನಾಗರಾಜ್, ಸ್ವಾಮಿ, ಭರತ್, ಪಾಟೀಲ್, ಆತ್ಮಪಾಟೀಲ್, ಅರವಿಂದ್ ಕೊಂಡಾಪುರ ಹಾಗೂ ಇತರರು ಉಪಸ್ಥಿತರಿದ್ದರು.

## ಅಂಜುಂ ಶಾಲೆ ವಿಭಾಗ ಮಟ್ಟಕ್ಕೆ ಆಯ್ಕೆ



ದಾವಣಗೆರೆ, ಅ. 10 - ಅಂಜುಂ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಬಾಲಕ/ಬಾಲಕಿಯರು ವಲಯ, ತಾಲ್ಲೂಕು ಜಿಲ್ಲಾ ಮಟ್ಟದಲ್ಲಿ ಬಾಲ್ ಬ್ಯಾಡ್ಮಿಂಟನ್, ಥ್ರೋ ಬಾಲ್, ಡಿಸ್ಕಸ್ ಥ್ರೋನಲ್ಲಿ ಪ್ರಥಮ ಸ್ಥಾನ, ಹ್ಯಾಮರ್ ಥ್ರೋ, 600ಮೀ.ನಲ್ಲಿ ದ್ವಿತೀಯ ಸ್ಥಾನ, ಜಾವಲಿನ್ ಥ್ರೋ, ತ್ರಿವಿಧ ಜಿಗಿತದಲ್ಲಿ ತೃತೀಯ ಸ್ಥಾನ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿ ಮತ್ತು ರಾಜ್ಯ ಮಟ್ಟಕ್ಕೆ ಉತ್ತಮ ಪ್ರದರ್ಶನ ನೀಡಲೆಂದು ಸಂಸ್ಥೆ ಗೌರವ ಕಾರ್ಯದರ್ಶಿ ಜನಾಬ್ ಮೊಹಮ್ಮದ್ ಉಮರ್ ಹೆಚ್.ಜೆ. ಶುಭ ಹಾರೈಸಿದ್ದಾರೆ.

## ಸ್ವಯಂ ಉದ್ಯೋಗ ಸಾಲಗಳಿಗೆ ವಿದ್ಯಾರ್ಹತೆ ಕಡ್ಡಾಯ ಬೇಡ

ದಾವಣಗೆರೆ, ಅ.10- ಸರ್ಕಾರದ ವಿವಿಧ ಅಭಿವೃದ್ಧಿ ನಿಗಮಗಳಿಂದ ಸ್ವಯಂ ಉದ್ಯೋಗ ಸಾಲಘಲಿಗೆ ವಿದ್ಯಾರ್ಹತೆ ಕಡ್ಡಾಯ ಮಾಡಿರುವುದನ್ನು ವಿರೋಧಿಸಿರುವ ವಿವಿಧ ಸಮಾಜಗಳ ಮುಖಂಡರು, ಸಂಬಂಧಿಸಿದ ಸಚಿವರು ವಿದ್ಯಾರ್ಹತೆ ಕಡ್ಡಾಯ ಮಾಡದೇ ಸಾಲ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎನ್.ಜೆ. ನಿಂಗಪ್ಪ, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಲಿಂಗಾಯತ ಅಭಿವೃದ್ಧಿ ನಿಗಮ, ಮರಾಠಾ, ಒಕ್ಕಲಿ, ವಿಶ್ವಕರ್ಮ ಉಪ್ಪಾರ, ನಿಜಗುಣ ಅಂಬಿಗರ ಚೌಡಯ್ಯ, ಸವಿತಾ ಸಮಾಜ, ಮಡಿವಾಳ ಸೇರಿದಂತೆ ಹಲವು ಅಭಿವೃದ್ಧಿ ನಿಗಮಗಳಲ್ಲಿ ಆಯಾ ಸಮಾಜದ ಅನಕ್ಷರಸ್ಥ ಹಾಗೂ ಬಡ ಕೂಲಿ ಕಾರ್ಮಿಕರಿಗೆ ಸ್ವಯ ಉದ್ಯೋಗಕ್ಕಾಗಿ ಸಾಲ ನೀಡಲಾಗುತ್ತಿದೆ. ಆದರೆ, 2023-24ನೇ ಸಾಲಿನ ಸಾಲ ಸೌಲಭ್ಯಕ್ಕಾಗಿ ಎಸ್ಸೆಸ್ಸೆಲ್ಸಿ ಹಾಗೂ 7ನೇ ತರಗತಿ ವಿದ್ಯಾರ್ಹತೆ ಕಡ್ಡಾಯ ಮಾಡಿರುವುದು ಸರಿಯಲ್ಲ. ಇದರಿಂದಾಗಿ ವಿದ್ಯಾರ್ಹತೆ ಇಲ್ಲದವರು ಸಾಲ ಸೌಲಭ್ಯದಿಂದ ವಂಚಿತರಾಗಬೇಕಾಗುತ್ತದೆ ಎಂದು. ಅಲ್ಲದೇ, ನಿಗಮ ಸಾಲ ನೀಡುವಾಗ ಷರತ್ತುಗಳನ್ನು ಸರಳೀಕರಣಗೊಳಿಸಬೇಕು. ಜಾಮೀನು ರಹಿತ ಸಾಲ ನೀಡಬೇಕು. ಬಿಪಿಎಲ್ ಹಾಗೂ ಆದಾಯ ಪ್ರಮಾಣ ಪತ್ರವನ್ನು ಮಾತ್ರ ಸಾಲ ಸೌಲಭ್ಯಕ್ಕೆ ಕಡ್ಡಾಯಗೊಳಿಸಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವಿವಿಧ ಸಮಾಜದ ಮುಖಂಡರುಗಳಾದ ಟಿ.ಡಿ. ಹಾಲೇಶಪ್ಪ, ಆರ್.ಕರಿಬಸಪ್ಪ, ವೀರಣ್ಣ, ಅಣ್ಣಪ್ಪ, ಮಹೇಶ್, ಈರಣ್ಣ ಮೇಷ್ಟ್ರು ಇತರರು ಉಪಸ್ಥಿತರಿದ್ದರು.

## 26 ರಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ

ದಾವಣಗೆರೆ, ಅ. 10 - ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಇದೇ ದಿನಾಂಕ 26 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ ಏರ್ಪಡಿಸಲಾಗಿದೆ. ರಹದಾರಿಗೆ ಅರ್ಜಿ ಸಲ್ಲಿಸಲು ಇದೇ ದಿನಾಂಕ 13 ಕೊನೆಯ ದಿನವಾಗಿದೆ ಎಂದು ದಾವಣಗೆರೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿ ಶ್ರೀಧರ್ ತಿಳಿಸಿದ್ದಾರೆ.

## ಮಾನಸಿಕ ತೊಂದರೆ ಇರುವವರೊಂದಿಗೆ ಸೌಜನ್ಯದಿಂದ ವರ್ತಿಸಬೇಕು



### ಜೆಜೆಎಂ ಮೆಡಿಕಲ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಶಾಂತೇರಿ ಪೈ ಆರ್. ಆಶಯ

ದಾವಣಗೆರೆ, ಅ. 10- ಮಾನಸಿಕ ತೊಂದರೆಯಿಂದ ತೊಳಲಾಡುತ್ತಿರುವವ ರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಅಂಥವರನ್ನು ಮುಖ್ಯ ವಾಹಿನಿಯೊಂದಿಗೆ ಬೇರ್ಪಡಿಸದೇ ಅವರೊಂದಿಗೆ ನಿರಂತರ ಒಡನಾಟ ಇಟ್ಟುಕೊಂಡಾಗ ಅವರು ಕೂಡ ಸಾಮಾನ್ಯರಂತೆ ಬದುಕಬಹುದು ಎಂದು ಜೆಜೆಎಂ ಮೆಡಿಕಲ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ. ಶಾಂತೇರಿ ಪೈ ಆರ್. ಹೇಳಿದರು.

ವಿಶ್ವ ಮಾನಸಿಕ ಆರೋಗ್ಯ ದಿನದ ಅಂಗವಾಗಿ ನಗರದ ಚಾಣಕ್ಯ ಪ್ರಥಮ ದರ್ಜೆ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇಂದು ನಡೆದ ಮಾನಸಿಕ ಆರೋಗ್ಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈಗಿನ ವರ್ತಮಾನ ಸಂದರ್ಭದಲ್ಲಿ ಒತ್ತಡದ ಜೀವನ ಹಾಗೂ ಆಧುನಿಕ ಶೈಲಿಯ ಜೀವನ ವ್ಯವಸ್ಥೆಯಿಂದಾಗಿ ಜನರು ಸಂಕೀರ್ಣ ಮಾನಸಿಕ ಸ್ಥಿತಿಯಿಂದ ನಲುಗುತ್ತಿದ್ದಾರೆ. ಸಾಮಾನ್ಯ ಕಾಯಿಲೆಗಳಾದ ಶೀತ, ನೆಗಡಿ, ಕೆಮ್ಮು ಇವುಗಳಂತೆ ಅತಿ ಹೆಚ್ಚು ಜನರು ಮಾನಸಿಕ ತೊಂದರೆ ಯಿಂದ ಬಳಲುತ್ತಿದ್ದಾರೆ. ಅಂತಹವರು ತಜ್ಞರನ್ನು ಸಂಪ ರ್ಕಿಸಿ ಚಿಕಿತ್ಸೆ ಪಡೆಯುವುದು ಸೂಕ್ತ ಎಂದು ಹೇಳಿದರು.

ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಹಿರಿಯ ಚಿಕಿತ್ಸಕ ಡಾ. ಕೆ.ನಾಗರಾಜ್, ಮಾನಸಿಕ ಸಮಸ್ಯೆಗಳು ಹಾಗೂ ತೊಂದರೆಗಳ ಕುರಿತಂತೆ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಉದ್ದೇಶದಿಂದ ಪ್ರತಿ ವರ್ಷದ ಅಕ್ಟೋಬರ್ 10 ನೇ ತಾರೀಖಿನಂದು ವಿಶ್ವ ಮಾನಸಿಕ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಆ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸಿ, ಜಾಗತಿಕವಾಗಿ ಕಾಡುತ್ತಿರುವ ಮಾನಸಿಕ ಸಮಸ್ಯೆಗಳಿಂದ ಹೊರ ತರುವುದು ಹಾಗೂ ಸುಲಲಿತ ಜೀವನವನ್ನು ನಡೆಸುವಂತೆ ಮಾಡುವುದು ಇದರ ಉದ್ದೇಶ ಎಂದು ಹೇಳಿದರು.

ಮಾನಸಿಕ ಸಮಸ್ಯೆಗಳಿಗೆ ಚಿಕಿತ್ಸೆ ಪಡೆಯಲು ಯಾವುದೇ ಮುಜುಗರ ಹಾಗೂ ಅಂಜಿಕೆ ಬೇಡ. ಇಲ್ಲದೇ ಇದ್ದಲ್ಲಿ ಸಣ್ಣಪುಟ್ಟ ತೊಂದರೆಗಳು ಜೀವನವನ್ನೇ ಅಶಾಂತ ಮಯವನ್ನಾಗಿಸಬಹುದು. ಶೇಕಡ 90ರಷ್ಟು ಜನರು ಮಾನಸಿಕ ಸಮಸ್ಯೆಯ ತೊಂದರೆಗಳಿಗೆ ಚಿಕಿತ್ಸೆಯಿಂದ ದೂರ ಉಳಿದಿದ್ದಾರೆ. ಸ್ಥಿತಿ ಹೀಗೆ ಮುಂದುವರೆದರೆ ಇದು ಜಾಗತಿಕ ಪಿಡುಗಾಗಬಹುದು ಎಂದು ಅಭಿಪ್ರಾಯಪಟ್ಟರು.

ಬಿಆರ್‌ಟಿ ಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಕೆ. ರಾಜಶೇಖರ್, ಉಪನ್ಯಾಸಕರಾದ ಶಾಂತಲಾ, ಅಶ್ವಿನಿ, ಸ್ವಪ್ನ ಇನ್ನಿತರರು ಹಾಜರಿದ್ದರು.

## ನಿಸರ್ಗ ಯೋಗ ಚಿಕಿತ್ಸಾ ಶಿಬಿರ ಉದ್ಘಾಟನೆ



ಹರಿಹರ

ಹರಿಹರ, ಅ. 10 - ನಗರದ ಧನ್ವಂತರಿ ಪತಂಜಲಿ ಆರೋಗ್ಯ ಕೇಂದ್ರ, ಯಶಸ್ವಿ ಕಿರಣ ಸೇವಾ ಸಂಸ್ಥೆ, ಶ್ರೀಮತಿ ಗಿರಿಯಮ್ಮ ಆರ್. ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ವಿದ್ಯಾಲಯ ಮತ್ತು ಪದವಿ ಪೂರ್ವ ಕಾಲೇಜು, ಶ್ರೀ ಕಾಮಧೇನು ಕ್ರೀಡಾ ಮತ್ತು ಸಾಂಸ್ಕೃತಿಕ ಸಮುದಾಯ ಸೇವಾ ಸಂಘ ಇವರುಗಳ ಸಹಯೋಗದೊಂದಿಗೆ ಗಿರಿಯಮ್ಮ ಕಾಲೇಜ್ ಆವರಣದಲ್ಲಿ ಹಮ್ಮಿಕೊಂಡಿದ್ದ ಉಚಿತ ನಿಸರ್ಗ ಯೋಗ ಚಿಕಿತ್ಸಾ ಶಿಬಿರವನ್ನು ಶಾಸಕ ಬಿ. ಪಿ ಹರೀಶ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ನಿಂಬಕ್ಕ ಚಂದಪೂರ್, ವೀರೇಶ್, ತುಂಗಭದ್ರಾ ಸೊಸೈಟಿ ಅಧ್ಯಕ್ಷ ಹಲಸಬಾಳು ಶಿವಾನಂದಪ್ಪ, ಯೋಗ ಉಪನ್ಯಾಸಕ ಜಯರಾಮ್, ನಾರಾಯಣ ಜೋಯಿಸರು, ನಿರಂಜನ, ಕರಿಬಸಪ್ಪ ಕಂಚಿಕೇರಿ, ಗಣಪತಿ ಮಾಳಂಜೆ, ವಿಜಯಕುಮಾರ್, ಹರಿಶಂಕರ್ ಜೋಯಿಸರು, ಕಾರ್ತಿಕ್, ಶಶಿನಾಯ್ಕ್, ಇತರರು ಹಾಜರಿದ್ದರು.

## ಧ.ರಾ.ಮ. ಕಾಲೇಜಿನಲ್ಲಿ ಗಾಂಧೀಜಿ-ಶಾಸ್ತ್ರೀಜಿ ಜಯಂತಿ



ದಾವಣಗೆರೆ, ಅ. 10- ಧ.ರಾ.ಮ.ವಿಜ್ಞಾನ ಪಪೂ ಕಾಲೇಜಿನಲ್ಲಿ ಗಾಂಧೀ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ರವರ ಜಯಂತಿ ಆಚರಿಸಲಾಯಿತು. ಪದವಿಪೂರ್ವ ವಿಭಾಗದ ಪ್ರಾಂಶುಪಾಲ ಜೆ. ಶಿವಪ್ಪ ಅಧ್ಯಕ್ಷೀಯ ಭಾಷಣ ಮಾಡಿದರು. ಟಿ ಶೋಭ ಸ್ವಾಗತಿಸಿದರು. ಡಾ. ಸೌಮ್ಯ ನಿರೂಪಿಸಿ ದರು. ವಿದ್ಯಾರ್ಥಿನಿ ಕೆ.ಎಂ. ನಿಷ್ಕ ಮಾತನಾಡಿದರು. ಪದವಿ ವಿದ್ಯಾರ್ಥಿಗಳು ಪ್ಲಾಸ್ಟಿಕ್ ಕುರಿತಂತೆ ಕಿರುನಾಟಕ ಪ್ರದರ್ಶಿಸಿದರು. ಡಾ. ಟಿ. ಮಂಜುರಾಜ್ ವಂದಿಸಿದರು.

## ಜನರಿಗೆ ಆರೋಗ್ಯದ ಬಗ್ಗೆ ಅರಿವು ಹೆಚ್ಚಾಗಬೇಕು

### ಮಲೇಬೆನ್ನೂರು : ಉಚಿತ ಹೃದಯ ತಪಾಸಣಾ ಶಿಬಿರದಲ್ಲಿ ಡಾ. ಲಕ್ಷ್ಮಿದೇವಿ



ಮಲೇಬೆನ್ನೂರು, ಅ.10- ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಲೇಬೆನ್ನೂರು ಲಯನ್ಸ್ ಕ್ಲಬ್ ಮತ್ತು ಎಸ್.ಎಸ್. ನಾರಾಯಣ ಹಾರ್ಟ್ ಸೆಂಟರ್ (ದಾವಣಗೆರೆ) ಹಾಗೂ ಶ್ರೀ ವೀರಭದ್ರೇಶ್ವರ ಚಾರಿಟೇಬಲ್ ಟ್ರಸ್ಟ್ (ಮಲೇಬೆನ್ನೂರು) ಇವರುಗಳ ಸಂಯುಕ್ತಾಶ್ರಯದಲ್ಲಿ ಸೋಮವಾರ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕರಿಗೆ ಉಚಿತ ಹೃದಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಶಿಬಿರವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ಮಾತನಾಡಿ, ಜನರಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸುತ್ತಿರುವ ಲಯನ್ಸ್ ಕ್ಲಬ್ ಸೇವೆ ಇತರರಿಗೆ ಮಾದರಿ ಎಂದರು.

ಸಿಡಿಪಿಓ ಶ್ರೀಮತಿ ಪೂರ್ಣಿಮಾ ಮಾತನಾಡಿ, ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಬಗ್ಗೆ ಕಾಳಜಿ ವಹಿಸಿ, ಅವರ ಆರೋಗ್ಯವನ್ನು ಉಚಿತವಾಗಿ ತಪಾಸಣೆ ಮಾಡಿಸಿ ಅಗತ್ಯ ಸಲಹೆ, ಚಿಕಿತ್ಸೆ ಕೊಡಿಸಿದ ಮಲೇಬೆನ್ನೂರು ಲಯನ್ಸ್ ಕ್ಲಬ್‌ಗೆ ಕೃತಜ್ಞತೆ ಸಲ್ಲಿಸುತ್ತೇವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಲಯನ್ಸ್ ಕ್ಲಬ್ ಅಧ್ಯಕ್ಷ ಚಿಟ್ಟಕ್ಕಿ ನಾಗರಾಜ್ ಮಾತನಾಡಿ, ಮನುಷ್ಯನಿಗೆ ಹೃದಯದ ಆರೋಗ್ಯ ಬಹಳ ಮುಖ್ಯವಾಗಿದೆ. ಕಣ್ಣು, ಕಾಲು, ಕೈ ಇಲ್ಲದಿದ್ದರೂ ಮನುಷ್ಯ ಬದುಕುತ್ತಾನೆ. ಆದರೆ ಹೃದಯ ನಿಂತರೆ ಮನುಷ್ಯನ ಉಸಿರಾಟ ನಿಲ್ಲುತ್ತದೆ. ಹಾಗಾಗಿ ನಾವು ಹೃದಯದ ಆರೋಗ್ಯಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ ಎಂದು ಚಿಟ್ಟಕ್ಕಿ ನಾಗರಾಜ್ ತಿಳಿಸಿದರು.

ಲಯನ್ಸ್ ಕ್ಲಬ್ ಕಾರ್ಯದರ್ಶಿ ಸಿರಿಗೆರೆ ಸಿದ್ದಪ್ಪ, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷರಾದ ಡಾ. ಹೆಚ್.ಜೆ. ಶ್ರೀಕಾಂತ್, ಎನ್.ಜಿ. ಬಸವನಗೌಡ್ರು, ಶ್ರೀಮತಿ ರೂಪಾ ಪಾಟೀಲ್, ಪುರಸಭೆ ಸದಸ್ಯ ಖಲೀಲ್, ಮಾಜಿ ಸದಸ್ಯ ಪಿ.ಆರ್. ರಾಜು, ಅಂಗನವಾಡಿ ಮೇಲ್ವಿಚಾರಕರಾದ ಶಾಂತ ಜಾಧವ್, ರೇಣುಕಾ, ವೀರಭದ್ರೇಶ್ವರ ಚಾರಿಟೆಬಲ್ ಟ್ರಸ್ಟ್‌ನ ಬಿ.ವಿ. ರುದ್ರೇಶ್, ಬಿ. ಎನ್. ವೀರೇಶ್, ನಾರಾಯಣ ಹಾರ್ಟ್ ಸೆಂಟರ್‌ನ ಗುಡ್ಡಪ್ಪ ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

## ದಾವಣಗೆರೆ ಯುವಕರು ರೂಪಿಸಿದ 'ಭಾರತೀಯ ಕ್ರಿಕೆಟ್ ಗೀತೆ'

ದಾವಣಗೆರೆ, ಅ.10- ಬ್ಲಾಕ್ ಕ್ಯಾಟ್ಸ್ ಕ್ರಿಯೇಟಿವ್ ಲ್ಯಾಬ್ ವತಿಯಿಂದ 'ಭಾರತೀಯ ಕ್ರಿಕೆಟ್ ಗೀತೆ (ವರ್ಡ್ ಕಪ್ ಕ್ರಿಕೆಟ್ ಆಂಥೆಮ್-2023) ರೂಪಿಸಲಾಗಿದೆ ಎಂದು ಕಾರ್ಯಕಾರಿ ನಿರ್ಮಾಪಕ ಚೇತನ್ ಎಂ.ಎಸ್. ಹೇಳಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2023ರ ವರ್ಲ್ಡ್ ಕಪ್ ಕ್ರಿಕೆಟ್ ಗೆದ್ದುಬರಲಿ ಎಂದು ಭಾರತ ತಂಡವನ್ನು ಹುರಿದುಂಬಿಸಲು ಈ ಕ್ರಿಕೆಟ್ ಗೀತೆ ರೂಪಿಸಲಾಗಿದೆ.

ಕನ್ನಡ, ಹಿಂದಿ, ತೆಲುಗು, ತಮಿಳು ಹಾಗೂ ಮಲಯಾಳಂ ಸೇರಿ ಇದೇ ಪ್ರಥಮ ಬಾರಿಗೆ 5 ಭಾಷೆಗಳಲ್ಲಿ ಬಿಡುಗಡೆಯಾಗಿದೆ ಎಂದು ಹೇಳಿದರು.

ಸುಮಾರು 18 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಈ ಗೀತೆಯಲ್ಲಿ ಸುಮಾರು 500ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. 3 ದಿನಗಳ ಕಾಲ ದಾವಣಗೆರೆಯಲ್ಲಿ ಶೂಟಿಂಗ್ ನಡೆಸಲಾಗಿದೆ ಎಂದರು.

ವಿಡಿಯೋ ಹಾಡನ್ನು ಬ್ಲ್ಯಾಕ್ ಕ್ಯಾಟ್ಸ್ ಕ್ರಿಯೇಟಿವ್ ಲ್ಯಾಬ್ ಅಧಿಕೃತ ಯೂಟ್ಯೂಬ್ ಚಾನಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಡಿ.ಶೇಷಾಚಲ, ಅಮಿತ್ ಎನ್. ಪಾಟೀಲ್, ಬಾಲಾಜಿ, ಕಾರ್ತಿಕ್, ನವೀನ್ ಇತರರಿದ್ದರು.


## 'ಸತ್ಯಮೇವ ಜಯತೆ' ಎನ್ನುವ ಸೂಕ್ತಿ ಕನ್ನಡದಲ್ಲಿರಬೇಕು: ಸುಭಾನ್

ದಾವಣಗೆರೆ, ಅ.10- ರಾಜ್ಯಕ್ಕೆ ಕರ್ನಾಟಕ ಎಂದು ಮರು ನಾಮಕರಣ ಮಾಡಿ 50 ವರ್ಷ ಪೂರ್ಣಗೊಳ್ಳಲಿದ್ದು, ಇದರ ಅಂಗವಾಗಿ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಎಂಬ ಶೀರ್ಷಿಕೆಯಡಿ ಕನ್ನಡ ನಾಡು, ನುಡಿ ಹಾಗೂ ಸಂಸ್ಕೃತಿಯನ್ನು ಬಿಂಬಿಸುವ ವಿಶಿಷ್ಟವಾದ ಲಾಂಚನ ಮಾದರಿಯನ್ನು ಸರ್ಕಾರ ಆಹ್ವಾನಿಸಿದೆ. ಇದು ಸ್ವಾಗತಾರ್ಹವಾಗಿದೆ ಎಂದು ಹೆಲ್ಪ್ ಲೈನ್ ಸುಭಾನ್ ತಿಳಿಸಿದ್ದಾರೆ.

ಆದರೆ ಕರ್ನಾಟಕ ಸರ್ಕಾರದ ಲಾಂಚನದಲ್ಲಿ 'ಸತ್ಯಮೇವ ಜಯತೆ' ಎನ್ನುವ ಸೂಕ್ತಿಯು ಕನ್ನಡೇತರ ಭಾಷೆಯಲ್ಲಿ ಮುದ್ರಿತವಾಗಿದೆ. ಇದನ್ನು ಮೊದಲು ಸರಿಪಡಿಸಬೇಕಾಗಿದೆ. ಇದರ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಿ ಬುದ್ಧಿ ಜೀವಿಗಳು, ಕನ್ನಡಪರ ಹೋರಾಟಗಾರರು, ಸಾಹಿತಿಗಳು ಮತ್ತು ಇತಿಹಾಸಕಾರರನ್ನು ಒಳಗೊಂಡ ಸರ್ಕಾರಿ ಸಭೆ ನಡೆಸಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಸುಭಾನ್ ಒತ್ತಾಯಿಸಿದ್ದಾರೆ.

## ಪ್ರಕೃತಿಗೆ ವಿರುದ್ಧವಾಗಿ ಜೀವನ ನಡೆಸಿದಾಗ ರೋಗಗಳು ಹತ್ತಿರವಾಗುತ್ತವೆ

### 'ಹಲೋ ಕನ್ನಡಿಗ' ದಿಂದ 'ನಿಸರ್ಗ ಸಿರಿ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹಿರಿಯ ಪತ್ರಕರ್ತ ಜಯರಾಮ್ ಹೆಗಡೆ



ಸಿರಸಿ, ಅ.10- ಇಲ್ಲಿನ ಶ್ರೀ ಅನಂತ ರಾವ್ ಬೀಳಗಿ ಸ್ಮಾರಕ ನಿಸರ್ಗ ಆಸ್ಪತ್ರೆ ಹಾಗೂ ಹಲೋ ಕನ್ನಡಿಗ ವಾರ ಪತ್ರಿಕೆ (ದಾವಣಗೆರೆ) ಇವರ ಸಂಯುಕ್ತ ಆಶ್ರಯದಲ್ಲಿ ಗಾಂಧಿ ಜಯಂತಿ ಹಾಗೂ ನಿಸರ್ಗ ಆಸ್ಪತ್ರೆಯ 11ನೇ ವಾರ್ಷಿಕೋತ್ಸವ ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ ಆಸ್ಪತ್ರೆಯ ಉತ್ತಮ ಸಿಬ್ಬಂದಿ ಪ್ರಶಸ್ತಿಗಳನ್ನು ವಿತರಣೆ ಮಾಡಲಾಯಿತು. 'ನಿಸರ್ಗ ಸಿರಿ' ಪ್ರಶಸ್ತಿಯನ್ನು ಶೋಭಾ ವಿ. ಲಮಾಣಿ ಹಾಗೂ ವಿನಯ್ ಪರಮೇಶ್ವರ ನಾಯಕ್ ಇವರಿಗೆ ನೀಡಿ ಸನ್ಮಾನಿಸಲಾಯಿತು. ಪ್ರಾಸ್ತಾವಿಕವಾಗಿ ಮಾತನಾಡಿದ ನಿಸರ್ಗ ಟ್ರಸ್ಟ್ ಅಧ್ಯಕ್ಷ ಡಾ. ಪಿ.ಜಿತೇಶ್, ಆಸ್ಪತ್ರೆಯ ಸಿಬ್ಬಂದಿಗಳ ಕೆಲಸದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

'ನಿಸರ್ಗ ಸಿರಿ' ಪ್ರಶಸ್ತಿ ಸಂಸ್ಥಾಪಕರಾದ ಹಲೋ ಕನ್ನಡಿಗ ಪತ್ರಿಕೆ ಸಂಪಾದಕ ಸಿ. ವೇದಮೂರ್ತಿ ಮಾತನಾಡಿ, ಅತ್ಯುತ್ತಮವಾಗಿ ಸೇವೆ ಸಲ್ಲಿಸುತ್ತಿರುವ ಇಬ್ಬರಿಗೆ ಪ್ರತಿವರ್ಷ 'ನಿಸರ್ಗ ಸಿರಿ' ಪ್ರಶಸ್ತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಹಿರಿಯ ಪತ್ರಕರ್ತ ಜಯರಾಮ್ ಹೆಗಡೆ ಮಾತನಾಡಿ, ನಾವು ಪ್ರಕೃತಿಯೊಂದಿಗೆ ಹೊಂದಿಕೊಂಡು ಪ್ರಕೃತಿದತ್ತವಾದ ಜೀವನವನ್ನು ನಡೆಸಿದರೆ ನಮಗೆ ಯಾವುದೇ ರೋಗಗಳ ಭಯವಿರುವುದಿಲ್ಲ. ನಾವು ಪ್ರಕೃತಿಗೆ ವಿರುದ್ಧವಾಗಿ ಜೀವನ ಮಾಡಿದಾಗ ನಮಗೆ ರೋಗಗಳು ಬರುತ್ತವೆ ಎಂಬುದನ್ನು ಪ್ರತಿಯೊಬ್ಬರು ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಿರಿಯ ಪತ್ರಕರ್ತರು, ನಿವೃತ್ತ ಶಿಕ್ಷಕರೂ ಆದ ರಾಜೀವ್ ಅಜ್ಜಿಬಾಳ ಮಾತನಾಡಿ, ನಮ್ಮ ಸುತ್ತಮುತ್ತ ಇರುವ ಗಿಡ, ಮರ, ಬಳ್ಳಿ, ಮಣ್ಣು, ಪ್ರಕೃತಿ ಎಲ್ಲದರಲ್ಲೂ ಸಮತೋಲನದಲ್ಲಿ ಕಾಯ್ದುಕೊಂಡು ಪರಿಸರವನ್ನು ರಕ್ಷಿಸಿ, ಪರಿಸರವನ್ನು ಸಮತೋಲನದಲ್ಲಿ ನಾವು ನೋಡಿಕೊಂಡು, ಪ್ರಕೃತಿಯೊಂದಿಗೆ ಜೀವನ ನಡೆಸಿದಾಗ ನಮಗೆ ತುಂಬಾ ಸಹಕಾರಿಯಾಗಲಿದೆ. ಪರಿಸರವನ್ನು ನಾವು ರಕ್ಷಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಬಹಳ ಆರೋಗ್ಯ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಹಾಗಾಗಿ ಎಲ್ಲರೂ ಕೂಡ ಪ್ರಕೃತಿಯನ್ನು ಸಂರಕ್ಷಿಸಬೇಕು ಎಂದು ಕಿವಿಮಾತು ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ವಕೀಲ ರಾಮಾ ಜೋಶಿ ಆಸ್ಪತ್ರೆ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮ್ಯಾನೇಜಿಂಗ್ ಟ್ರಸ್ಟಿ ಬಿ.ಡಿ. ವಿಶ್ವಾಮಿತ್ರ ವಕೀಲರು ಮತ್ತು ಮ್ಯಾನೇಜಿಂಗ್ ಟ್ರಸ್ಟಿ ಅನಂತ ರಾವ್ ಬೀಳಗಿ ಮಾತನಾಡಿ, ನಮ್ಮ ಸನಾತನ ಧರ್ಮದಲ್ಲೇ ಎಲ್ಲವೂ ಅಡಗಿದೆ ಆ ಒಂದು ಧರ್ಮದ ಪ್ರಕಾರ ನಡೆದಲ್ಲಿ ನಮ್ಮ ಜೀವನ ಸುಖಮಯವಾಗಲಿದೆ ಎಂದು ನುಡಿದರು. ನಿಸರ್ಗ ಆಸ್ಪತ್ರೆ ವ್ಯವಸ್ಥಾಪಕ ಪ್ರಕಾಶ್ ಭಟ್ ಕಾರ್ಯಕ್ರಮ ನಿರೂಪಿಸಿದರು. ಕಾರ್ಯದರ್ಶಿ ಡಾ. ಲಕ್ಷ್ಮಿ ಪಿ .ಎಸ್. ವಂದಿಸಿದರು.


**VIJAYA PARAMEDICAL COLLEGE**
**ವಿಜಯ ಪ್ಯಾರಾ ಮೆಡಿಕಲ್ ಕಾಲೇಜ್**

**ADMISSION 2023-24**

DMLT - Lab Technician
D.O.T - Operation Theatre
DMIT - X-ray Technician
DHI - Health Inspector

**DURATION**
*SSLC Pass - 3 Years / PUC Science Pass 2 Years*

**Few Seats Available**
**Contact : 99454 22553, 72041 85991**

# ಅಲ್ಪಸಂಖ್ಯಾತರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ : ಸಿಎಂ ಸಿದ್ದರಾಮಯ್ಯ

ಬೆಂಗಳೂರು, ಅ.10- ಅಲ್ಪಸಂಖ್ಯಾತ ಸಮುದಾಯಗಳ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಸಲಹೆ ನೀಡಿದ ಮುಖ್ಯ ಮಂತ್ರಿಗಳು ಅರಿವು ಸಾಲ ಯೋಜನೆಯಡಿ ವೈದ್ಯಕೀಯ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ನೀಡುವ ಸಾಲದ ಮೊತ್ತ ಹೆಚ್ಚಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ವಸತಿ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸಂಖ್ಯೆ ಹೆಚ್ಚಳ ಹಾಗೂ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಮಾಣ ಹೆಚ್ಚಳ ಮಾಡಿರುವುದಕ್ಕೆ ಅನುಗುಣವಾಗಿ ಹೆಚ್ಚುವರಿ ಹುದ್ದೆಗಳ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದರು.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಿಗೆ ನಿಗದಿತ ಗುರಿಗೆ ಎದುರಾಗಿ ನಿರೀಕ್ಷೆಗೂ ಮೀರಿ ಅರ್ಜಿಗಳು ಸ್ವೀಕೃತವಾಗಿರುವುದರಿಂದ ಅರ್ಹ ಫಲಾನುಭವಿಗಳ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಿ, ಅನುದಾನ ಲಭ್ಯತೆಗೆ ಅನುಸಾರವಾಗಿ ಸೌಲಭ್ಯ ವಿತರಿಸುವಂತೆ ಸೂಚಿಸಿದರು.

ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆಯಡಿ ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿಗೆ 1,000 ಕೋಟಿ ರೂ. ಮೊತ್ತದ ಕ್ರಿಯಾ ಯೋಜನೆ ರೂಪಿಸಿ, ಕಾಮಗಾರಿಗಳ ಆದ್ಯತಾ ಪಟ್ಟಿಯನ್ವಯ ಕೆಲಸ ಕೈಗೆತ್ತಿಕೊಳ್ಳುವಂತೆ ಸಲಹೆ ನೀಡಿದರು. ಅಲ್ಪಸಂಖ್ಯಾತರ ಇಲಾಖೆಯಡಿ ಆಯವ್ಯಯದಲ್ಲಿ ಘೋಷಿಸಲಾದ 19 ಘೋಷಣೆಗಳ ಪೈಕಿ 16 ಘೋಷಣೆಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಹೊರಡಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಪ್ರಧಾನ ಮಂತ್ರಿ ಆವಾಸ್ ಯೋಜನೆ ಪ್ರಗತಿ ಕುಂಠಿತವಾಗಿರುವುದರಿಂದ ಸಂಪನ್ಮೂಲ ಕ್ರೋಢೀಕರಣ ಕುರಿತಂತೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು. ಈ ಯೋಜನೆಯಡಿ ಫಲಾನುಭವಿ ವಂತಿಗೆ ಪ್ರಮಾಣ ಹೆಚ್ಚಾಗಿರುವುದರಿಂದ ಹಾಗೂ ಫಲಾನುಭವಿಗಳ ವಂತಿಗೆ ಪಾವತಿ ಹಿನ್ನಡೆಯಾಗಿದೆ. ಈ ಹಿನ್ನೆಲೆಯಲ್ಲಿ ಸಂಪನ್ಮೂಲ ಕ್ರೋಢೀಕರಣಕ್ಕೆ ನೀತಿ ರೂಪಿಸಲು ಪ್ರಸ್ತಾವನೆ ಸಲ್ಲಿಸುವಂತೆ ಮುಖ್ಯಮಂತ್ರಿಗಳು ತಿಳಿಸಿದರು.

ಒಂದು ಲಕ್ಷ ವಸತಿ ಯೋಜನೆಯಡಿ ನಿರ್ಮಾಣಗೊಂಡ ಮನೆಗಳಿಗೆ ಅಗತ್ಯ ಮೂಲಸೌಕರ್ಯವನ್ನು ಆದ್ಯತೆಯ ಮೇರೆಗೆ ಕಲ್ಪಿಸುವಂತೆ ಸೂಚಿಸಿದರು.

## ನಗರದಲ್ಲಿ ಇಂದು ಲೋಕಾಯುಕ್ತ ಪೊಲೀಸರಿಂದ ಅಹವಾಲು ಸ್ವೀಕಾರ

ಲೋಕಾಯುಕ್ತ ಪೊಲೀಸ್ ಅಧೀಕ್ಷಕದ ಎಂ.ಎಸ್ ಕೌಲಾಪೂರೆ ಅವರು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆವರೆಗೆ ಜಿಲ್ಲಾಧಿಕಾರಿಗಳ ಕಚೇರಿ ತುಂಗಭದ್ರಾ ಸಭಾಂಗಣದ ಕಂದಾಯ ಭವನದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ.

# ಸಾಮರಸ್ಯದ ಬದುಕು, ಸರ್ವತೋಮುಖ ಅಭಿವೃದ್ಧಿಗೆ ಸಂಕಲ್ಪ

## ದೇವಿಕೆರೆ ಗ್ರಾಮದಲ್ಲಿ ಕಾಂಗ್ರೆಸ್ ಪಕ್ಷದಿಂದ ಸನ್ಮಾನ ಸ್ವೀಕರಿಸಿದ ಜಗಳೂರು ಶಾಸಕ ಬಿ.ದೇವೇಂದ್ರಪ್ಪ

ಜಗಳೂರು, ಅ.10- ಕ್ಷೇತ್ರದಲ್ಲಿ ಸಾಮರಸ್ಯದ ಬದುಕು ಹಾಗೂ ಸರ್ವತೋಮುಖ ಅಭಿವೃದ್ಧಿ ನನ್ನ ಸಂಕಲ್ಪ ಎಂದು ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದರು.

ತಾಲ್ಲೂಕಿನ ದೇವಿಕೆರೆ ಗ್ರಾಮದಲ್ಲಿ ಕಾಂಗ್ರೆಸ್ ಪಕ್ಷದಿಂದ ಇಂದು ಹಮ್ಮಿಕೊಂಡಿದ್ದ ನೂತನ ಶಾಸಕರಿಗೆ ಅಭಿನಂದನೆ ಹಾಗೂ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಕ್ಷೇತ್ರದಲ್ಲಿ ಸರ್ಕಾರದಿಂದ ವೇತನ ಪಡೆಯುವ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿ ಸಾರ್ವಜನಿಕರಿಗೆ ಅಲೆದಾಡಿಸಿದರೆ ನಾನು ಅವರಿಗೆ ಖಡಕ್ ಎಚ್ಚರಿಕೆ ನೀಡುವೆ. ನಾನು ಭಾವನಾತ್ಮಕ ಜೀವಿ. ಜನರನ್ನು ಅಲೆದಾಡಿಸಿದರೆ ಸಹಿಸಲಾರೆ ಎಂದರು.

ದೇವಿಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನರು ನನಗೆ ಅದ್ಧೂರಿ ಸ್ವಾಗತದೊಂದಿಗೆ ವಿಜೃಂಭಿಸಿದ್ದು, ಹರ್ಷತಂದಿದೆ. ಮುಂದಿನ ದಿನಗಳಲ್ಲಿ ತಮ್ಮ ಬೇಡಿಕೆಗಳಾದ ಶಾಲಾ ಕಟ್ಟಡ, ರಸ್ತೆ, ಸಾರಿಗೆ ಸೌಕರ್ಯ, ಕಲ್ಯಾಣಮಂಟಪ, ಹೈಟೆಕ್ ಶೌಚಾಲಯ, ನೀರು, ಸೂರು ಸೇರಿದಂತೆ ಸೌಲಭ್ಯಗಳನ್ನು ಹಂತಹಂತವಾಗಿ ನನ್ನ ಆಡಳಿತಾವಧಿಯಲ್ಲಿ ಈಡೇರಿಸುವೆ ಎಂದು ಹೇಳಿದರು.

**ನಾನು ಕಾಂಗ್ರೆಸ್ ಸೇರಲು ರವಿಚಂದ್ರ ಕಾರಣ:** ಜೆಡಿಎಸ್ ಪಕ್ಷ ತೊರೆದು ಉಸ್ತುವಾರಿ ಸಚಿವರಾದ ಮಲ್ಲಿಕಾರ್ಜುನ್ ಅವರ ನೇತೃತ್ವದಲ್ಲಿ ಪಕ್ಷದ ಬಲವರ್ಧನೆಗಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಳಿಸಿದ್ದು ಬಸವಾಪುರ ರವಿಯಣ್ಣ. ಅಂದಿನಿಂದ ಪಕ್ಷ ನಿಷ್ಠೆಯಿಂದ ಶ್ರಮಿಸಿದ ಫಲವಾಗಿ ದೈವಾ ನುಗ್ರಹದಿಂದ ಇಂದು ಶಾಸಕನಾಗಿದ್ದೇನೆ. ವ್ಯಕ್ತಿಗೆ ಒಳ್ಳೆಯದು ಬಯಸಿದವರನ್ನು ಸ್ಮರಿಸಬೇಕು ಎಂದು ಮಾರ್ಮಿಕವಾಗಿ ನುಡಿದರು.



**ನೀರಾವರಿ ನಾಡಾಗಲಿದೆ:** 57 ಕೆರೆ ತುಂಬಿಸುವ ಯೋಜನೆಯಡಿ 11 ಕೆರೆಗಳಿಗೆ ನೀರು ಬಂದಿದ್ದು, 5 ಕಿ.ಮೀ ದೂರ ಪೈಪ್ ಲೈನ್ ಕಾಮಗಾರಿ ಪೂರ್ಣಗೊಂಡು ಎಲ್ಲಾ ಕೆರೆಗಳು ಭರ್ತಿಯಾಗಲಿವೆ. ಅಲ್ಲದೇ, ಭದ್ರಾ ಮೇಲ್ದಂಡೆ ಯೋಜನೆ ಸಾಕಾರಗೊಂಡಿದೆ. ಬರದ ನಾಡು ನೀರಾವರಿ ನಾಡಾಗಲಿದೆ ಎಂದು ಶಾಸಕರು ತಿಳಿಸಿದರು.

ಕೆಪಿಸಿಸಿ ಎಸ್‌ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ರಾಜ್ಯದಲ್ಲಿ ಬರಗಾಲ ದೊಡ್ಡ ಸವಾಲಾಗಿ ಎದುರಾಗಿದೆ. ಹಿಂಗಾರು ಮಳೆಯಾದರೂ ರೈತರನ್ನು ಕೈ ಹಿಡಿಯಬೇಕಿದೆ. 10 ವರ್ಷ ಆಡಳಿತ ನಡೆಸಿದ ಬಿಜೆಪಿ ಸರ್ಕಾರ ನರೇಗಾ ಯೋಜನೆಯನ್ನು ಮಾನದಂಡಗಳೊಂದಿಗೆ ಸಂಪೂರ್ಣ ಕುಂಠಿತಗೊಳಿಸಿದೆ. ಸುಳ್ಳಿನ ಪ್ರಚಾರದ ಅಬ್ಬರದಲ್ಲಿ ರಾಜ್ಯದಲ್ಲಿನ ಕೂಲಿಕಾರ್ಮಿಕ, ರೈತರನ್ನು, ಯುವಕರನ್ನು ಕಂಗಾಲುಗೊಳಿಸಿದೆ ಎಂದು ಆರೋಪಿಸಿದರು.

ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಟೇಲ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ಪಕ್ಷ ಕೊಟ್ಟ ಮಾತಿನಂತೆ ಆರ್ಥಿಕ ವ್ಯವಸ್ಥೆಯಲ್ಲಿ ಸಮತೋಲನ ಕಾಪಾಡಿಕೊಂಡು 76000 ಕೋಟಿ ತೆರಿಗೆ ಹಣ ಸಂಗ್ರಹಿಸಿ, ಗ್ಯಾರಂಟಿ ಯೋಜನೆಗಳ ಬಗ್ಗೆ ಅಪಪ್ರಚಾರಮಾಡುತ್ತಿದ್ದ ಬಿಜೆಪಿ ಪಕ್ಷದವರಿಗೆ ತಕ್ಕ ಪಾಠ ಕಲಿಸಿದೆ ಎಂದು ತಿಳಿಸಿದರು.

ಮುಖಂಡ ಬಸವಾಪುರ ರವಿಚಂದ್ರ ಮಾತನಾಡಿ, 2018 ರಿಂದ ದೇವಿಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಅಭಿವೃದ್ಧಿ ಮರೀಚಿಕೆಯಾಗಿದೆ. ಗ್ರಾಮ ಪಂಚಾಯಿತಿ ಅನುದಾನ ಮಾತ್ರ ಬಳಕೆಯಾಗಿದೆ. ಬಡ ಕೂಲಿ ಕಾರ್ಮಿಕರಿಗೆ ವರದಾನವಾಗಿದ್ದ ನರೇಗಾ ಯೋಜನೆಯನ್ನು ಹಿಂದಿನ ಶಾಸಕರು ಸ್ಥಗಿತಗೊಳಿಸಿದ್ದರು ಎಂದು ದೂರಿದರು.

ಜೆಡಿಎಸ್ ಮುಖಂಡರು ಸುಳ್ಳಿನ ರಾಜಕಾರಣ ಮಾಡುವುದಲ್ಲದೆ, ಸೊಸೈಟಿಯಲ್ಲಿ ಬೇನಾಮಿ ಸಾಲ ಸೃಷ್ಟಿಸಿ ಶೇ. 12 ರಷ್ಟು ಬಡ್ಡಿಯೊಂದಿಗೆ ನವೀಕರಣಗೊಳಿಸಿ ಅವ್ಯವಹಾರ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಸೇಬುಹಣ್ಣಿನ ಮಾಲೆಹಾಕಿ, ಪಟಾಕಿ ಸಿಡಿಸಿ ಕಾರ್ಯಕರ್ತರು ಮೆರವಣಿಗೆ ನಡೆಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಮುಖಂಡರಾದ ಮೆದಗಿನಕೆರೆ ವೀರಣ್ಣ, ವಕೀಲ ಪ್ರಕಾಶ್, ರುದ್ರಸ್ವಾಮಿ, ರಾಮರೆಡ್ಡಿ, ಸಣ್ಣಸೂರಜ್ಜ,ಬಿ. ಮಹೇಶ್ವರಪ್ಪ, ಗೌಸ್ ಪೀರ್, ಪಲ್ಲಾಗಟ್ಟೆ ಶೇಖರಪ್ಪ, ರುದ್ರೇಶ್, ಗ್ರಾ.ಪಂ.ಸದಸ್ಯರಾದ ನಾಗರಾಜ್, ಕರಿಬಸಮ್ಮ, ಚೌಡಮ್ಮ, ತಿಪ್ಪಕ್ಕ, ಗುರುಸ್ವಾಮಿ ಮುಂತಾದವರು ಇದ್ದರು.

## ಹೆಚ್.ಎನ್. ಶಿವಕುಮಾರ್ ಅವರ 'ತಂತುನಾನೇನ' ಕಾದಂಬರಿ ಬಿಡುಗಡೆ



ದಾವಣಗೆರೆ, ಅ. 10- ಸಾಮಾಜಿಕ ಸೇವಾ ಕಾರ್ಯಕರ್ತರೂ, ಪ್ರತಿಭಾನ್ವಿತ ಸಾಹಿತಿಗಳೂ ಆಗಿರುವ ಹೆಚ್.ಎನ್. ಶಿವಕುಮಾರ್ ಅವರು ರಚಿಸಿರುವ 'ತಂತುನಾನೇನ' ಕಾದಂಬರಿ ಲೋಕಾರ್ಪಣೆಗೊಂಡಿತು.

ನಗರದ ಕರ್ನಾಟಕ ರಂಗ ಪರಿಷತ್ (ಬೆಂಗಳೂರು) ಶ್ರೀ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ಕುವೆಂಪು ಕನ್ನಡ ಭವನದಲ್ಲಿ ಸಿಜಿಕೆ ಪ್ರಶಸ್ತಿ ಪ್ರದಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದ ಸಂದರ್ಭದಲ್ಲಿ ಪಾಂಡೋಮಟ್ಟಿ ಕಮ್ಮತ್ತಹಳ್ಳಿ ವಿರಕ್ತಮಠದ ಶ್ರೀ ಗುರುಬಸವ ಮಹಾಸ್ವಾಮೀಜಿ 'ತಂತುನಾನೇನ' ಕಾದಂಬರಿ ಬಿಡುಗಡೆ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ವಿದ್ಯಾನಗರ ಲಯನ್ಸ್ ಕ್ಲಬ್ ಅಧ್ಯಕ್ಷ ಸಿ.ಹೆಚ್. ದೇವರಾಜು, ಇನ್‌ಸೈಟ್ ಐಎಎಸ್ ಸಂಸ್ಥೆ ಸಂಸ್ಥಾಪಕ ಹಾಗೂ ನಿರ್ದೇಶಕ ಜಿ.ಬಿ. ವಿನಯ್‌ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಕರ್ನಾಟಕ ರಂಗ ಪರಿಷತ್ ಉಪಾಧ್ಯಕ್ಷ ಎನ್. ಎಸ್. ರಾಜು, ಹಿರಿಯ ಸಾಹಿತಿ ಶ್ರೀಮತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

# ಜನತಾ ದರ್ಶನ ಹೋಬಳಿ ಮಟ್ಟಕ್ಕೂ ವಿಸ್ತರಣೆ

ಹರಪನಹಳ್ಳಿ, ಅ. 10 - ಸಾರ್ವಜನಿಕರ ಅನುಕೂಲಕ್ಕಾಗಿ ಆರಂಭವಾಗಿರುವ ಜನತಾ ದರ್ಶನ ಕಾರ್ಯಕ್ರಮವನ್ನು ಮುಂದಿನ ದಿನಗಳಲ್ಲಿ ಹೋಬಳಿ ಮಟ್ಟಕ್ಕೂ ವಿಸ್ತರಣೆ ಮಾಡಲಾಗುವುದು ಎಂದು ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದ ಆವರಣದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿ ಸಹಯೋಗದಲ್ಲಿ ಆಯೋಜಿಸಿದ್ದ ಜನತಾ ದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಆರಂಭಿಸಿರುವ ಜನತಾ ದರ್ಶನ ಕಾರ್ಯಕ್ರಮ ರಾಜ್ಯದಿಂದ, ಜಿಲ್ಲೆಯಿಂದ ಇದೀಗ ತಾಲ್ಲೂಕು ಮಟ್ಟಕ್ಕೂ ಆರಂಭವಾಗಿರುವುದರಿಂದ ಬಡವರಿಗೂ, ಕೂಲಿಕಾರರಿಗೆ ಹಾಗೂ ರೈತರಿಗೆ ಅನುಕೂಲವಾಗಿದೆ ಎಂದರು.

ತಾಲ್ಲೂಕಿನ ಸಮಸ್ಯೆಗಳನ್ನು ಬಗೆಹರಿಸಲು ಜಿಲ್ಲಾಡಳಿತವನ್ನು ಕರೆ ತರಲಾಗಿದೆ. ಆದರೂ ಸಹ ಹರಪನಹಳ್ಳಿ ತಾಲ್ಲೂಕಿನ ಕೊನೆಯ ಗ್ರಾಮವಾದ ಗರ್ಭಗುಡಿ, ಹಲುವಾಗಲು ಜಿಲ್ಲಾ ಕೇಂದ್ರ ಹೊಸಪೇಟೆಗೆ ಹೋಗಲು 120 ಕಿ.ಮಿ. ದೂರವಾಗಲಿದೆ.

ಜನರಿಗೆ ಹೋಗಿ ಬರಲು ಸಮಸ್ಯೆಗಳಾಗುತ್ತಿದ್ದವು. ಆದರೆ ಇಂತಹ ಜನತಾ ದರ್ಶನದಿಂದ ಇಲ್ಲಿಯೇ ಸಾಧ್ಯವಾದಷ್ಟು ಪರಿಹಾರ ಸಿಗಲಿದೆ. ಇಂತಹ ಕಾರ್ಯಕ್ರಮವನ್ನು ಮುಂದಿನ ದಿನಗಳಲ್ಲಿ ಹೋಬಳಿ ಮಟ್ಟದಲ್ಲಿ ಆಯೋಜಿಸಲು ಪ್ರಯತ್ನಿಸಲಾಗುವುದು ಎಂದು ಹೇಳಿದರು.



**ಹರಪನಹಳ್ಳಿ ಜನತಾ ದರ್ಶನದಲ್ಲಿ ವಿವಿಧ ಇಲಾಖೆಗಳ 413 ಕ್ಕೂ ಹೆಚ್ಚು ಅರ್ಜಿಗಳನ್ನು ಸ್ವೀಕರಿಸಿದ ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್**

ಜನತಾ ದರ್ಶನದಲ್ಲಿ ಸಾರ್ವಜನಿಕರಿಂದ ಕಂದಾಯ-7, ಶಿಕ್ಷಣ-3, ಸಮಾಜ ಕಲ್ಯಾಣ -1, ಮಹಿಳಾ ಮತ್ತು ಮಕ್ಕಳ ಕಲ್ಯಾಣ- 2, ಬೆಸ್ಕಾಂ -2, ವಸತಿ ಇಲಾಖೆ 13, ಪಂಚಾಯತ್ ರಾಜ್ – 11, ಗ್ರಾಮೀಣಾಭಿವೃದ್ಧಿ ಇಲಾಖೆ 28, ಪ್ರವಾಸ-2, ಸಾರಿಗೆ -7, ಕೌಶಲ್ಯಭಿವೃದ್ಧಿ-1, ಕಾರ್ಮಿಕ 2, ಸೇರಿದಂತೆ ಇತರೆ ಇಲಾಖೆಗಳಿಂದ ಒಟ್ಟು 413ಕ್ಕೂ ಹೆಚ್ಚು ಅರ್ಜಿಗಳನ್ನು ಸ್ವೀಕರಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ, ಜಿ.ಪಂ. ಸಿಇಓ ಸದಾಶಿವಪ್ರಭು, ಜಿಲ್ಲಾ ಉಪ ಅರಣ್ಯಾ ಸಂರಕ್ಷಣಾಧಿಕಾರಿ ಅರ್ಸಾಲಾನ್, ಉಪವಿಭಾಗಾಧಿಕಾರಿ ಟಿ.ವಿ. ಪ್ರಕಾಶ್, ಡಿವೈಎಸ್‌ಪಿ ವೆಂಕಟಪ್ಪನಾಯಕ, ತಹಶೀಲ್ದಾರ ಗಿರೀಶಬಾಬು, ಸಿಪಿಐ ಎಂ. ನಾಗರಾಜ ಕಮ್ಮಾರ, ಡಿಡಿಪಿಐ ಯುವರಾಜನಾಯ್ಕ, ಜಿಲ್ಲಾ ಆರೋಗ್ಯಾಧಿಕಾರಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಮಂಜುನಾಥ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಶಾಶು ಷಂಶುದ್ದಿನ್, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ರೇಣುಕಾದೇವಿ, ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ, ಎಇಇ ನಾಗಪ್ಪ, ಎಡಿಎಲ್‌ಆರ್ ಬಳ್ಳಾರಪ್ಪ ಸೇರಿದಂತೆ ಇತರರು ಇದ್ದರು.




ಹಿಂದೂ ಮಹಾ ಗಣಪತಿ ಟ್ರಸ್ಟ್ ವತಿಯಿಂದ ದಾವಣಗೆರೆ ನಗರದ ಹೈಸ್ಕೂಲ್ ಮೈದಾನದಲ್ಲಿ ಪ್ರತಿಷ್ಠಾಪಿಸಲಾಗಿರುವ ಹಿಂದೂ ಮಹಾಗಣಪತಿ ವಿಸರ್ಜನೆಯು ಇದೇ ದಿನಾಂಕ 14ರಂದು ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಮಂಗಳವಾರ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಜನರು ಸರದಿಯಲ್ಲಿ ನಿಂತು ಪ್ರಸಾದ ಸ್ವೀಕರಿಸಿದರು.

# ಶೇ.80ರಷ್ಟು ಮಾನಸಿಕ ಅಸ್ವಸ್ಥರು ನೆರವು ಪಡೆಯುತ್ತಿಲ್ಲ

**ಅರಿವಿನ ಕೊರತೆ, ನಿರ್ಲಕ್ಷ್ಯ ಹಾಗೂ ಕಳಂಕದ ಭೀತಿಯೇ ಕಾರಣ**

**ದೇಶದಲ್ಲಿ ಮನೋವೈದ್ಯರ ಕೊರತೆ, ದೊಡ್ಡ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರ ಮೇಲೆ ಹೆಚ್ಚಿನ ಒತ್ತಡ**

ನವದೆಹಲಿ, ಅ. 10 – ಅರಿವಿನ ಕೊರತೆ, ನಿರ್ಲಕ್ಷ್ಯ ಹಾಗೂ ಕಳಂಕದ ಕಾರಣದಿಂದ ದೇಶದ ಶೇ.80ರಷ್ಟು ಮಾನಸಿಕ ಅಸ್ವಸ್ಥರು ನೆರವು ಪಡೆಯುತ್ತಿಲ್ಲ ಎಂದು ವೈದ್ಯರು ತಿಳಿಸಿದ್ದಾರೆ.

ದೈಹಿಕ ಹಾಗೂ ಮಾನಸಿಕ ಆರೋಗ್ಯಗಳೆರಡೂ ಶೈಕ್ಷಣಿಕ ವ್ಯವಸ್ಥೆಯ ಭಾಗವಾಗಬೇಕು. ಹಲವಾರು ರೀತಿಯ ಮಾನಸಿಕ ವಿಷಯಗಳನ್ನು ಎದುರಿಸುತ್ತಿರುವವರು ಸರಿಯಾದ ಸಮಯದಲ್ಲಿ ನೆರವು ಪಡೆಯುವಂತಾಗಬೇಕು ಎಂದು ವೈದ್ಯರು ಹೇಳಿದ್ದಾರೆ.

ಮಾನಸಿಕ ಅಸ್ವಸ್ಥತೆ ವಿಷಯಗಳ ಕುರಿತು ಅರಿವು ಕಡಿಮೆ ಇದೆ. ಇದರಿಂದಾಗಿ ಸಾಕಷ್ಟು ಜನರು ಚಿಕಿತ್ಸೆಗೆ ಒಳಪಡುತ್ತಿಲ್ಲ ಎಂದು ಎ.ಐ.ಐ.ಎಂ.ಎಸ್. ಮಾನಸಿಕ ವಿಭಾಗದ ಪ್ರಾಧ್ಯಾಪಕ ಡಾ. ನಂದ ಕುಮಾರ್ ಹೇಳಿದ್ದಾರೆ.

ಅಸ್ವಸ್ಥತೆಯ ಅರಿವಾಗದೇ ಇದ್ದರೆ ಚಿಕಿತ್ಸೆ ಪಡೆಯಲು ಸಾಧ್ಯವಾಗುವುದಿಲ್ಲ. ಲಕ್ಷಣಗಳನ್ನು ಆರಂಭದಲ್ಲೇ ಗುರುತಿಸದ ಕಾರಣ ಪರಿಸ್ಥಿತಿ ನಂತರದಲ್ಲಿ ಸಂಕೀರ್ಣವಾಗುತ್ತದೆ ಎಂದು ನಂದ ಕುಮಾರ್ ತಿಳಿಸಿದ್ದಾರೆ.

ನಿದ್ರಾಹೀನತೆ, ಲಘು ಉದ್ವಿಗ್ನತೆ ಹಾಗೂ ಖಿನ್ನತೆಗಳಂತಹ ಸಣ್ಣ ಸಮಸ್ಯೆಗಳಿಂದ ಹಿಡಿದು ಹಲವಾರು ಮಾನಸಿಕ ಗಂಭೀರ ಸಮಸ್ಯೆಗಳಿವೆ. ಹೀಗಾಗಿ ನಿರ್ದಿಷ್ಟವಾಗಿ ಗುರುತಿಸುವುದು ರೋಗಿಗಳಿಗೆ ಕಷ್ಟವಾಗುತ್ತದೆ ಎಂದವರು ಹೇಳಿದ್ದಾರೆ.

ಯುವಕರಲ್ಲಿನ ಮಾನಸಿಕ ಅನಾರೋಗ್ಯವನ್ನು ಸಾಕಷ್ಟು ಬಾರಿ ಹದಿಹರೆಯದ ಸಮಸ್ಯೆ ಎಂದು ಭಾವಿಸಿ ನಿರ್ಲಕ್ಷಿಸಲಾಗುತ್ತದೆ. ಅಲ್ಲದೇ, ಮಾನಸಿಕ ಅಸ್ವಸ್ಥತೆಯನ್ನು ಕಳಂಕ ಎಂದು ಭಾವಿಸಲಾಗುತ್ತದೆ. ಇದರಿಂದಾಗಿ ಜನರು ಚಿಕಿತ್ಸೆಗೆ ಹಿಂಜರಿಯುತ್ತಾರೆ ಎಂದವರು ಹೇಳಿದ್ದಾರೆ.

ಮಾನಸಿಕ ಅಸ್ವಸ್ಥತೆಯ ಚಿಕಿತ್ಸೆಗೆ ಸಾಕಷ್ಟು ಸಮಯ ಹಾಗೂ ಹಣ ಬೇಕಾಗುತ್ತದೆ. ಈ ಕಾರಣಕ್ಕಾಗಿಯೂ ಜನ ಚಿಕಿತ್ಸೆ ಪಡೆಯಲು ಹಿಂಜರಿಯುತ್ತಾರೆ ಎಂದು ಮನೋವೈದ್ಯೆ ಸೃಷ್ಟಿ ಆಸ್ಥಾನಾ ತಿಳಿಸಿದ್ದಾರೆ.

ಖಾಸಗಿ ವಲಯದಲ್ಲಿ ಚಿಕಿತ್ಸೆ ದುಬಾರಿಯಾಗಿದೆ. ಸರ್ಕಾರಿ ವ್ಯವಸ್ಥೆಯಲ್ಲಿ ಸಾಕಷ್ಟು ಜನಸಂದಣಿ ಇರುತ್ತದೆ. ಜೊತೆಗೆ ಈ ವಲಯದಲ್ಲಿ ವೃತ್ತಿಪರರ ಕೊರತೆಯೂ ಇದೆ ಎಂದು ಆಸ್ಥಾನಾ ತಿಳಿಸಿದ್ದಾರೆ.

2016ರಲ್ಲಿ ದೇಶದಲ್ಲಿ ಮನೋವೈದ್ಯರ ಸಂಖ್ಯೆ 6 ಸಾವಿರ ಆಗಿತ್ತು. ಅದು 2023ರ ವೇಳೆಗೆ 9 ಸಾವಿರಕ್ಕೆ ಹೆಚ್ಚಾಗಿದೆ. ಇದೇ ವೇಳೆ ಮಾನಸಿಕ ಅನಾರೋಗ್ಯದ ಸಮಸ್ಯೆಗಳೂ ಹೆಚ್ಚಾಗಿವೆ ಎಂದು ಡಾ. ಕುಮಾರ್ ತಿಳಿಸಿದ್ದಾರೆ.

ಎನ್.ಸಿ.ಆರ್.ಬಿ. ವರದಿಯ ಪ್ರಕಾರ 2016ರಲ್ಲಿ 1.3 ಲಕ್ಷದಷ್ಟಿದ್ದ ಆತ್ಮಹತ್ಯೆ ಪ್ರಮಾಣ 2021ರ ವೇಳೆಗೆ 1.64 ಲಕ್ಷಕ್ಕೆ ಹೆಚ್ಚಾಗಿದೆ.

ಅಲ್ಲದೇ ಮನೋವೈದ್ಯರೂ ಸಹ ಕೆಲಸದ ಒತ್ತಡದಿಂದ ಬಳಲುತ್ತಿದ್ದಾರೆ. ದೊಡ್ಡ ಆಸ್ಪತ್ರೆಗಳಲ್ಲಿರುವ ಶೇ.80ರಷ್ಟು ಮನೋವೈದ್ಯರು ಹಲವಾರು ರೀತಿಯ ಒತ್ತಡದಿಂದ ಬಳಲುತ್ತಿದ್ದಾರೆ. ಕೆಲವರು ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೇವಲ ಮನೋವೈದ್ಯರ ಸಂಖ್ಯೆ ಹೆಚ್ಚಿಸುವುದರಿಂದ ವಿದ್ಯಾರ್ಥಿಗಳಲ್ಲಿನ ಆತ್ಮಹತ್ಯೆ ಸಂಖ್ಯೆ ಕಡಿಮೆ ಮಾಡಲಾಗದು. ವಿದ್ಯಾರ್ಥಿಗಳಲ್ಲಿ ದೈಹಿಕ, ಮಾನಸಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಹೆಚ್ಚಿಸಬೇಕಿದೆ ಎಂದು ಆಸ್ಥಾನಾ ಅಭಿಪ್ರಾಯ ಪಟ್ಟಿದ್ದಾರೆ.

ಕೋಟಾದಲ್ಲಿರುವ ತರಬೇತಿ ಸಂಸ್ಥೆಗಳು, ಐಐಟಿ, ಐಐಎಂ ಹಾಗೂ ವೈದ್ಯಕೀಯ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ವರದಿಗಳನ್ನು ನಾವು ಆಗಾಗ ನೋಡುತ್ತಿರುತ್ತೇವೆ. ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಸಮಗ್ರ ಯೋಜನೆಯ ಅಗತ್ಯವಿದೆ ಎಂದವರು ತಿಳಿಸಿದ್ದಾರೆ.

ಮಾನಸಿಕ ಹಾಗೂ ದೈಹಿಕ ಆರೋಗ್ಯಗಳನ್ನು ಪ್ರತ್ಯೇಕವಾಗಿ ನೋಡಲಾಗದು. ಇವೆರಡೂ ಬೆಸೆದುಕೊಂಡಿರುತ್ತವೆ. ಹೀಗಾಗಿ ಶಾಲೆ ಹಾಗೂ ಕಾಲೇಜು ಹಂತಗಳಲ್ಲಿ ಹೆಚ್ಚಿನ ಅರಿವು ಮೂಡಿಸಬೇಕಿದೆ. ಶಿಕ್ಷಕರಲ್ಲಿ ಹೆಚ್ಚಿನ ಸಂವೇದನೆ ಮೂಡಿಸಬೇಕಿದೆ ಎಂದು ಡಾ. ಕುಮಾರ್ ಅಭಿಪ್ರಾಯ ಪಟ್ಟಿದ್ದಾರೆ.

## ಎಲ್ಲಾ ವಿಷಯಗಳ ಮೇಲೆ ಸೂಕ್ಷ್ಮ ನಿಗಾ ಅಸಾಧ್ಯ

### ಸಿಜೆಐ ಡಿ.ವೈ. ಚಂದ್ರಚೂಡ್

ನವದೆಹಲಿ, ಅ. 10 – ಗಮನ ಸೆಳೆಯಲು ಅರ್ಹತೆ ಹೊಂದಿರುವ ಸಾವಿರಾರು ವಿಷಯಗಳು ಇರಬಹುದು. ಆದರೆ, ಅವೆಲ್ಲವನ್ನೂ ವಿಚಾರಣೆಗೆ ಒಳಪಡಿಸಿ ಸುಪ್ರೀಂ ಕೋರ್ಟ್ ಅನ್ನು ನಿಷ್ಕ್ರಿಯಗೊಳಿಸಲಾಗದು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿ.ಜೆ.ಐ) ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ.

ಕೇರಳದಲ್ಲಿ ವಶದಲ್ಲಿರುವ ಆನೆಗಳ ಸಾವಿನ ಕುರಿತು ದಾಖಲಾಗಿದ್ದ ಅರ್ಜಿಯ ಮಧ್ಯಂತರ ವಿಚಾರಣೆಗೆ ನಿರಾಕರಿಸುವಾಗ ನ್ಯಾಯಮೂರ್ತಿ ಈ ನಿಲುವು ತಳೆದಿದ್ದಾರೆ. ಇದು ಸ್ಥಳೀಯ ವಿಷಯವಾಗಿದೆ. ಈ ಬಗ್ಗೆ ಹೈಕೋರ್ಟ್ ವಿಚಾರಣೆ ನಡೆಸಬಹುದು. ಅವರೇನಾದರೂ ತಪ್ಪು ಮಾಡಿದರೆ, ಅದನ್ನು ಸರಿಪಡಿಸಲು ನಾವಿದ್ದೇವೆ ಎಂದು ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ ಪರ್ಡಿವಾಲ ಹಾಗೂ ನ್ಯಾಯಮೂರ್ತಿ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ಹೇಳಿದೆ.

ದೇಶದಲ್ಲಿ ಸುಪ್ರೀಂ ಕೋರ್ಟ್ ಪಾತ್ರ ಏನು? ದೇಶದಲ್ಲಿರುವ ಎಲ್ಲಾ ವಿಷಯಗಳನ್ನು ನಾವು ಸೂಕ್ಷ್ಮ ನಿಗಾ ವಹಿಸಲು ಸಾಧ್ಯವಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.


ಕೇರಳದಲ್ಲಿ ನಿರ್ಲಕ್ಷ್ಯದ ಕಾರಣದಿಂದಾಗಿ 2019ರಿಂದ 2022ರ ನಡುವೆ ವಶದಲ್ಲಿದ್ದ 135 ಆನೆಗಳು ಸಾವನ್ನಪ್ಪಿವೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು.

## ಮಲೇಬೆನ್ನೂರು : ಇಂದು ವಿದ್ಯುತ್ ವ್ಯತ್ಯಯ

ಮಲೇಬೆನ್ನೂರು ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಸಹಾಯಕ ಇಂಜಿನಿಯರ್ ಚೇತನ್ ತಿಳಿಸಿದ್ದಾರೆ.


॥ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**




ದಾವಣಗೆರೆ ಸಿಟಿ, ಕುವೆಂಪುನಗರ ವಾಸಿ
**ಶ್ರೀಮತಿ ನಿರ್ಮಲ ಕೆ.ಎ. ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 07.10.2023ನೇ ಶನಿವಾರ ರಾತ್ರಿ 11.40 ಕ್ಕೆ
ನನ್ನ ಪೂಜ್ಯ ಪತಿಯವರಾದ
**ಶ್ರೀ ಆಲದಹಳ್ಳಿ ಕೊಟ್ರೇಶಪ್ಪ**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ : 11.10.2023ನೇ ಬುಧವಾರ ಬೆಳಿಗ್ಗೆ 11.30ಕ್ಕೆ
ಮಾಗಾನಹಳ್ಳಿ ಬಸಮ್ಮ, ಬಸಪ್ಪ ಕಲ್ಯಾಣ ಮಂಟಪ ಬಕ್ಕೇಶ್ವರ ದೇವಸ್ಥಾನ ಆವರಣ, ಚೌಕಿಪೇಟೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಮೃತರ ಧರ್ಮಪತ್ನಿ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಆಲದಹಳ್ಳಿ ಸಹೋದರರು ಹಾಗೂ ಬಂಧು-ಮಿತ್ರರು. ಮೊ : 96635 56554, 9481217250

**ಶ್ರೀ ಆಲದಹಳ್ಳಿ ಕೊಟ್ರೇಶಪ್ಪ ಅಂಡ್ ಸನ್ಸ್,** ಎನ್.ಆರ್. ರೋಡ್, ದಾವಣಗೆರೆ.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.



**ನಮ್ಮ ಕ್ಯಾನ್ಸರ್ ಮತ್ತು ಕಿಡ್ನಿ ಸ್ಪೆಷಲಿಸ್ಟ್‌ರಿಂದ ಸಮಾಲೋಚನೆ**

ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ

• ಮೆಡಿಕಲ್ ಆಂಕೊಲಾಜಿಸ್ಟ್
**ಡಾ॥ ನಮ್ರತಾ ಉಡುಪ:** ಪ್ರತಿ ಗುರುವಾರ
**ಡಾ॥ ಈರಪ್ಪ ಮದಭಾವಿ:** ಪ್ರತಿ ಶನಿವಾರ

• ಕಿಡ್ನಿ (ಮೂತ್ರಪಿಂಡ ಶಾಸ್ತ್ರಜ್ಞರು) ತಜ್ಞರು
**ಡಾ॥ ಹರೀಶ್ ಕೆ ಆರ್:** ಪ್ರತಿ ಗುರುವಾರ

• ಸರ್ಜಿಕಲ್ ಆಂಕೊಲಾಜಿಸ್ಟ್
**ಡಾ॥ ನಿಶ್ಚಲ್** – ಸೋಮವಾರದಿಂದ ಶನಿವಾರದ ವರೆಗೆ

• ರೇಡಿಯೇಷನ್ ಆಂಕೊಲಾಜಿಸ್ಟ್
**ಡಾ॥ ಶರಶ್ಚಂದ್ರ** – ಪ್ರತಿ ತಿಂಗಳ 2ನೇ ಮತ್ತು 4ನೇ ಗುರುವಾರ




ಮಾಗನೂರು ಬಸಪ್ಪ ರಸ್ತೆ, ತರಳಬಾಳು ಲೇಔಟ್, ದಾವಣಗೆರೆ 08192-260111 / 7022260111